
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್


05 ಆಗಸ್ಟ್ 2015 ಪುಟ 20 ರೂ. 15/-

ಲಘುಪ್ರಬಂಧ

ಅಪ್ಪ ಎಂಬ ಬೇತಾಳ



ರಾಜ್ಯವನ್ನೇ ಕಕ್ಕಾಬಿಕ್ಕಿ ಮಾಡಿರುವ ರಂಗಿತರಂಗ



ಮಣಿಪಾಲ ಪೈಗಳ ಲ್ಯಾಂಡ್ ಲೂಟಿ




ದಾವಣಗೆರೆ-ಚಿಕ್ಕಮಗಳೂರು

KSRTC ಯಲ್ಲಿ ಖದೀಮ ಖದ್ದೂಸ್



ಬಾದಾಮಿ ಶಾಸಕನ ಬಾನ್ಗಡಿ




ನಮ್ಮ ಹಳ್ಳಿಗಳಿಗೆ 24 ಗಂಟೆ ವಿದ್ಯುತ್ ಬೇಕೇ

'ನ್ಯಾಯಯುತ' ಬೇಡಿಕೆಗಳನ್ನು ಜನರು ಮುಂದಿಟ್ಟಾಗಲೂ, ಅದನ್ನು ಈಡೇರಿಸುವುದು ಸಾಧ್ಯವೇ ಎಂಬ ಪ್ರಶ್ನೆ ಕೆಲವೊಮ್ಮೆ ಉದ್ಭವಿಸುತ್ತದೆ. ಈ ಪ್ರಶ್ನೆ ಉದ್ಭವಿಸುವುದು ಸರ್ಕಾರಕ್ಕಲ್ಲ. ಏಕೆಂದರೆ, ಅವರ ಪಾಲಿಗೆ ಜನಸಾಮಾನ್ಯರ ಬಹುತೇಕ ಒತ್ತಾಯಗಳನ್ನು ಈಡೇರಿಸುವುದು ಸಾಧ್ಯವಿರುವುದಿಲ್ಲ. ಒಂದೋ ಅವರ ಹತ್ತಿರ ಹಣ ಇರುವುದಿಲ್ಲ; ಇಲ್ಲವೇ ಅದು 'ಪಾಲಿಸಿ ಮ್ಯಾಟರ್' ಆಗಿರುತ್ತದೆ. ಅದರ ಅರ್ಥ ಸರ್ಕಾರದ ನೀತಿಯೇ ಜನರ ವಿರುದ್ಧ ಇರುತ್ತದೆ. ಆದರೆ, ಇಲ್ಲಿ ಹೇಳಲು ಹೊರಟಿರುವುದು ಅದಲ್ಲ. ನಾಗರಿಕ ಸಮಾಜದ ಮುಂದೆಯೇ ಈ ಪ್ರಶ್ನೆ ಬರಲು ಸಾಧ್ಯವಿದೆ. ಉದಾಹರಣೆಗೆ ವಿದ್ಯುತ್ತಿನ ವಿಚಾರವನ್ನೇ ತೆಗೆದುಕೊಳ್ಳಿ.

ಹಳ್ಳಿಗಳಿಗೆ 24 ಗಂಟೆಗಳ ಕಾಲ ವಿದ್ಯುತ್ ನೀಡಬೇಕು ಎನ್ನುವ ಒತ್ತಾಯವನ್ನು ಆಗಾಗ್ಗೆ ಕೇಳುತ್ತಿರುತ್ತೇವೆ. ಹೀಗೆ ಕೇಳುತ್ತಿರುವವರು ಮನೆ ಬಳಕೆಗೆ 24 ಗಂಟೆಗಳ ಕಾಲ ವಿದ್ಯುತ್ ಕೇಳುತ್ತಿದ್ದಾರಾ ಅಥವಾ ಪಂಪ್‌ಸೆಟ್‌ಗಳಿಗೆ ಕೇಳುತ್ತಿದ್ದಾರಾ ಎಂಬುದು ಕೆಲವು ಸಾರಿ ಸ್ಪಷ್ಟವಾಗಿರುವುದಿಲ್ಲ. ಒಂದು ವೇಳೆ ಈ ಒತ್ತಾಯದಲ್ಲಿ 24 ಗಂಟೆ 3 ಫೇಸ್ ಕರೆಂಟ್ ಕೊಡಿ ಎನ್ನುವುದು ಇದ್ದರೆ, ಅದರ ಅರ್ಥ ಅವರು ಪಂಪ್‌ಸೆಟ್‌ಗಳಿಗೇ ಕೇಳುತ್ತಿದ್ದಾರೆ ಎಂಬುದು ಸ್ಪಷ್ಟ. ಇದು ಕಾರ್ಯಸಾಧುವೇ ಎನ್ನುವುದೇ ಪ್ರಶ್ನೆ.

ಇಂದು ನಮ್ಮ ವಿದ್ಯುತ್ ಸರಬರಾಜಿನಲ್ಲಿ ಎದ್ದು ಕಾಣುವ ತಾರತಮ್ಯವಿದೆ. ಹಳ್ಳಿಗಳಿಗೆ ಕೇವಲ 6 ಗಂಟೆಗಳ ಕಾಲ ವಿದ್ಯುತ್ ಕೊಡುವಾಗಲೂ ನಗರ ಪ್ರದೇಶಗಳಿಗೆ 24 ಗಂಟೆ ವಿದ್ಯುತ್ ನೀಡಲಾಗುತ್ತಿರುತ್ತದೆ. ಇದಕ್ಕೆ ಕೊಡಲಾಗುವ ಕಾರಣ, ನಮ್ಮಲ್ಲಿ ಅಷ್ಟು ವಿದ್ಯುತ್ತೇ ಇಲ್ಲ ಎಂಬುದಾಗಿದೆ. ಇಲ್ಲದಿದ್ದಲ್ಲಿ ನಗರಗಳಿಗೆ ಕೊಡಲು ವಿದ್ಯುತ್ ಎಲ್ಲಿಂದ ಬರುತ್ತದೆ ಎಂಬುದು ಪ್ರಶ್ನೆ. ನಗರಗಳ ಬಳಕೆಗೆ ಮಾತ್ರವಲ್ಲ, ನಗರಗಳಲ್ಲಿ ಬೇಕಾಬಿಟ್ಟಿ ಬಳಕೆಗೆ, ನಗರಗಳಲ್ಲಿ ಐಷಾರಾಮಕ್ಕಾಗಿ ಬಳಸಲೂ ಈ ವಿದ್ಯುತ್ ವ್ಯಯವಾಗುತ್ತಿದೆಯಲ್ಲ ಎಂಬ ಪ್ರಶ್ನೆಗೆ ಇದುವರೆಗೆ ಉತ್ತರ ಬಂದಿಲ್ಲ. ಮನೆಮನೆಯಲ್ಲೂ ಸಿಎಫ್‌ಎಲ್ ಬಲ್ಬ್ ಬಳಸಿ ಎಂದು 'ಜಾಗೃತಿ' ಮೂಡಿಸುವ ಸಂಬಂಧಪಟ್ಟ ಇಲಾಖೆಗಳು ಇಂತಹ ಅಪವ್ಯಯದ ಕುರಿತು ಅರಿವನ್ನೂ ಮೂಡಿಸಿಲ್ಲ; ಎಚ್ಚರಿಕೆಯನ್ನೂ ಕೊಟ್ಟಿಲ್ಲ. ಏಕೆಂದರೆ, ಈ ರೀತಿ ಬಳಕೆ ಮಾಡುವವರು ಮೇಲಿನ ವರ್ಗಕ್ಕೆ ಸೇರಿದವರು.

ಇರಲಿ, ಅಪವ್ಯಯದ ವಿಷಯವನ್ನು ಪಕ್ಕಕ್ಕಿಡೋಣ. ನಗರಗಳಲ್ಲಿ ಇಂಧನದ ಅಗತ್ಯ ಹಳ್ಳಿಗಳಲ್ಲಿನ ಅಗತ್ಯಕ್ಕಿಂತ ಒಂದು ಮಟ್ಟಿಗೆ ಭಿನ್ನವಾಗಿರುತ್ತದೆ. ಇಲ್ಲಿನ ಜನಜೀವನವೇ ಮನೆಯಲ್ಲಿರಲಿ ಅಥವಾ ಹೊರಗಿನ ಸಂಚಾರಕ್ಕಿರಲಿ ಒಂದಲ್ಲ ಒಂದು ಬಗೆಯ ಇಂಧನದ ಮೇಲೆ ಅವಲಂಬಿತವಾಗಿದೆ. ಇದು ಈ ರೀತಿಯೇ ಇರಬೇಕಿತ್ತೇ ಎಂಬ ಪ್ರಶ್ನೆಯನ್ನು ಪ್ರತ್ಯೇಕವಾಗಿ ಚರ್ಚಿಸಬೇಕು. ಆದರೆ ಹೀಗೆ ಇದೆ. ಒಂದಿಡೀ ಬದುಕಿನ ರೀತಿಯನ್ನೇ ಬದಲಿಸುವ, ಹೊಸ ರೀತಿಯ ಸಂಸ್ಕೃತಿಯನ್ನು ಬೆಳೆಸುವ ಆಂದೋಲನವಾಗದೇ ಇದು ಸದ್ಯಕ್ಕೆ ಬದಲಾಗುವ ವಿಚಾರವಲ್ಲ. ಹೀಗಾಗಿ ಸದ್ಬಳಕೆಗೆ 24 ಗಂಟೆ ವಿದ್ಯುತ್ ನಗರಗಳಿಗೆ ಬೇಕು ಎನ್ನುವುದನ್ನು ಸದ್ಯಕ್ಕೆ ಒಪ್ಪಿಕೊಳ್ಳೋಣ. ಮರೆಯಬಾರದ ಒಂದು ಸಂಗತಿಯೆಂದರೆ, ಇದರ ಹಿಂದೆ ಜನಸಾಮಾನ್ಯರ ಅಗತ್ಯದ



ಸಂಗತಿ ಒಂದು ಮಟ್ಟಕ್ಕಿದ್ದರೆ, ಅದರ ಎಷ್ಟೋ ಪಟ್ಟು ಹೆಚ್ಚು ಉದ್ದಿಮೆದಾರರ ಅಗತ್ಯದ ಸಂಗತಿಯೂ ಇದೆ. ಏಕೆಂದರೆ ವಿದ್ಯುತ್ ಇಲ್ಲದಿದ್ದರೆ ಬಳಸಲಾಗದ ಸರಕುಗಳು ಮತ್ತು ಸೇವೆಗಳ ಹಿಂದೆ ಲಕ್ಷ ಕೋಟಿಗಳ ವಹಿವಾಟಿದೆ. ಹೀಗಾಗಿಯೂ ಗ್ರಾಹಕರ ಅನುಕೂಲ ಎಂದು ಹೇಳಿದಾಗಲೆಲ್ಲಾ, ಅದರ ಹಿಂದೆ ಉದ್ದಿಮೆದಾರರ ಲಾಭಕೋರತನವೂ ಇರುತ್ತದೆ.

ನಗರಗಳು ಸೃಷ್ಟಿಸುವ ಸಂಸ್ಕೃತಿ, ಬದುಕಿನ ರೀತಿಗಳೇ ನಿಧಾನಕ್ಕೆ ಗ್ರಾಮೀಣ ಭಾಗಕ್ಕೂ ತೊಟ್ಟಿಕ್ಕುತ್ತವೆ. ಅದೇ ಮಾದರಿಯ ಬದುಕನ್ನು ಅಲ್ಲಿಯೂ ನಕಲು ಮಾಡಲಾಗುತ್ತದೆ. ಹೀಗಾಗಿ ಅಲ್ಲಿಗೂ ಇಂಧನದ ಅಗತ್ಯ ಹೆಚ್ಚೆಚ್ಚು ಬೀಳಲಾರಂಭಿಸಿದೆ. ಕೃಷಿಕರ ಪಂಪ್‌ಸೆಟ್‌ಗಳಿಗೆ ನಿರಂತರ ವಿದ್ಯುತ್ ಪೂರೈಸದ ಸರ್ಕಾರಗಳು, ಮನೆ ಬಳಕೆಗೆ 24 ಗಂಟೆಗಳ ಕಾಲ 'ನಿರಂತರ ಜ್ಯೋತಿ'ಯನ್ನು ನೀಡುವ ಯೋಜನೆ ಜಾರಿ ಮಾಡುತ್ತಿರುವುದರ ಹಿಂದೆ ಈ ಅಂಶವೂ ಕೆಲಸ ಮಾಡಿದ್ದೆ. ಆಧುನಿಕ ಉದ್ದಿಮೆಗಳಿಗೆ ಹಳ್ಳಿಗಳಲ್ಲೂ ಗ್ರಾಹಕರು ಸೃಷ್ಟಿಯಾಗಿದ್ದಾರೆ.

ಆದರೆ, ಇದೇ ರೀತಿ ಪಂಪ್‌ಸೆಟ್‌ಗಳಿಗೆ ಮಾತ್ರ 'ನಿರಂತರ ವಿದ್ಯುತ್' ನೀಡಲು ಸರ್ಕಾರ ಸಿದ್ಧವಿಲ್ಲ. ಅದಕ್ಕೆ ಅವರು ನೀಡುತ್ತಿರುವ ಕಾರಣ, ನಮ್ಮಲ್ಲಿ ಅಷ್ಟು ವಿದ್ಯುತ್ ಇಲ್ಲ ಎಂಬುದಷ್ಟೇ ಆಗಿದೆ. ವಾಸ್ತವ ಅಷ್ಟು ಮಾತ್ರ ಇಲ್ಲ. ಪಂಪ್‌ಸೆಟ್‌ಗಳಿಗೆ ನೀಡುತ್ತಿರುವ ವಿದ್ಯುತ್ ಉಚಿತ ವಿದ್ಯುತ್ ಆಗಿದೆ. ಹಾಗಾಗಿ ಅದನ್ನು ಮತ್ತಷ್ಟು ನೀಡಲು ಸರ್ಕಾರ ಸಿದ್ಧವಿಲ್ಲ. ಉಚಿತವಾಗಿ ಕೊಟ್ಟಂತೆ ಮಾಡಿ, ಕಿತ್ತುಕೊಳ್ಳಲು ಹಲವು ಸೃಜನಶೀಲ ವಿಧಾನಗಳನ್ನು ಆಧುನಿಕ ಸರ್ಕಾರಗಳು ಕಂಡುಕೊಂಡಿವೆ. ಸರ್ಕಾರ ಹೇಳದಿರುವ, ಆದರೆ ನಾವು ತಲೆಕೆಡಿಸಿಕೊಳ್ಳಬೇಕಾದ ಒಂದು ಸಂಗತಿಯಿದೆ. 3 ಅಥವಾ 6 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ನೀಡಿದಾಗ ಪಂಪ್‌ಸೆಟ್‌ಗಳು ಅಂತರ್ಜಲವನ್ನು ಎಳೆದೂ ಎಳೆದೂ, ಇದೀಗ 1000 ಅಡಿಗಳಷ್ಟು ಆಳಕ್ಕೆ ಬೋರ್‌ವೆಲ್ ಕೊರೆಯುತ್ತಿರುವ ಹಲವು ಜಿಲ್ಲೆಗಳು ಈ ರಾಜ್ಯದಲ್ಲಿವೆ. ಇದು ಕೇವಲ ಕೋಲಾರ, ಚಿತ್ರದುರ್ಗದಂತಹ 'ನಿರಂತರ ಬರಪೀಡಿತ' ಜಿಲ್ಲೆಗಳಲ್ಲಿ ಮಾತ್ರವಲ್ಲ, ಮಂಡ್ಯದಂತಹ 'ಸಂಪದ್ಭರಿತ' ಜಿಲ್ಲೆಗಳಲ್ಲೂ ಕಂಡುಬರುತ್ತಿದೆ. ಹಾಗಿರುವಾಗ ಒಂದು ವೇಳೆ ಪಂಪ್‌ಸೆಟ್‌ಗಳಿಗೆ 24 ಗಂಟೆಗಳ ಕಾಲ ವಿದ್ಯುತ್ತನ್ನು ನೀಡಿದರೆ ಏನಾಗಬಹುದು?

ಹೀಗೆ ಹೇಳಿದಾಗ ಮತ್ತೆ ಎರಡು ಪ್ರಶ್ನೆಗಳು ಬರುತ್ತವೆ. ಒಂದು, ಅಂತರ್ಜಲವನ್ನು ಬರಿದು ಮಾಡಿ ನಾವಷ್ಟೇ ಬದುಕುತ್ತಿರುವುದಲ್ಲ. ಈ ನೀರಿನಿಂದ ಬೆಳೆದು ನಾವು ನಿಮ್ಮ ನಗರಗಳಿಗೂ, ಇತರ ಭಾಗಗಳಿಗೂ ಆಹಾರ ಪದಾರ್ಥಗಳನ್ನು ಕೊಡುತ್ತಿದ್ದೇವಲ್ಲಾ? ಎರಡು, ಪಂಪ್‌ಸೆಟ್ ಎಂದಾಗ ಅದು ನೆಲದಾಳಕ್ಕೆ ಬೋರ್‌ವೆಲ್ ಕೊರೆಯುವುದು ಮಾತ್ರವಲ್ಲ; ಹೊಳೆ ಹಾಗೂ ಕಾಲುವೆಗಳಿಗೆ ಪಂಪ್‌ಸೆಟ್ ಹಚ್ಚಿ ನೀರುಣಿಸಿಕೊಳ್ಳುವುದೂ ನಡೆಯುತ್ತಿದೆ. ಎಲ್ಲೆಲ್ಲಿ ಹೊಳೆ ಹಾಗೂ ಕಾಲುವೆಗಳ ಪಕ್ಕ, ನಾಲಾ ನೀ... ವ್ಯವಸ್ಥೆಯಿಲ್ಲವೋ, ಅಲ್ಲೆಲ್ಲಾ ಈ ಪದ್ಧತಿ ಜಾರಿ... ಅವರಿಗೆ ನಿರಂತರ ವಿದ್ಯುತ್ ಸಿಕ್ಕರೆ, ಇನ್ನೂ ಹೆಚ್... ಬೆಳೆಯಲು ಸಾಧ್ಯ. ಆದರೆ, ಈ ರೀತಿ ವಿದ್ಯುತ್... ಅಲ್ಲಿಯೂ ಬೋರ್‌ವೆಲ್ ಕೊರೆದು ಅಂ... ಬತ್ತಿಸುವುದಿಲ್ಲ ಎಂಬ ಖಾತರಿಯೇನೂ ಇಲ್ಲ. ಅಂ... ಮರುಪೂರಣ ಎಂಬ ಸಂಗತಿಯು ನಮ್ಮಲ್ಲಿ ... ಬದುಕಿನ ವಿಧಾನದ ಭಾಗವಾಗಿಯೂ ಇಲ್ಲ, ಪರಿಣಾ... ಸರ್ಕಾರೀ ಯೋಜನೆಗಳ ಭಾಗವಾಗಿಯೂ ಇಲ್ಲ. ... ಗ್ರಾಮೀಣ ಜನತೆಯೂ ಸೇರಿದಂತೆ, ಈ ನೆಲದ... ಜನ-ಜಾನುವಾರುಗಳ ಭವಿಷ್ಯದ ಬದುಕಿನ ದೃಷ್ಟಿ... ಇರುವ ಅಂತರ್ಜಲವನ್ನು ಬತ್ತಿಸದಿರುವುದು ... ಅಂಶವಾಗಿದೆ.

ಹಾಗಾಗಿಯೇ ಈ ವಿಚಾರ ಸ್ವಲ್ಪ ಸಂಕೀರ್ಣ... ಹಾಗೆ ನೋಡಿದರೆ, ರೈತಸಂಘವು ವಿದ್ಯುತ್ತಿನ ಪೂ... ವಿಚಾರದಲ್ಲಿ ಬೇಡಿಕೆ ಮುಂದಿಟ್ಟಾಗ 'ವಿದ್ಯುತ್ ... ಸಂಬಂಧ ನಗರ-ಗ್ರಾಮೀಣ ಅಸಮಾನತೆ ಹೋಗ... ಎಂದಷ್ಟೇ ಕೇಳಿತ್ತು. ನಗರ ಹಾಗೂ ಗ್ರಾಮೀಣ ... ನಡುವಿನ ತಾರತಮ್ಯವನ್ನು ತೊಡೆಯಬೇಕೆಂದಾಗ... ಅರ್ಥ ಏನಾಗಿರಬೇಕು? ನೆಮ್ಮದಿಯ ಬದುಕನ್ನು ಬ... ಸಂಪತ್ತಿನ ಹಂಚಿಕೆಯನ್ನು ಮಾಡುವ ಪ್ರಶ್ನೆ ಬ... ಆದರಲ್ಲಿ ತಾರತಮ್ಯ ಇರಬಾರದು. ಒಂದೇ ಬ... ವಿಧಾನವೂ ಇರಲೇಬೇಕೆಂದು ಅಪೇಕ್ಷೆ ಮಾಡ... ಎನ್ನಿಸುತ್ತದೆ.

ಇಲ್ಲಿ ವಿದ್ಯುತ್ತಿನ ಉದಾಹರಣೆ... ಮಾತನಾಡಲಾಗಿದೆ. ಆದರೆ ಇದು ನೂರೆಂಟು ಕ್ಷೇ... ಅನ್ವಯಿಸುತ್ತದೆ. ವೈದ್ಯಕೀಯ ಕ್ಷೇತ್ರವನ್ನು ನೋಡಿ... ಆರೋಗ್ಯ ಸಂಸ್ಥೆ - WHO- ನಿಗದಿಪಡಿಸಿರುವ ... ವೈದ್ಯ ಅನುಪಾತಕ್ಕಿಂತ ನಮ್ಮ ದೇಶದಲ್ಲಿ ಹೆಚ್ಚಿ... ಆದರೂ ಶೇ.85ರಷ್ಟು ವೈದ್ಯರು ಮತ್ತು ವೈ... ಕ್ಷೇತ್ರದ ಹೂಡಿಕೆ ನಗರಗಳಲ್ಲಿ ಕೇಂದ್ರೀಕೃತವಾಗಿ... ರೀತಿಯಾಗಿ ತಾರತಮ್ಯವು ಗಾಬರಿಗೊ... ಪ್ರಮಾಣದಲ್ಲಿದ್ದಾಗ, ನಗರವಾಸಿಗಳ ಬಾಯಿ ಕ... ಕಟ್ಟಬೇಕು. 'ನಮ್ಮದೊಂದು ಬದುಕಿನ ವಿಧಾನ, ನಿ... ಬೇರೆ ಬದುಕಿನ ವಿಧಾನ. ನಿಮಗೆ 24 ಗಂಟೆ ... ಅಗತ್ಯವಿಲ್ಲ' ಎಂದು ಹೇಳುವ ನೈತಿಕ ಹಕ್ಕಿರು... ಹಾಗಾಗಿ ಹೊಸ ರೀತಿಯ ಮನುಷ್ಯ ಸಮ... ನಿರ್ಮಾಣದ ಪ್ರಶ್ನೆಯಲ್ಲಿ ಅತ್ಯಂತ ಮುಖ್ಯವಾ... ಅಸಮಾನತೆಯ ನಿವಾರಣೆಯ ಪ್ರಶ್ನೆಯೇ ಅಡಗಿದ... ಅಂತರ್ಜಲವನ್ನು, ನಮ್ಮ ಬದುಕಿನ ರೀತಿಯನ್ನು, ಚ... ಮಾರ್ಗವನ್ನು ಎಲ್ಲವನ್ನೂ ನಿರ್ಧರಿಸುವ ಪ್ರಧಾನ... ಅದೇ ಆಗಿರುತ್ತದೆ.

ಯೋಗಕ್ಕೆ ತತ್ವದ ಗುಣ ಇದೆಯೇ?



ಜೈಮಿನಿಯ 'ಪೂರ್ವ ಮೀಮಾಂಸೆ'ಯು ಪುರೋಹಿತರ ಕೈಪಿಡಿಯಾದರೆ ಪತಂಜಲಿಯ ಯೋಗವು ಮನೋ-ದೈಹಿಕ ಅನುಭವಗಳಿಗೆ ಹಾತೊರೆಯುವವರ ದಿಗ್ದರ್ಶಿಕೆ. ಯೋಗವು ಈಗ ಅಂತಾರಾಷ್ಟ್ರೀಯ ವ್ಯಾಪ್ತಿ ಪಡೆದಿದೆ ಎಂಬುದು ನನಗೆ ತಿಳಿದಿದೆ. ಅಲ್ಲದೆ ಯೋಗ ಗುರುಗಳು ಕೋಟ್ಯಾಧಿಪತಿ, ಮಿಲಿಯಾಧಿಪತಿಗಳಾಗುತ್ತಿದ್ದಾರೆಂಬುದೂ ಗೊತ್ತಿದೆ. ಸದ್ಯಕ್ಕಂತೂ ಆಧುನಿಕ ಮನುಷ್ಯನ ಎಲ್ಲಾ ಬಗೆಯ ವ್ಯಾಕುಲತೆಗಳಿಗೂ ಯೋಗವೊಂದೇ ಉತ್ತರ ಎನ್ನುವ ರೀತಿಯಲ್ಲಿ ಭಾರಿ ಉದ್ಯೋಗವಾಗಿರುವುದು ನಿಜ. ಆದರೆ ಯೋಗಕ್ಕೆ ತತ್ವದ ಗುಣ ಇದೆಯೇ ಎಂಬ ಪ್ರಶ್ನೆಯನ್ನು ಎತ್ತಿದವರು ಪ್ರಾಚೀನ ಭಾರತದಲ್ಲಿಯೇ ಕಂಡುಬರುತ್ತಾರೆ. ಮೀಮಾಂಸ ತತ್ವದ ಪ್ರತಿಪಾದಕರಲ್ಲಿ ಪ್ರಮುಖರಾಗಿದ್ದ ಕುಮಾರಿಲ ಭಟ್ಟರ ಪ್ರಕಾರ ಯೋಗಾನುಭವವು ಕೇವಲ ಮಾನಸಿಕ ಕಲ್ಪನೆ. ಮನಸ್ಸಿನ ಇನ್ನಿತರೆ ಕಲ್ಪನೆಗಿಂತ ಇದು ಯಾವ ರೀತಿಯಲ್ಲಿಯೂ ಭಿನ್ನವಲ್ಲ. ಸುಪ್ರಸಿದ್ಧ ವಿಚಾರವಾದಿಗಳೂ, ಇತಿಹಾಸ ತಜ್ಞರೂ ಆಗಿದ್ದ ಡಾ. ವಿ.ಆರ್. ನಾರ್ಲಾ ಅವರ ಪ್ರಕಾರ ಯೋಗ ಶಿಸ್ತು ಅನ್ನುವುದು ಮಾನವನಾಗಿ ಬದುಕುವ ವಿಶೇಷ ಹಕ್ಕನ್ನೇ ಬಲಿ ತೆಗೆದುಕೊಳ್ಳುತ್ತದೆ.

ಯೋಗವೆಂದರೆ ಮನುಷ್ಯನ ಚಿತ್ತವನ್ನು ಅಚಲಗೊಳಿಸುವುದೇ ಆಗಿದೆಯೆಂದು ಪತಂಜಲಿಯೇ ಹೇಳುತ್ತಾನೆ. ಅಚಲಗೊಳಿಸುವುದೆಂದರೆ ಚಿತ್ತವನ್ನು ಒಂದೇ ಕಡೆಗೆ ಲೀನಗೊಳಿಸುವುದು. ಹಾಗೆ ಲೀನಗೊಳಿಸುವುದು ಭಗವಂತನಲ್ಲಿ ಎಂದು ಬೇರೆ ಹೇಳಬೇಕಾಗಿಲ್ಲ. ಯಾಕೆಂದರೆ ಭಗವಂತನಲ್ಲಿಯ ಭಕ್ತಿಯು ಯೋಗದ ಒಂದು ಭಾಗವೇ ಆಗಿದೆ. ಒಟ್ಟಾರೆ ಹಿಂದೆಂದೂ ಕಂಡರಿಯದ ಮುಂದೆಂದಿಗೂ ಕಾಣಲಾಗದ ಕಾಲ್ಪನಿಕ ಚಿತ್ರಕ್ಕೇ ಜೋತುಬಿದ್ದು ಹನುಮರಾಗುವುದು. ಈ ತಂತ್ರ ಮಾನವನ ಬಾಳಿಗೆ ಅತ್ಯಂತ ಮಹತ್ವವೂ ಪರಿಪೂರ್ಣತೆಯೆಡೆಗೆ ಸಾಗುವ ಹಾದಿಯೂ ಆದ ಮನುಷ್ಯತ್ವ, ವಿಜ್ಞಾನ ವೈಚಾರಿಕತೆಗಳಿಂದ ನಮ್ಮನ್ನು ವಿಮುಖಗೊಳಿಸುತ್ತದೆ. ಮಾನವೀಯತೆ, ವಿಜ್ಞಾನ, ವೈಚಾರಿಕ ದೃಷ್ಟಿಕೋನ ಮಾತ್ರ ನಮ್ಮನ್ನು ಮನುಷ್ಯರನ್ನಾಗಿ ರೂಪಿಸಲು ಸಾಧ್ಯ.

ನಾವೆಲ್ಲರೂ ಮಾನವರ ರೂಪದಲ್ಲಿ ಮಹಾತಾಯಿಯ ಒಡಲಿನಿಂದ ಈ ಮಣ್ಣಿಗೆ ಬಂದವರು, ಮಾನವರಾಗಿಯೇ ಬೆಳೆದು ಮಾನವರಾಗಿಯೇ ಬಾಳಿ ಬದುಕಿ ಮಾನವರಾಗಿಯೇ ಒಂದು ದಿನ ಇದೇ ಮಣ್ಣಿನಲ್ಲಿ ವಿಲೀನರಾಗಬೇಕು. ಹೀಗೆ ಆದಾಗ ಮಾತ್ರ ಒಂಬತ್ತು ತಿಂಗಳು ಹೊತ್ತು ಏನೆಲ್ಲಾ ನೋವುಗಳನ್ನು ನುಂಗಿ ಹೆತ್ತವ್ವನ ಬಸಿರು ಸಾರ್ಥಕವಾಗುತ್ತದೆ. ಇದರೊಂದಿಗೆ ನಮ್ಮ ಹುಟ್ಟು ಕೂಡ ವ್ಯರ್ಥಕವಾಗುತ್ತದೆ. ಇದಕ್ಕೆ ಬೇಕಾದುದ್ದೆಂದರೆ, ವಿಜ್ಞಾನ, ವೈಚಾರಿಕವಾಗಿ ಆಲೋಚಿಸುವುದು ಮತ್ತು ಇಂಥ ಗ್ರಂಥಗಳ ಪತ್ರಿಕಾ ಬರಹಗಳ ಅಭ್ಯಾಸವೇ ಹೊರತು ಚಿತ್ತವನ್ನು ಅಚಲಗೊಳಿಸಿ ವಿಚಾರಶಕ್ತಿಯನ್ನೇ ಹೊಸಕಿ ಹಾಕಿ ನಿಷ್ಕ್ರಿಯವನ್ನಾಗಿ ಮಾಡುವ ಯೋಗಾನುಭವ ಅಲ್ಲವೇ ಅಲ್ಲ.

ಇನ್ನು ಯೋಗಾಸನದ ಅಂಗಾಂಗಗಳ ಕಸರತ್ತಿನಿಂದ ನಮ್ಮ ಆರೋಗ್ಯ ಸುಧಾರಿಸೀತು. ಆದರೆ ಇಷ್ಟಕ್ಕಾಗಿ ವಿಚಾರಶಕ್ತಿಯನ್ನೇ ಬಲಿ ಕೊಟ್ಟು ನಪುಂಸಕರಾಗಬೇಕಾಗಿಲ್ಲ. ಎರಡು ಹೊತ್ತು ವ್ಯಾಯಾಮ, ವಾಕಿಂಗ್ ಮ... ಸಾಕು. ಅದರಲ್ಲಿಯೂ ನಮ್ಮ ಗೌರವದ ಶ್ರಮಜೀ... ಇದು ಕೂಡ ಬೇಕಾಗಿಲ್ಲ. ನಿರಂತರ ಬೆವರು ಸುರಿಸಿ... ದುಡಿಯುವ ಇವರ ಅಂಗಾಂಗಗಳು ವ್ಯಾಯಾಮ ... ಮಾಡುತ್ತಲೇ ಇರುತ್ತವೆ. ಅಲ್ಲದೆ ಬಂಡವಾಳ... ವ್ಯವಸ್ಥೆಯಲ್ಲಿ ನಮ್ಮ ಶ್ರಮಜೀವಿಗಳ ದುಡಿತಕ್ಕೆ ... ಪ್ರತಿಫಲ ಸಿಗದೆ ಹೆಂಡಿರುಮಕ್ಕಳ ಸಮೇತ ಅ... ಉಂಡು ದುಡಿದುಡಿದು ಹೊಟ್ಟೆ ಬೆನ್ನೊಂದಾಗಿ ... ಮಾಂಸ ಕರಗಿ ನಾವಿಂದು ಕಾಲ್ಪನಿಕ ಚಿತ್ರದಲ್ಲಿ ಕಾಣ... ಬೇತಾಳದ ಹಾಗೆ ಎಲುಬಿನ ಗೂಡಾಗಿದ್ದರೆ ಇಂತ... ಯೋಗಾಸನದ ಅವಶ್ಯಕತೆ ಇರುವುದಿಲ್ಲ.

ದೇವರು ಧರ್ಮಗಳ ಹೆಸರಿನಲ್ಲಿ ಮತ್ತು ರಾ... ಲಾಭಕ್ಕಾಗಿ ಇವರೇ ವಂಚಿಸಿ ಕತ್ತಲೆಗೆ ತಳ್ಳಿ... ಮುಗ್ಧಮಂದಿಗಳ ಎದುರು ಸ್ವರ್ಗ, ನರಕ, ಪು... ಕರ್ಮ ಸಿದ್ಧಾಂತಗಳೆಂಬ ಬೊಗಳೆ ಬಿತ್ತಿಟ್ಟು ಭಯ ... ಸುಲಿಗೆ ಮಾಡುವ ಕ್ರೌರ್ಯ ಇಂದಿನದ್ದಲ್ಲ ತಲೆ ತಲಾ...

ಈ ರೀತಿ ವೈಚಾರಿಕತೆಯನ್ನೇ ಹೊಸಕಿ ಹಾ... ತಪ್ಪಿಸಲು ರಾಜಮಾರ್ಗದಲ್ಲಿ ತೋಡಿಟ್ಟ ... ಸಾಲುಸಾಲುಗಳಲ್ಲಿ ಈ ಯೋಗ ಶಿಸ್ತು ಎಂಬುದ... ಒಂದಾಗಿದೆ ಎಂಬುದು ನನ್ನ ಅಭಿಪ್ರಾಯವಾಗಿದೆ. ... ಅಚಲಗೊಳಿಸುವುದು ಮತ್ತು ವಿಚಾರ ನಾಶ ಮಾ... ವಿಕಾಸವಾದದ ಏಣಿಯನ್ನು ಏರುವುದಾಗಿರದೆ ಹ... ಕಾಲುಗಳನ್ನು ಇಳಿಯುವುದೇ ಆಗಿದೆ.

ಗ್ರೀಕ್ ನಾಟಕಕಾರ ಸೆಫೋಕ್ಲಿಸ್ ಹೇ... ವೈಚಿತ್ರ್ಯಗಳು ಹಲವು ಎಲ್ಲದಕ್ಕೂ ವಿಚಿತ್ರ ... ಕುಲವು.

ಬಾಬಾ ರಾಮದೇವ

ಬಾಬಾ ರಾಮದೇವ ಗಳಿಸಿದ್ದು ಎಷ್ಟು?
ಬರೇ ಒಂದು ನೂರಾ ಒಂದು ಕೋಟಿಯ
ಅವನದೇ ಒಡೆತನದ ಇನ್ನೊಂದೇ ದ್ವೀಪ
ಉಳಿದಂತೆ ಕಡುಬಡವ ಇವನಯ್ಯ ಪಾಪ

■ ವಿಡಂ...

ಜ ಜೀವನದ ಭಜರಂಗಿ ಭಾಯ್‌ಜಾನ್‌ಗಳು

ನಾಶ್ರಿತರು ಮಾತ್ರ ಜಾತ್ಯತೀತರಾಗಿರುವುದಿಲ್ಲ, ಬಾಗಿ ತಮ್ಮ ಧರ್ಮದಲ್ಲಿ ಅಚಲ ನಂಬಿಕೆ ದಿರುವವರೂ ವಾಸ್ತವವಾಗಿ ತೀತರಾಗಿರುತ್ತಾರೆ. ಇದಕ್ಕೆ ಲೇಟೆಸ್ಟ್ ಉದಾಹರಣೆ ರಂಗಿ ಭಾಯ್‌ಜಾನ್'!


ಈಗ ಎಲ್ಲೆಡೆ ಹಿಟ್ ಆಗಿರುವ 'ಭಜರಂಗಿ ಯ್‌ಜಾನ್' ಚಿತ್ರದಲ್ಲಿ ಹೀರೋ ಸಲ್ಮಾನ್ ನದ್ದು ಅಪ್ಪಟ ಹನುಮಂತ ಭಕ್ತನ ಪಾತ್ರ. ಗೆ ತನ್ನ ಧರ್ಮದ ನೈತಿಕತೆಯ ಬಗ್ಗೆ ಎಲ್ಲಿಲ್ಲದ ಸ. ಆ ವಿಶ್ವಾಸವೇ ಆತನನ್ನು ಮಾನವೀಯ ಷ್ಪನನ್ನಾಗಿಸಿರುವುದು. ಅವನ ಈ ಗುಣವೇ ಯಕ ಮುಸ್ಲಿಮ್ ಬಾಲಕಿಯ ನೆರವಿಗೆ ವಂತೆ ಮಾಡಿರುವುದು. ಯಾಕೆಂದರೆ ಆತನಿಗೆ ಧರ್ಮದಲ್ಲಿರುವ ಮಾನವೀಯತೆ ಮುಖ್ಯವೇ ರತು ಪರಧರ್ಮದ ದ್ವೇಷವಲ್ಲ.

'ಭಜರಂಗಿ ಭಾಯ್‌ಜಾನ್' ಕೇವಲ ಕಾಲ್ಪನಿಕ ಕತೆ ವಂತಿಲ್ಲ. ಯಾಕೆಂದರೆ ನಮ್ಮ ದೇಶದಲ್ಲಿ ರಂಗಿ ಭಾಯ್‌ಜಾನ್‌ನಂತೆ ಕೋಟ್ಯಾಂತರ ಜನರಿಗೆ ಧರ್ಮದಲ್ಲಿನ ಮಾನವೀಯತೆ ಮತ್ತು ನ್ಯಾಯ ಖ್ಯವಾಗಿದೆಯೇ ಹೊರತು ಪರಧರ್ಮದವರಿಗೆ ನ್ಯಾಯ ಮತ್ತು ಮೋಸ ಮಾಡುವುದಲ್ಲ; ಹಿಂಸೆ ಡುವುದಲ್ಲ. ಆ ಕಾರಣಕ್ಕಾಗಿಯೇ ನಮ್ಮ ದೇಶ ರಾರು ವರ್ಷಗಳಿಂದ ಬಹುಧರ್ಮೀಯ, ಹುಸಂಸ್ಕೃತಿಯ, ಬಹುಭಾಷೆಗಳ ಜಾತ್ಯತೀತ ಶವಾಗಿ ಸಾಗುತ್ತಾ ಬಂದಿರುವುದು. ಈಗ ಆ ಶವನ್ನು ತೆರೆಯ ಮೇಲೆ 'ಭಜರಂಗಿ ಯ್‌ಜಾನ್' ಸಾರುತ್ತಿರುವಾಗಲೇ ನಿಜಜೀವನದಲ್ಲಿ ಬ್ಬರು ಅದನ್ನು ಮತ್ತೊಮ್ಮೆ ಎಲ್ಲರ ಗಮನಕ್ಕೆ ದಿದ್ದಾರೆ. ಅವರಿಬ್ಬರು ಯಾರೆಂದರೆ ಧ್ಯಪ್ರದೇಶದಲ್ಲಿ ವ್ಯಾಪಂ ಹಗರಣವನ್ನು ಯಲಿಗೆಳೆದ ಡಾ. ಆನಂದ್ ರೈ ಮತ್ತು ಮುಂಬೈಯಲ್ಲಿ ಈಗ ನೆಲೆಸಿರುವ ಮಂಗಳೂರು ಮೂಲದ ಹಿರಿಯ ವಕೀಲೆ ರೋಹಿಣಿ ಸಾಲಿಯನ್. ವರಿಬ್ಬರೂ ಈಗ ಆರೆಸ್ಸೆಸ್ ಎಂಬ 'ದೇಶಭಕ್ತ' ಂಘಟನೆಯ ಟೊಳ್ಳುತನವನ್ನು ಮತ್ತು ಬಿಜೆಪಿ ರ್ಕಾರದ ಪಾತಕತನವನ್ನೂ ಬಹಿರಂಗಪಡಿಸಿದ್ದಾರೆ. ಂದಹಾಗೆ, ಇವರಿಬ್ಬರೂ ಹಿಂದೂಗಳಾಗಿದ್ದು ವರಿಬ್ಬರಿಗೂ ತಮ್ಮ ಧರ್ಮದ ಬಗ್ಗೆ 'ಭಜರಂಗಿ ಯ್‌ಜಾನ್'ನಷ್ಟೇ ವಿಶ್ವಾಸ ಮತ್ತು ನಂಬಿಕೆ.

ಆನಂದ್ ರೈ ಕಳೆದ ಹತ್ತು ವರ್ಷಗಳಿಂದ ರೆಸ್ಸೆಸ್ ಸದಸ್ಯರಾಗಿರುವವರು. ಆ ಸಂಘಟನೆಯಲ್ಲಿ ಎಷ್ಟು ಪ್ರಮುಖರೆಂದರೆ 'ಆರೋಗ್ಯ ಭಾರತಿ' ಎಂಬ ಆರೆಸ್ಸೆಸ್‌ನ ಆರೋಗ್ಯ ವಿಭಾಗಕ್ಕೆ ಇಂದೋರ್ ಘಟಕದ ಉಪಾಧ್ಯಕ್ಷರಾಗಿದ್ದರು. ಹಳ್ಳಿಯ ಶಾಲೆಯಲ್ಲಿ ಮಾಸ್ಟರ್ ಆಗಿದ್ದವರ ಮಗನಾದ ಆನಂದ್ ಶಾಲಾದಿನಗಳಲ್ಲೇ ಉತ್ತಮ ವಿದ್ಯಾರ್ಥಿಯಾಗಿದ್ದರು. 993ರಲ್ಲಿ ಅವರು ವೈದ್ಯಕೀಯ ಕಾಲೇಜ್ ಸೇರಲು ಪೂರ್ವಭಾವಿ ಪರೀಕ್ಷೆ ಬರೆದಾಗಲೇ ವ್ಯಾಪಂನಲ್ಲಿ ವ್ಯವಹಾರ ನಡೆಯುತ್ತಿದೆ ಎಂಬ ಸುಳಿವು ಅವರಿಗೆ ಕಿತ್ತು. ಎಂಬಿಬಿಎಸ್ ಮುಗಿಸಿದ ನಂತರ 2005ರಲ್ಲಿ ಅವರು ಎಂಡಿ/ಎಂಎಸ್ ಮಾಡಲು ಮತ್ತೊಮ್ಮೆ ಪೂರ್ವಭಾವಿ ಪರೀಕ್ಷೆಗಳನ್ನು ಬರೆದರು. ಆಗ ಪ್ರತಿಭೆ ಇಲ್ಲದ ಆದರೆ ಪ್ರಭಾವಿ ಅಧಿಕಾರಸ್ಥರ ಮಕ್ಕಳಿಗೂ ಸೀಟ್ ಸಿಕ್ಕಿದ್ದರ ಮರ್ಮ ಆನಂದ್ ಅವರಿಗೆ ಗೊತ್ತಾಯಿತು. ಅದೇನೆಂದರೆ ನಕಲಿ ವಿದ್ಯಾರ್ಥಿಗಳು ಸಲಿ ವಿದ್ಯಾರ್ಥಿಗಳ ಜಾಗದಲ್ಲಿ ಕೂತು ಪರೀಕ್ಷೆ ಬರೆಯುತ್ತಿದ್ದದ್ದು.

ಆಗಲೇ ಆನಂದ್ ಆರೆಸ್ಸೆಸ್ ಸೇರಿಕೊಂಡು ಶಾಖಾಗಳಿಗೆ ಚಡ್ಡಿ, ಟೋಪಿ, ಲಾಠಿ ಸಹಿತ ಹಾಜರಾಗುತ್ತಿದ್ದರಲ್ಲದೆ ಆಗ ಮಧ್ಯಪ್ರದೇಶದಲ್ಲಿ ಇದ್ದದ್ದೂ ಬಿಜೆಪಿ ಸರ್ಕಾರ. ಆದರೇನಂತೆ, ಅನ್ಯಾಯ ಯಾರೇ ಮಾಡಿದರೂ ಅನ್ಯಾಯವೇ; ಜೊತೆಗೆ ತಾನು ಸದಸ್ಯನಾಗಿರುವ ಆರೆಸ್ಸೆಸ್ ಸರಳತೆ, ನ್ಯಾಯ, ಪ್ರಾಮಾಣಿಕತೆಯನ್ನು ಬೆಂಬಲಿಸುವ ಸಂಘಟನೆ ಎಂದು ನಂಬಿದ್ದ ಆನಂದ್ ವ್ಯಾಪಂ ಹಗರಣ ಕುರಿತ ದಾಖಲೆಗಳನ್ನು ಸಂಗ್ರಹಿಸಲಾರಂಭಿಸಿದರು. ಆಗ ಅವರ ನೆರವಿಗೆ ಬಂದದ್ದು ಯಾವುದೇ ಆರೆಸ್ಸೆಸ್ ನಾಯಕನಲ್ಲ. ಬಿಜೆಪಿಯ ಶಾಸಕನಲ್ಲ, ಬದಲಾಗಿ ಪಕ್ಷೇತರ ಶಾಸಕ ಪರಸ್ ಸಕ್ಲೇಚ. 2009ರಲ್ಲಿ ಆನಂದ್ ಅವರು ಸಾಕ್ಷ್ಯಾಧಾರಗಳ ಸಮೇತ ವ್ಯಾಪಂ ಹಗರಣವನ್ನು ಮೊದಲು ಬಯಲು ಮಾಡಿದರು. ಅದೀಗ ಬೃಹತ್ ಪ್ರಮಾಣದಲ್ಲಿ ದೇಶದ ಜನರ ಮುಂದೆ ನಿಂತಿದ್ದು ಎಲ್ಲರೂ ಆನಂದ್ ಅವರ ಪಾತ್ರವನ್ನು ಮೆಚ್ಚುತ್ತಿದ್ದಾರೆ.

ಆದರೆ ಆನಂದ್ ಅವರಿಗೆ ತುಂಬಾ ಜಿಗುಪ್ಸೆ ಆಗಿದೆ. ಯಾಕೆಂದರೆ ಅವರು ಈ ಹಗರಣವನ್ನು ಬಯಲು ಮಾಡಿದ ಕೂಡಲೇ ಅವರನ್ನು ದೂರ ಇಟ್ಟದ್ದು ಅವರು ಅಪಾರವಾಗಿ ನಂಬಿದ್ದ ಆರೆಸ್ಸೆಸ್! ಯಾಕೆಂದರೆ ಆ ಹಗರಣದಲ್ಲಿ ಪ್ರಮುಖ ಪಾತ್ರವಹಿಸಿರುವವರೂ ಆರೆಸ್ಸೆಸ್ ಜನರೇ. ಅಷ್ಟೇ ಅಲ್ಲ, ಈಗ ಎಲ್ಲರೂ ಆನಂದ್ ಅವರಿಗೆ ಶಹಭಾಷ್ ಹೇಳುತ್ತಿದ್ದರೆ, ತುಟಿಪಿಟಿಕ್ ಎನ್ನದೆ ಸುಮ್ಮನಿರುವುದೂ





ಇದೇ ಆರೆಸ್ಸೆಸ್ ನಾಯಕ ಮೋಹನ್ ಭಾಗವತ್!! ನೆನಪಿದೆಯೇ, ದೆಹಲಿಯಲ್ಲಿ ಅಣ್ಣಾ ಹಜಾರೆಯವರು ಭ್ರಷ್ಟಾಚಾರ ನಿರ್ಮೂಲನೆಗೆ ಉಪವಾಸ ಸತ್ಯಾಗ್ರಹವನ್ನು ಕೈಗೊಂಡಿದ್ದಾಗ ತಾನು ಮತ್ತು ತನ್ನ ಸಂಘಟನೆಯೂ ಇದಕ್ಕೆ ಕಟಿಬದ್ಧರಾಗಿದ್ದೇವೆ ಎಂದು ಪೋಸು ಕೊಟ್ಟು ಅವರ ಜೊತೆ ಕೂತಿದ್ದದ್ದೂ ಇದೇ ಭಾಗವತ್. ಆದರೀಗ ದೇಶದ ಇತಿಹಾಸದಲ್ಲೇ ಅತಿದೊಡ್ಡ ಹಗರಣ ಎಂದು ಕರೆಯಲಾಗುತ್ತಿರುವ ವ್ಯಾಪಂ ಅವ್ಯವಹಾರದ ಬಗ್ಗೆ ಗಪ್‌ಚುಪ್ ಆಗಿರುವುದೂ ಇದೇ ಭಾಗವತ್.

"ಆರೆಸ್ಸೆಸ್ ನಾಯಕರು ಅನ್ಯಾಯದ ವಿರುದ್ಧ ಹೋರಾಡುವುದಾಗಿ ಹೇಳುತ್ತಾರೆ. ಅವರು ರಾಷ್ಟ್ರೀಯತೆ ಬಗ್ಗೆ, ಆರ್ಟಿಕಲ್ 370 ಮತ್ತು ಏಕರೂಪ ನಾಗರಿಕ ಸಂಹಿತೆ ಬಗ್ಗೆ ಮಾತನಾಡುತ್ತಾರೆ. ರಾಷ್ಟ್ರದ ಯುವಕರಿಗೆ ವ್ಯಾಪಂ ಅನ್ಯಾಯ ಮಾಡುತ್ತಿದ್ದರೂ ಭಾಗವತ್ ಯಾಕೆ ಸುಮ್ಮನಿದ್ದಾರೆ? ವ್ಯಾಪಂ ಎಸಗಿರುವ ದ್ರೋಹಕ್ಕಿಂತ ಆರ್ಟಿಕಲ್ 370 ಮತ್ತು ಏಕರೂಪ ನಾಗರಿಕ ಸಂಹಿತೆ ಮುಖ್ಯವೇ?" ಎಂದು ಆನಂದ್ ಪ್ರಶ್ನಿಸುತ್ತಾರೆ. ಅಷ್ಟೇ ಅಲ್ಲ, "ಪಜ್ಞಾಸಿಂಗ್ ತರಹದವರು ಬಾಂಬ್‌ಗಳನ್ನು ಸ್ಫೋಟಿಸಿ ಜನರನ್ನು ಕೊಲ್ಲುವ ಮೂಲಕ ಆರೆಸ್ಸೆಸ್‌ಗೆ ಕೆಟ್ಟ ಹೆಸರನ್ನು ತಂದರು. ಹಿಂದೂ ಧರ್ಮಕ್ಕೆ ದ್ರೋಹ ಬಗೆದರು. ಆದರೂ ಆರೆಸ್ಸೆಸ್ ಆಕೆಯ ಪರ ವಹಿಸಿತು. ಆದರೆ ನನ್ನನ್ನು ತಿರಸ್ಕರಿಸಿತು. ಯಾಕೆ?" ಎಂದೂ ಆನಂದ್ ಸರಿಯಾಗಿಯೇ ಪ್ರಶ್ನಿಸುತ್ತಾರೆ.

ವ್ಯಾಪಂ ಹಗರಣವನ್ನು ಬಯಲು ಮಾಡಿದ್ದಕ್ಕೆ ಆನಂದ್ ಅವರಿಗೆ ಸಿಗುತ್ತಿರುವ ಪ್ರತಿಫಲ ಆರೆಸ್ಸೆಸ್‌ನ ದಿವ್ಯ ನಿರ್ಲಕ್ಷ್ಯ ಮಾತ್ರವಲ್ಲ, ಅದರ ಜೊತೆಗೆ ಸರ್ಕಾರದಿಂದಲೂ ಕಿರುಕುಳ. ಆನಂದ್ ಅವರ ಪತ್ನಿ ಗೌರಿಯೂ ವೈದ್ಯೆಯಾಗಿದ್ದು ಅವರಿಬ್ಬರಿಗೆ ಎರಡೂವರೆ ವರ್ಷದ ಮಗು ಇದೆ. ಇತ್ತೀಚೆಗೆ ಗೌರಿ ಅವರು ಮಗುವಿನ ಆರೈಕೆಗೆ ರಜೆ ತೆಗೆದುಕೊಂಡಿದ್ದರು. ಅದನ್ನೇ ಸಬೂಬಾಗಿಸಿಕೊಂಡ ಶಿವರಾಜ್ ಸಿಂಗ್ ಚೌಹಾಣ್ ಅವರ ಬಿಜೆಪಿ ಸರ್ಕಾರ ಆಕೆಯನ್ನು ಕೆಲಸದಿಂದ ವಜಾ ಮಾಡಿತ್ತು. ಅದನ್ನು ಗೌರಿ ಪ್ರಶ್ನಿಸಿದಾಗ ಆಕೆಯನ್ನು ವಾಪಸ್ ಕೆಲಸಕ್ಕೆ ತೆಗೆದುಕೊಳ್ಳಲಾಯಿತಾದರೂ, ಆಕೆಗೆ ಬಡ್ತಿಯನ್ನು ನಿರಾಕರಿಸಿ ದೂರದ ಉಜ್ಜೇನಿಗೆ ವರ್ಗಾ ಮಾಡಲಾಯಿತು. ಈಗ ಆನಂದ್ ಅವರನ್ನು ಧಾರ್ ಎಂಬ ನಿರ್ಗತಿಕ ಪ್ರದೇಶಕ್ಕೆ ವರ್ಗಾ ಮಾಡುವ ತಯಾರಿಯಲ್ಲಿದೆ ಅಲ್ಲಿನ ಬಿಜೆಪಿ ಸರ್ಕಾರ. "ಭ್ರಷ್ಟಾಚಾರವನ್ನು ಬಯಲುಗೊಳಿಸಿದ್ದಕ್ಕೆ ಸರ್ಕಾರ ನನಗೆ ಕೊಡುತ್ತಿರುವ ಮುಯ್ಯಿ ಇದು" ಎನ್ನುತ್ತಾರೆ ಆನಂದ್.

ಆನಂದ್ ರೈ ಅವರಂತೆ ಈಗ ಚಡ್ಡಿಗಳ ಅಸಲಿ ಮುಖವನ್ನು ಮತ್ತೊಮ್ಮೆ ಬಯಲಿಗೆಳೆದಿರುವವರು ರೋಹಿಣಿ ಸಾಲಿಯಾನ್. ಕಳೆದ ಮೂವತ್ತು ವರ್ಷಗಳಿಂದ ವಕೀಲೆಯಾಗಿ ಕೆಲಸ ಮಾಡುತ್ತಿರುವ ರೋಹಿಣಿ ಅವರ ಹೆಸರನ್ನು ಮುಂಬೈನ ಎಲ್ಲ ಪೊಲೀಸರೂ, ವಕೀಲರೂ ಮತ್ತು ನ್ಯಾಯಾಧೀಶರೂ ಬಲ್ಲರು. ಯಾಕೆಂದರೆ ಆಕೆ ಅಷ್ಟು ನಿಷ್ಠೆಯಿಂದ ಕೆಲಸ ಮಾಡುತ್ತಾರಲ್ಲದೆ ಆಕೆ ತುಂಬಾ ಪ್ರಾಮಾಣಿಕ ವ್ಯಕ್ತಿ. ಈ ಹಿಂದೆ ಅವರು ಸರ್ಕಾರದ ಪರವಾಗಿ ನ್ಯಾಯಾಲಯದಲ್ಲಿ ವಾದ ಮಂಡಿಸಿ ಅಪರಾಧಿಗಳಿಗೆ ಶಿಕ್ಷೆ ಸಿಗುವಂತೆ ನೋಡಿಕೊಂಡಿದ್ದಾರೆ. ಆ ಕಾರಣಕ್ಕೇ ಪೊಲೀಸ್ ಇಲಾಖೆಯಲ್ಲಿ ಹೇಮಂತ್ ಕರ್ಕರೆ ಅವರಿಗೆ ಇದ್ದಷ್ಟೇ ಖ್ಯಾತಿ ರೋಹಿಣಿ ಅವರಿಗೆ ವಕೀಲರ ವಲಯದಲ್ಲಿದೆ.

2006ರಲ್ಲಿ ಮಾಲೆಗಾಂವ್ ಸೇರಿದಂತೆ ದೇಶದ ವಿವಿಧ ಕಡೆ ಬಾಂಬ್‌ಗಳು ಸ್ಫೋಟಗೊಂಡಾಗ ಆರಂಭದಲ್ಲಿ ಆ ಕೃತ್ಯಗಳ ಹಿಂದೆಯೂ ಭಯೋತ್ಪಾದಕ ಮುಸಲ್ಮಾನರ ತಂಡಗಳಿರಬೇಕೆಂದು ಪೊಲೀಸರು ತರ್ಕಿಸಿದ್ದರು. ಆಗ ಮಹಾರಾಷ್ಟ್ರ ಸರ್ಕಾರ ಆಂಟಿ ಟೆರರಿಸಂ ಸ್ಕ್ವಾಡ್ (ಎಟಿಎಸ್) ಒಂದನ್ನು ರಚಿಸಿ ಆ ಬಾಂಬ್ ಸ್ಫೋಟಗಳ ತನಿಖೆಯನ್ನು ಹೇಮಂತ್ ಕರ್ಕರೆ ಎಂಬ ದಕ್ಷ ಮತ್ತು ಪ್ರಾಮಾಣಿಕ ಪೊಲೀಸ್ ಅಧಿಕಾರಿಗೆ ವಹಿಸಿತು. ಕರ್ಕರೆ ಅವರಿಂದ ನಿಷ್ಠುರ ತನಿಖೆ ಮುಂದುವರೆದಂತೆ ಸುಮಾರು ನೂರು ಜನರ




• ಗೌರಿ ಲಂಕೇಶ್
editorlankesh@gmail.com


ಸಾವುಗಳಿಗೆ ಕಾರಣವಾದ ಮಾಲೆಗಾಂವ್, ಅಜ್ಮೇರ್, ಹೈದರಾಬಾದ್ ಮತ್ತು ಸಂಜೌತಾ ಎಕ್ಸ್‌ಪ್ರೆಸ್ ರೈಲು ದುರಂತಗಳ ಹಿಂದೆ ತಲೆ ಕೆಟ್ಟ ಮುಸಲ್ಮಾನರ ಬದಲಾಗಿ ಕೋಮು ಹುಚ್ಚು ಹಿಡಿದಿದ್ದ ಹಿಂದೂಗಳ ಕೈವಾಡ ಇರುವುದು ಮೊದಲ ಬಾರಿಗೆ ಪತ್ತೆಯಾಗಿತ್ತು. ಅಷ್ಟೇ ಅಲ್ಲ, ಅವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಆರೆಸ್ಸೆಸ್‌ಗೆ ಸಂಬಂಧಪಟ್ಟವರಾಗಿದ್ದದ್ದೂ ಹೊರಬಿದ್ದಿತ್ತು. ಸ್ವಲ್ಪದಿನಗಳಲ್ಲೇ ಸಾಧ್ವಿ ಪ್ರಜ್ಞಾ ಸಿಂಗ್, ಸೈನ್ಯಾಧಿಕಾರಿ ಪುರೋಹಿತ್, ಅಸೀಮಾನಂದ ಮತ್ತು ಇತರೆ ಚಡ್ಡಿಗಳನ್ನು ಕರ್ಕರೆ ತಂಡ ಬಂಧಿಸಿತು.

ಆಗ ಬಿಜೆಪಿಯ ಹಿರಿಯ ನಾಯಕ ಎಲ್.ಕೆ. ಅಡ್ವಾನಿ ಸೇರಿದಂತೆ ಆರೆಸ್ಸೆಸ್‌ನ ಹಲವಾರು ನಾಯಕರು ಕರ್ಕರೆ ವಿರುದ್ಧ ಪ್ರತಿಭಟಿಸುವ ಮೂಲಕ ಕೊಲೆಗಡುಕ ಕೇಸರಿ ಭಯೋತ್ಪಾದಕರ ಪರ ನಿಂತಿದ್ದರು. ಸಹಜವಾಗಿಯೇ ಕರ್ಕರೆ ಅವರಿಗೆ ಇದನ್ನು ಕಂಡು ಬೇಸರವಾಗಿತ್ತು. ಆಗ ಅವರು ಭೇಟಿಯಾಗಿದ್ದು ನಿವೃತ್ತ ಹಿರಿಯ ಪೊಲೀಸ್ ಅಧಿಕಾರಿ ಜೂಲಿಯೋ ರಿಬೈರೊ ಅವರನ್ನು. ರಿಬೈರೊ ಅವರು ಮುಂಬೈನ್ ಪೊಲೀಸ್ ಕಮೀಶನರ್ ಆಗಿ, ಗುಜರಾತ್ ಮತ್ತು ಪಂಜಾಬ್ ರಾಜ್ಯಗಳ ಡಿಜಿಪಿ ಆಗಿ ಕರ್ತವ್ಯ ನಿರ್ವಹಿಸಿ ದೇಶದಾದ್ಯಂತ ಮೆಚ್ಚುಗೆ ಗಳಿಸಿರುವವರು. ರಿಬೈರೊ ಅವರು ಇತ್ತೀಚೆಗೆ ಬರೆದ ಒಂದು ಲೇಖನದಲ್ಲಿ ಹೀಗೆ ನೆನಪಿಸಿಕೊಂಡಿದ್ದಾರೆ: "ಪಾಕಿಸ್ತಾನದಿಂದ ಮುಂಬೈಗೆ ಬಂದಿದ್ದ ಭಯೋತ್ಪಾದಕರು ಒಬ್ಬ ಬುದ್ಧಿವಂತ, ದಕ್ಷ ಮತ್ತು ನಿಯತ್ತಿನ ಅತ್ಯುತ್ತಮ ಐಪಿಎಸ್ ಅಧಿಕಾರಿಯಾಗಿದ್ದ ಹೇಮಂತ್ ಕರ್ಕರೆಯವರನ್ನು ಕೊಂದು ಹಾಕಿದರು. ಕರ್ಕರೆ ಅವರು ಹತರಾಗುವ ಹಿಂದಿನ ದಿನ ಅವರು ನನ್ನನ್ನು ಕಾಣಲು ಬಂದಿದ್ದರು. ಯಾಕೆಂದರೆ ಮಾಲೆಗಾಂವ್ ಸ್ಫೋಟ ಕುರಿತಂತೆ ಅವರು ಸಂಗ್ರಹಿಸಿದ್ದ ಮಾಹಿತಿಗೆ ಬಿಜೆಪಿಯ ನಾಯಕರು, ಅದರಲ್ಲೂ ವಿಶೇಷವಾಗಿ ಎಲ್.ಕೆ. ಅಡ್ವಾನಿ, ಪ್ರತಿಕ್ರಿಯಿಸಿದ್ದ ರೀತಿಯನ್ನು ಕಂಡು ಕರ್ಕರೆಯವರು ಡಿಸ್ಟರ್ಬ್ ಆಗಿದ್ದರು. ನನ್ನ ಪ್ರಕಾರ ಪೊಲೀಸರ ಕರ್ತವ್ಯ ನಿಜವಾದ ಅಪರಾಧಿಗಳನ್ನು ಹಿಡಿದು ಕಾನೂನುಬದ್ಧವಾಗಿ ಅವರಿಗೆ ಶಿಕ್ಷೆ ಸಿಗುವಂತೆ ಕೆಲಸ ಮಾಡುವುದು. ಸತ್ಯ ಮತ್ತು ನ್ಯಾಯದ ವಿಷಯಕ್ಕೆ ಬಂದಾಗ ರಾಜಕೀಯ, ಧರ್ಮ, ಜಾತಿ, ಸಮುದಾಯ ಇಂಥವಕ್ಕೆ ಯಾವ ಮಾನ್ಯತೆಯನ್ನೇ ಕೊಡಕೂಡದು. ಇತ್ತೀಚೆಗೆ ನಮ್ಮ ಅಧಿಕಾರಿಗಳು ಇಂತಹ ಮೌಲ್ಯಗಳನ್ನು ಕಳೆದುಕೊಳ್ಳುತ್ತಿರುವುದು ನಿಜವಾದರೂ ಈಗಲೂ ಹಲವಾರು ಪೊಲೀಸ್ ಅಧಿಕಾರಿಗಳು ತಮ್ಮ ಆತ್ಮಸಾಕ್ಷಿಗೆ ಮತ್ತು ಸಂವಿಧಾನಕ್ಕೆ ಬದ್ಧರಾಗಿ ಕೆಲಸ ಮಾಡುತ್ತಾರೆ. ಅಂಥವರಲ್ಲಿ ಕರ್ಕರೆ ಕೂಡ ಒಬ್ಬರಾಗಿದ್ದರು. ಮಾಲೆಗಾಂವ್ ಬಾಂಬ್ ಸ್ಫೋಟಕ್ಕೆ ಸಂಬಂಧಿಸಿದಂತೆ ಅವರು ಕಲೆಹಾಕಿದ್ದ ಮಾಹಿತಿಯನ್ನೆಲ್ಲ ನಾನು ಅಭ್ಯಯಿಸಿದೆ. ಅವರು ಸಂಗ್ರಹಿಸಿದ್ದ ಮಾಹಿತಿ ಕಂಡು ನನಗೆ ಶಾಕ್ ಆಗಿತ್ತು. ಆದರೂ ಪೊಲೀಸ್

▶▶ 09




ರಾಜ್ಯವನ್ನೇ ಕಕ್ಕಾಬಿಕ್ಕಿ ಮಾಡಿರುವ ರಂಗಿತರಂಗ



ಥೇಟರುಗಳ ಪಾಲಿಗೆ ಮಂಗಳವಾರವೆಂದರೆ 'ಹೌಸ್‌ಫುಲ್' ಬೋರ್ಡು ಬೀಳಲಸಾಧ್ಯ ದಿನ. ಸಿನಿಮಾ ನೋಡುತ್ತಲೇ ಮೂವತ್ತೆರಡರ ಪ್ರಾಯದ ಟೆಕ್ಕಿಯೊಬ್ಬ ಆಘಾತದಿಂದ ಸತ್ತನೆಂಬ ಸುದ್ದಿ ಕೇಳಿದ ಈ ವರದಿಗಾರ ಅದೇನೆಂದು ನೋಡೇಬಿಡಲು ಮಾಗಡಿರಸ್ತೆಯ ವೀರೇಶ ಚಿತ್ರಮಂದಿರಕ್ಕೆ ಬಂದರೆ ಹೌಸ್‌ಫುಲ್ ಬೋರ್ಡಿನ ನಿರಾಶೆ. ಇದು ಜುಲೈ 21ರ ಮಂಗಳವಾರದ ಮುಂಜಾನೆಯ ಪರಿಸ್ಥಿತಿ. ರಂಗಿತರಂಗ ಬಿಡುಗಡೆಯಾಗಿ ಇವತ್ತಿಗೆ 19ನೇ ದಿನ. ಸರಿ ಮಧ್ಯಾಹ್ನದ 1.30ರ ಷೋಗಾದರೂ ಟಿಕೆಟ್ಟು ಸಿಗಬಹುದೆಂದು ಕಾದು ಮತ್ತೆ 1ಕ್ಕೆ ವೀರೇಶಕ್ಕೆ ಬಂದರೆ ಈಗಲೂ ಅದೇ ಪಜೀತಿ. ಬೇರೆ ಯಾವುದಾದರೂ ಥೇಟರಿಗೆ ಹೋಗಿ ನೋಡೋಣವೆಂದರೆ ಕಾಲ ಮಿಂಚಿಹೋಗಿದೆ.

ಅಲ್ಲಾ ಸ್ವಾಮೀ... ನೀವು ಈ ರೀತಿ ಟಿಕೆಟ್ ಕೌಂಟರಿನಲ್ಲಿ ಕ್ಯೂ ನಿಂತು ಟಿಕೆಟ್ ತಗೋತೀನಿ ಅನ್ನೋದನ್ನ ಮರ್‍ತುಬಿಡಿ. ಪಕ್ಕದಲ್ಲೇ ಆನ್‌ಲೈನ್ ಬುಕಿಂಗ್ ಇದೆ. ಅಲ್ಲಿ ಟ್ರೈ ಮಾಡಿದರಷ್ಟೇ ಟಿಕೆಟ್ಟು ಸಿಗಬಹುದೇನೋ.... ಎಂದ. ಸರಿಯೆಂದು ಆ ಸೈಬರ್ ಸೆಂಟರಿಗೆ ಬಂದರೆ ಅದಕ್ಕೂ ಬೀಗ. ನಾಲ್ಕೂವರೆಯ ಷೋಗೆ ಒಂದು ಗಂಟೆ ಮೊದಲು ಅಂದರೆ ಮೂರೂವರೆಗೆ ಬಂದು ಕ್ಯೂ ನಿಂತು ಟಿಕೆಟ್ ಪಡೆಯಲೆಂದು ಬಂದರೆ ಅಲ್ಲಿ ನೀಡಿದ್ದು 'ವಜ್ರಕಾಯ'ದ ಟಿಕೆಟ್ಟನ್ನು. ವಿಚಾರಿಸಿ- ರೇಗ ಹೊರಟರೆ 'ನಾವೇನ್ರೀ...



ಮಾಡೋದು? ಎಲ್ಲಾ ಟಿಕೆಟ್ಟೂ ಆನ್‌ಲೈನ್‌ನಲ್ಲಿ ಬುಕ್ಕಾಗಿ ಹೋಗಿವೆ. ಆನ್‌ಲೈನ್‌ನಲ್ಲಿ ಬುಕ್ಕಾಗದೇ ಉಳಿದರೆ ಮಾತ್ರನೇ ಇಲ್ಲಿ ಟಿಕೆಟ್ಟು ಕೊಡೋದು....!

ಇದು ಈ ವರದಿಗಾರ ಪಟ್ಟ ಪಜೀತಿ. ದಿನವಿಡೀ ಕಾದು ವೀರೇಶದಲ್ಲಿ ಚಿತ್ರ ನೋಡಲಾಗದೇ ಕೊನೇಗಳಿಗೆಯಲ್ಲಿ ನಂದಿನಿ ಲೇಔಟಿನ ನಂದಿನಿ ಥೇಟರಿಗೆ ಬಂದರೆ ಅಲ್ಲೂ ಇನ್ನೇನು ಹೌಸ್‌ಫುಲ್ ಬೋರ್ಡ್ ಬೀಳುವುದರಲ್ಲಿತ್ತು. ಇದು ಅನೂಪ್ ಭಂಡಾರಿ ನಿರ್ದೇಶನದ 'ರಂಗಿತರಂಗ' ದಿನಕಳೆದಂತೆ ವ್ಯಾಪಿಸುತ್ತಿರುವ ರೀತಿ.

ಬೆಂಗಳೂರಿನ ಯಾವುದೋ ಮೂಲೆಯ ಉತ್ತರಹಳ್ಳಿಯ ವೈಭವಿ ಚಿತ್ರಮಂದಿರದಲ್ಲಿ ಹತ್ತೊಂಬತ್ತನೇ ದಿನಕ್ಕೂ ಹೌಸ್‌ಫುಲ್ ಬೋರ್ಡು. ಬನಶಂಕರಿಯ ಕಾಮಾಕ್ಯದಲ್ಲಿ ಬಿಡುಗಡೆಯಾದ ಎರಡು ವಾರಗಳ ಕಾಲ ದಿನಂಪ್ರತಿ ಎರಡು ಆಟಗಳಿದ್ದದ್ದು ಮೂರನೇ ವಾರಕ್ಕೆ ಕಾಲಿಟ್ಟದ್ದೇ ಷೋಗಳ ಸಂಖ್ಯೆ ನಾಲ್ಕಕ್ಕೇರಿದೆ. ಕಳೆದ ಮೂರ್‍ನಾಲ್ಕು ದಿನದಿಂದ ಅಂಥಾ ಮಳೆಯಲ್ಲೂ 'ಚಿತ್ರಮಂದಿರ ಭರ್ತಿ' ಬೋರ್ಡು ತೆಗೆಯುತ್ತಲೇ ಇಲ್ಲ.

ಮಾಗಡಿ ರಸ್ತೆಯ ವೀರೇಶ, ಮಹಾಲಕ್ಷ್ಮಿ ಲೇಔಟಿನ ನಂದಿನಿ, ಮೈಸೂರಿನ ಲಿಡೋ ಮುಂತಾದ ಥೇಟರುಗಳಲ್ಲಿ ಶುರುವಿನಲ್ಲಿಲ್ಲದ ಜನದಟ್ಟಣೆ ಇಪ್ಪತ್ತನೇ ದಿನದ ಹೊತ್ತಿಗೆ ಕಿಕ್ಕಿರಿಯುತ್ತಿದೆ. ಇದು ಮುಂಗಾರಿನ ಮಳೆಗಾಲ. ಒಂದೆಡೆ ರಾಜಮೌಳಿಯ ಬಾಹುಬಲಿ ಆರ್ಭಟವಾದರೆ ಮತ್ತೊಂದೆಡೆ ಸಲ್ಮಾನ್‌ಖಾನ್‌ನ 'ಭಜರಂಗಿ ಭಾಯ್ಜಾನ್' ಬಿರುಗಾಳಿ. 250 ಕೋಟಿ ವೆಚ್ಚದಲ್ಲಿ ಸೃಷ್ಟಿಯಾದ ಬಾಹುಬಲಿ ನೀಡಲಾಗದ 200 ಕೋಟಿ ಸುರಿದು ಸಲ್ಮಾನ್‌ನಿಂದ ಕಲ್ಪಿಸಲಾಗದ ಯಾವ 'ಜಾದೂ' ರಂಗಿತರಂಗದಲ್ಲಿದೆ?

ರಾಜಮೌಳಿಯಂಥ ಮಾಂತ್ರಿಕನಿಲ್ಲ, ಕೋಟಿಕೋಟಿಯ ಸೆಟ್ಟು ಹಾಕಿ ಸೃಷ್ಟಿಸಿದ ದೃಶ್ಯ ವೈಭವವಿಲ್ಲ, ಬಾಲಿವುಡ್ ದೊರೆ ಸಲ್ಮಾನ್‌ನಂಥ ದೈತ್ಯರೂ ಇಲ್ಲ, ಕನಿಷ್ಠ ಪುನೀತ್, ದರ್ಶನ್, ಯಶ್ ಥರದ ಸ್ಟಾರ್‌ಗಳೂ ಇಲ್ಲದೆ ಹೇಳಹೆಸರಿಲ್ಲದ ಹೀರೋ, ಅನಾಮಿಕ ಹೀರೋಯಿನ್‌ಗಳು, ಆಗಂತುಕ ಡೈರೆಕ್ಟರ್, ಯಾರೋ ಪ್ರೊಡ್ಯೂಸರ್ ಇನ್ನಾರೋ ತಾಂತ್ರಿಕರನ್ನಿಟ್ಟುಕೊಂಡು ಸೃಷ್ಟಿಸಿದ 'ರಂಗಿತರಂಗ'ದ ಒಳಗೆ ಅಂಥಾದ್ದೇನಿದೆ?


ಕೇವಲ ಅರವತ್ತೋ ಅರವತ್ತೈದೋ ಥೇಟರುಗಳಿಗಷ್ಟೇ ಬಿಡುಗಡೆಯಾದ 'ರಂಗಿತರಂಗ' ಮೊದಮೊದಲು ಸುದೀಪ್‌ನ 'ರನ್ನ' ಮತ್ತು ಶಿವಣ್ಣನ 'ವಜ್ರಕಾಯ'ದ ಮುಂದೆ ತರಗೆಲೆಯಂತೆ ನಿಟ್ಟುಸಿರಿಟ್ಟಿತ್ತು. ಹೆಸರೇ ವಿಚಿತ್ರ. ಕನ್ನಡ ಜಾಯಮಾನಕ್ಕೆ ಒಗ್ಗದ ಟೈಟಲ್ಲಿಟ್ಟು ಅನಾಮಧೇಯರನ್ನಿಟ್ಟುಕೊಂಡು ಇನ್ನೇನು ಮೊದಲ ದಿನಕ್ಕೇ ಮಕಾಡೆ ಬಿತ್ತು ಎಂಬಂತಿರುವಾಗಲೇ ಬಾಹುಬಲಿ ತೆರೆಗಪ್ಪಳಿಸಿತು. ಅಬ್ಬರ ಹೇಗಿತ್ತೆಂದರೆ ಎರಡನೇ ವಾರದ ಹೊತ್ತಿಗೆ ಅರವತ್ತರಷ್ಟಿದ್ದ ಥೇಟರುಗಳ ಸಂಖ್ಯೆ ಮೂವ... ಕುಸಿದಿತ್ತು, ಮೂರನೇ ವಾರದ ಹೊತ್ತಿಗೆ ಇನ್ನೇನು ... ನಾಮಾವಶೇಷ ಎಂದು ಸಿನಿಮಾಪಂಡಿತ... ಕೈಚೆಲ್ಲಿಯಾಗಿತ್ತು.



ಆದರೆ 'ಭಜರಂಗಿ ಭಾಯ್ಜಾನ್'ನ ರಾಷ್ಟ್ರ... ಆರ್ಭಟದ ನಡುವೆಯೂ ರಂಗಿತರಂಗದ ಅ... ಭದ್ರವಾಗತೊಡಗಿತ್ತು. ಮೂರನೇ ವಾರದ ಹೊತ್ತಿಗೆ ... ಇದರತ್ತ ಮುಖ ಮಾಡಲಾರಂಭಿಸಿದ್ದ. ಅರವತ್... ಮೂವತ್ತೈದಕ್ಕೆ ಕುಸಿದಿದ್ದ ಥೇಟರುಗಳ ಸಂಖ್ಯೆ ... ಕೊನೇ ವಾರದ ಹೊತ್ತಿಗೆ ಅಂದರೆ ನಾಲ್ಕನೇ ... ತೊಂಬತ್ತಕ್ಕೇರುವ ಎಲ್ಲಾ ಲಕ್ಷಣಗ... ನಿಚ್ಚಳಗೊಂಡಿದ್ದವು. ಅದೂ ಸಿನಿಮಾ ನೋಡ... ಬಂದಿದ್ದ ದಾವಣಗೆರೆ ಮೂಲದ ಸ... ಹುಲಿಮನೆ ಎಂಬ ಸಾಫ್ಟ್‌ವೇರ್ ಇಂಜಿನಿ... ತನ್ನ 32ನೇ ವಯಸ್ಸಲ್ಲೇ ಹಾರ್ಟ್ ಅಟ... ಸಾಯುತ್ತಾನೆಂದರೆ; ಯಾವುದೋ ... ಹಾಲಿವುಡ್‌ನ ಡ್ರಾಕುಲ ಮತ್ತು ಕನ್ನಡ... ನಿನ್ನ ಬಿಡಲಾರೆ ಟೈಪಿನ ಹಾರರ್ ಹುಟ್ಟು... 'ಶಾಕ್' ಅನ್ನು ರಂಗಿತರಂಗದ ಡೈರ... ಹುಟ್ಟಿಸಿರಬಹುದೆ?

ಇದು ರಂಗಿತರಂಗದ ಕುರಿತಂತೆ ಹಬ್ಬಿದ ... ಸಿನಿಮಾ ವೀಕ್ಷಣೆಗೆಂದು ಬಂದ ಟೆಕ್ಕಿ ಥೇಟ... ಎದೆಬಡಿದು ಸತ್ತ ಸುದ್ದಿ ಕಾಡ್ಗಿಚ್ಚಿನಂತೆ ಹ... ವಾಸ್ತವವೇನೆಂದರೆ ಸುಜಿತ್ ಹುಲಿಮನೆ ಕಾ... ಚಿತ್ರಮಂದಿರಕ್ಕೆ ಪತ್ನಿ ಮೇಘನಾರ ಸಮೇತ ... ಸಿನಿಮಾ ನೋಡಿದ್ದೇನೋ ನಿಜ. ಆದರೆ ... ಆಸ್ಪತ್ರೆಯಲ್ಲಿ. ಅದು ಹಿಂದಿನಿಂದಲೂ ಕಾ... ಹೃದಯ ದೌರ್ಬಲ್ಯ. ಇದಕ್ಕೂ ಮುನ್ನ ... ಎರಡು ಬಾರಿ ಹಾರ್ಟ್ ಅಟ್ಯಾಕ್... ಚಿಕಿತ್ಸೆಯೂ ನಡೆದಿತ್ತು. ... ನೋಡಿ ಮನೆಗೆ ಬಂದ... ಮೂರನೇ ಬಾರಿ ಹ... ಘಾಸಿಗೊಂಡಿತ್ತು. ಸಿನಿ...

ಇನ್‌ಫೋಸಿಸ್ ನೌಕರಿ, ಅಮೆರಿಕ ವಾಸ ಮತ್ತು ಪ್ರಕಾಶ್ ಮಾಡಿದ ಸಾಹಸ




ಯೂ ಟ್ಯೂಬ್ ತೆರೆದು Anup Bhandari words ಎಂದು ಟೈಪ್ ಮಾಡಿದರೆ 15 ನಿಮಿಷಗಳ ಕಿರುಚಿತ್ರವೊಂದು ಮೂಡಿಬರುತ್ತದೆ. ಅದು ರಂಗಿತರಂಗದ ಡೈರೆಕ್ಟರ್ ಅನೂಪ್ ಅಮೆರಿಕದಲ್ಲಿದ್ದಾಗ ಮಾಡಿದ ಅದ್ಭುತ ಕಿರುಚಿತ್ರ. ಆ ಹೊತ್ತಿಗೆ ಅನೂಪ್ ಇನ್‌ಫೋಸಿಸ್ ಉದ್ಯೋಗಿ. ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದೂ ಕಿರುಚಿತ್ರದ ಹವ್ಯಾಸಕ್ಕಿಳಿದ ಅನೂಪ್‌ಗಿದು ತಂದೆ ಸುಧಾಕರ್ ಭಂಡಾರಿಯವರಿಂದ ಬಂದ ಗೀಳು.

ಈ ಹಿಂದೆ ಉದಯ ಟೀವಿಯಲ್ಲಿ ಬರುತ್ತಿದ್ದ ಮೆಗಾ ಸೀರಿಯಲ್ 'ಪ್ರೇಮದ ಕಾದಂಬರಿ'ಯನ್ನು ನಿರ್ದೇಶಿಸಿದ್ದ ಸುಧಾಕರ್ ಭಂಡಾರಿಯವರ ಇಬ್ಬರು ಮಕ್ಕಳ ಪೈಕಿ ಒಬ್ಬ ರಂಗಿತರಂಗದ ಡೈರೆಕ್ಟರ್ ಅನೂಪ್ ಆದರೆ ಮತ್ತೊಬ್ಬ ಇದೇ ಚಿತ್ರದ ಹೀರೋ ನಿರೂಪ್ ಭಂಡಾರಿ. ಪ್ರೇಮದ ಕಾದಂಬರಿ ನಂತರ 'ಕುರಿಗಳು ಸಾರ್' ಎಂಬ ರಿಯಾಲಿಟಿ ಸೀರಿಯಲ್ ನಿರ್ಮಿಸಿದ್ದೂ ಸುಧಾಕರ್ ಭಂಡಾರಿಯೇ.


ತಂದೆಯ ಟಿಲಿಸೀರಿಯಲ್‌ಗಳಲ್ಲಿ ಅನೂಪ್ ಯಾವತ್ತೂ ಕೆಲಸ ಮಾಡಲಿಲ್ಲ, ಹಾಗಂತ ಸಿನಿಮಾ ಗೀಳು ಬಿಡಲಿಲ್ಲ, ಇನ್‌ಫೋಸಿಸ್ ಉದ್ಯೋಗಿಯಾಗಿ ಏಳು ವರ್ಷಗಳ ಕಾಲ ಅಮೆರಿಕದಲ್ಲಿರುವಾಗಲೇ ಒಂದರ ಮೇಲೊಂದು ಶಾರ್ಟ್ ಫಿಲ್ಮ್ ಮಾಡುತ್ತಲೇ ಬಂದರು. ಈ ನಿಟ್ಟಿನಲ್ಲಿ ಹಾಲಿವುಡ್ ನಟ ರಸೆಲ್ ಹಾರ್ವರ್ಡ್ ಕೈಜೋಡಿಸಿದ್ದು 'ವರ್ಡ್ಸ್' ಎಂಬ 15 ನಿಮಿಷದ ಕಿರುಚಿತ್ರಕ್ಕೆ. ಒಬ್ಬ ಮೂಗ ಮತ್ತೊಬ್ಬ ಕಿವುಡನ ನಡುವಿನ ವಿಚಿತ್ರ ಮುಖಾಮುಖಿಯ ಕತೆಯುಳ್ಳ ಈ ಕಿರುಚಿತ್ರಕ್ಕೆ ಕ್ಯಾಮರಾಮನ್ನಾಗಿ ಬಂದದ್ದು ಈಗ ರಂಗಿತರಂಗದಲ್ಲಿ ಛಾಯಾಚಿತ್ರ ಮೆರೆದ ಲಾನ್ಸ್ ಕ್ಯಾಪ್ಲನ್!

2010 ರ ನ್ಯೂಯಾರ್ಕ್ ಫಿಲ್ಮ್ ಫೆಸ್ಟಿವಲ್‌ನಲ್ಲಿ 'words' ಅತ್ಯುತ್ತಮ ಕಿರುಚಿತ್ರ ಪ್ರಶಸ್ತಿ ಗಿಟ್ಟಿಸಿತು. ಅದೇ ವರ್ಷ ಲಂಡನ್‌ನಲ್ಲಿ ನಡೆದ ವಿಷನ್ ಫಿಲ್ಮ್ ಫೆಸ್ಟಿವಲ್‌ನಲ್ಲೂ




ವರ್ಡ್ಸ್ ಶ್ರೇಷ್ಠ ಕಿರುಚಿತ್ರವಾಗಿತ್ತು, ಕತೆ, ಚಿತ್ರಕತೆ, ನಿರ್ದೇಶನ ಎಲ್ಲವನ್ನೂ ನಿಭಾಯಿಸಿದ್ದ ಅನೂಪ್ ಇದೇ words ಮೂಲಕ ಟೊರಾಂಟೋ ಮುಂತಾದ ಹತ್ತಾರು ಚಿತ್ರೋತ್ಸವಗಳಲ್ಲಿ ವಿಶೇಷ ಗಮನ ಸೆಳೆದರು. ಹಾಲಿವುಡ್ ತಾಂತ್ರಿಕತೆ ಮತ್ತು ಅನುಭವಕ್ಕೆ ಒತ್ತಾಸೆಯಾಗಿದ್ದು ಬೆಂಗಳೂರಿನ ಎಚ್.ಕೆ. ಪ್ರಕಾಶ್.

ರಿಯಲ್ ಎಸ್ಟೇಟ್ ಉದ್ಯಮಿಯೂ ಆದ ... ಕತೆ ಕೇಳಿದ್ದೇ ಕುತೂಹಲಕ್ಕೆ ಬಿದ್ದರು. ಸಿನಿಮ... ಅಂಥಾ ಆಸಕ್ತಿಯಿಲ್ಲದೆ ಹೋದರೂ ಅನೂಪ್ ... ಕತೆ, ಅದರೊಳಗಿದ್ದ ಭೂತ, ಕತೆಗಿದ್ದ ಹತ್ತಾರು ಆಯಾ... ಪ್ರಕಾಶ್‌ರಂತ ರಿಯಲ್ ಎಸ್ಟೇಟ್ ಉದ್ಯಮಿ... ಮನಸೂರೆಗೊಂಡಿತ್ತು.








...ಶ್ ಸಾವಿಗೂ ಯಾವುದೇ ಸಂಬಂಧವಿಲ್ಲದೆ ಹೋದರೂ ...ಶ್ ಚಾನಲ್ಲುಗಳು ಆತುರಗೆಟ್ಟು ಸಿನಿಮಾ ...ಡುತ್ತಿರುವಾಗಲೇ ಹೃದಯಾಘಾತವಾಯಿತೆಂದು ...ಬ್ಬಿಸಿದ್ದವು!

ಇದು ನೆಗೆಟೀವ್ ಪಬ್ಲಿಸಿಟಿ. ಇದಕ್ಕೂ ವಾರದ ...ನಲು ತೆರೆಕಂಡ ಗಣಪ ಮತ್ತು ಗೋಳಿಹಟ್ಟಿಯಂಥ ...ಬಜೆಟ್ಟಿನ ಚಿತ್ರಗಳೇ ಬಾಹುಬಲಿಯೆದುರು ತಟ್ಟಾಡಿ ...ಟ್ಟಿದ್ದವು. ನಂತರವೂ ಅಲ್ಲಾಡದೇ ನೆಲೆನಿಂತ ರಂಗಿತರಂಗ ...ರ ನಿರೀಕ್ಷೆಗೂ ನಿಲುಕದ ಯಾವ ಲೆಕ್ಕಾಚಾರಕ್ಕೂ ...ಕದ ವಿಚಿತ್ರ ಟ್ರೆಂಡ್ ಒಂದನ್ನು ಸದ್ದಿಲ್ಲದೆ ...ಟ್ಟುಹಾಕತೊಡಗಿತ್ತು.

ಇದರರ್ಥ ಬಾಹುಬಲಿ ಮತ್ತು ಭಜರಂಗಿಯಂಥ ... ಚಿತ್ರಗಳಿಂದಲೂ ನೀಡಲಾಗದ 'ಏನೋ ಒಂದನ್ನು' ...ಕ ರಂಗಿತರಂಗದಲ್ಲಿ ಕಂಡುಕೊಂಡಿದ್ದ. ಅದೇನೆಂಬ ...ಗೆ ಹತ್ತಾರು ಕೊವೆಗಳ ನೂರಾರು ಅರ್ಥ ಅನೂಪ್ ...ಡಾರಿಯ ವಿಶಿಷ್ಟ ಕತೆಯೇ ಉತ್ತರವಾಗಿತ್ತು.



ಹಾಸನದ ಚಿತ್ರಮಂದಿರದ ಹೌಸ್‌ಫುಲ್

...ಪತ್ರಿಕೆ, ಮೀಡಿಯಾಗಳೆಲ್ಲ ಬಾಹುಬಲಿ ಮತ್ತು ...ಜರಂಗಿ ಜೊತೆ ಈ ಚಿತ್ರವನ್ನೇಕೆ ಹೋಲಿಕೆ ...ಡುತ್ತಿದ್ದಾರೋ ಗೊತ್ತಿಲ್ಲ. ಬಹುಶಃ ಬಾಕ್ಸ್ ಆಫೀಸ್ ...ನದಂಡವೊಂದನ್ನೇ ಆಧರಿಸಿ ಲೆಕ್ಕ ಹಾಕುತ್ತಿರಬೇಕು. ...ರೆ ರಂಗಿತರಂಗ ಯಾವ ಎಣಿಕೆಗೂ ಸಿಲುಕದ ಆಕ್ಷನ್, ...ರರ್, ಕಾಮಿಡಿ, ರೋಮಾನ್ಸ್ ಇತ್ಯಾದಿ ಯಾವ ಪಟ್ಟಿಗೂ ...ದ ವಿಚಿತ್ರ ಥ್ರಿಲ್ಲರ್!

... ರಸ್ತೆ ಅಪಘಾತವೊಂದರ ಮೂಲಕ ತೆರೆದುಕೊಳ್ಳುವ ... ಬರುಬರುತ್ತಾ ನಿಗೂಢ, ಭಯಾನಕ, ಚಿತ್ರವಿಚಿತ್ರ ...ರುವಿಗೊಳಪಡುತ್ತದೆ. ರಸ್ತೆ ಅಪಘಾತದಿಂದ ...ತರಿಸಿಕೊಂಡ ನಾಯಕಿ ತುಂಬು ಗರ್ಭಿಣಿ. ಏನೋ ... ಕನಸು. ಯಾವುದೋ ಭೀತಿ. ಪಶ್ಚಿಮ ಘಟ್ಟದ ...ದಾದ ಕಣಿವೆ ಮಾರ್ಗದಲ್ಲಿ ತನ್ನ ಪತಿ ಡ್ರೈವ್ ಮಾಡುತ್ತಿದ್ದ ... ಯಾವುದೋ ಬೈಕ್ ಒಂದಕ್ಕೆ ಗುದ್ದಿದಂತೆ ಅಸ್ಪಷ್ಟ ...ಪು. ರಸ್ತೆಗಪ್ಪಳಿಸಿ ಜಖಮ್ಮಾದ ಆ ಬೈಕ್‌ನ ತಳದಿಂದ ...ರೋ ರಕ್ತ ಸುರಿಸುತ್ತಾ ತೆವಳುತ್ತಾ ಮೇಲೇಳಲೆತ್ನಿಸುತ್ತಿದ್ದಂತೆ ...ಸು.

...ನಡುರಾತ್ರಿ ಇದ್ದಕ್ಕಿದ್ದಂತೆ ಬೆಚ್ಚಿಬೀಳುವ ಪತ್ನಿಯ ತಲ್ಲಣ ...ರೋ ಗಂಡನಿಗೆ ಅರ್ಥವಾಗುವುದಿಲ್ಲ. ಇಷ್ಟೆಲ್ಲಕ್ಕೂ ... 'ಮನೆ ದೈವ'ದ ಅಸಂತುಷ್ಟಿಯೇ ಕಾರಣ ಎಂಬುದು ...ತ್ನಿಯ ವಾದ. ತನ್ನ ತಾತ ಕರಾವಳಿ ಕಾಡ ಕಣಿವೆಯ ...ಮರೊಟ್ಟು ಎಂಬ ಕುಗ್ರಾಮದಿಂದ ಯಾವುದೋ ಕಾಲಕ್ಕೆ ...ಂಗಳೂರಿಗೆ ವಲಸೆ ಬಂದರೆಂದೂ ಕಮರೊಟ್ಟು ಮನೆಯ ...ಲದೈವವಾಗಿದ್ದ ಗುಡ್ಡದ ಭೂತದ ಒಡವೆಗಳ ಸಮೇತ ...ಸೆ ಬಂದಿದ್ದರಿಂದಾಗಿ ಆವತ್ತಿನಿಂದ ಆ ಭೂತಕ್ಕೆ 'ಕೋಲ' ...ಡದೇ ಇರುವುದೇ ತನ್ನೆಲ್ಲಾ ಸಂಕಷ್ಟಕ್ಕೆ ಮೂಲವೆಂಬ ...ನಂಬಿಕೆಯ ಆತಂಕದೊಂದಿಗೆ ಸಿನಿಮಾದ ಕತೆ ...ರಂಭವಾಗುತ್ತದೆ.

ಆದರೆ ಹೀರೋ ನಾಸ್ತಿಕ. ಅಮೆರಿಕದ ಪ್ರತಿಷ್ಠಿತ ...ಕೆಯೊಂದಕ್ಕೆ ಮಿಥಿಕಲ್ ರಿಪೋರ್ಟರ್. ದೆವ್ವ ಭೂತ ... ಕುತರ್ಕ್ಕಗಳಲ್ಲಾಗಲಿ ನಂಬಿಕೆಯಿಲ್ಲ. ಹೆಂಡತಿಯ ...ನಿಂದ ಭೂತ, ಕೋಲ ಇತ್ಯಾದಿ ಪದ ಕೇಳಿದ್ದೇ


ನಕ್ಕು ಗೇಲಿ ಮಾಡುತ್ತಾನೆ. ಆದರೂ ಪತ್ನಿಯ ಮೇಲಿನ ಪ್ರೀತಿಗೆ ಬಿದ್ದು ಬೆಂಗಳೂರಿನಿಂದ ಕಮರೊಟ್ಟು ಭೂತಕ್ಕೆ ಒಡವೆಗಳನ್ನರ್ಪಿಸಿ ಕೋಲದ ಹರಕೆಗೆ ಸಮ್ಮತಿಸುತ್ತಾನೆ. ಭೂತದ ಒಡವೆಗಳಿರುವ ಪುಟ್ಟ ಮರದ ಪೆಟ್ಟಿಗೆಯೊಂದನ್ನು ತಮ್ಮ ಕಾರಲ್ಲಿ ಹೊತ್ತ ಹೀರೋ ಮತ್ತು ಗರ್ಭಿಣಿ ಹೀರೋಯಿನ್ ತುಳುನಾಡಿನ ಸಸ್ಯ ಸಮೃದ್ಧ ದಟ್ಟಡವಿಗೆ ಬರುತ್ತಿದ್ದಂತೆಯೇ ಕತೆ ವಿಚಿತ್ರ ತಿರುವೊಂದಕ್ಕೆ ಹೊರಳುತ್ತದೆ.

ಗರ್ಭಿಣಿ ಮಹಿಳೆಯ ಮುಖ ನೋಡಿದ್ದೇ ಗಾಬರಿಯಿಂದ ಮರದಿಂದ ಬೀಳುವ ದೋಣಿಯಾತ, ಆ ನಂತರ ಕಾಡಿನ ಭಯಾನಕ ಪರಿಸರವನ್ನು ಬಿಚ್ಚಿಡುವ ರಫೀಕ್ ಎಂಬಾತ, ಕಾಡಿನ ಕೊರಕಲು ದಾರಿಯ ಕತ್ತಲಲ್ಲಿ ಏನನ್ನೋ ಕಂಡು ಕಿಟಾರನೇ ಕಿರುಚುವ ಪತ್ನಿ, ಶಾಕ್‌ನಿಂದಾಗಿ ಗುಂಡಿಗೆ ಸಿಲುಕುವ ಜೀಪು, ಜೀಪನ್ನು ಅಲ್ಲೇ ಬಿಟ್ಟು ಕಗ್ಗತ್ತಲಲ್ಲಿ ಕಮರೊಟ್ಟು ಮನೆಯತ್ತ ಸಾಗುವ ಜೋಡಿ, ಕಾಡ ಕಗ್ಗತ್ತಲನ್ನು ರುದ್ರ ರಮಣೀಯವಾಗಿ ಸೆರೆಹಿಡಿಯುವ ಕ್ಯಾಮರಾ ಚಳಕ, ಹೊಳೆಯ ಕರಾಳ, ಅದನ್ನು ಹಗ್ಗದ ಸೇತುವೆ ಮೂಲಕ

ದಾಟುವಾಗಿನ ರೋಮಾಂಚನ, ಇದ್ದಕ್ಕಿದ್ದಂತೆ ಕಿರುಚುವ ಸದ್ದು, ಅದನ್ನು ಕೊಳ್ಳಿ ದೆವ್ವಗಳೆನ್ನುವ ಪತ್ನಿ ಮತ್ತು ಯಾರೋ ಬೇಟೆಗಾರರಿರಬೇಕೆಂದು ಅಲ್ಲಗಳೆಯುವ ಪತಿಯಿಂದಾಗಿ ಇಡೀ ಚಿತ್ರವಂದಿರವೇ ರೋಚಕ ಕತ್ತಲೊಳಕ್ಕೆ ಮುಳುಗುತ್ತದೆ.

ಹೊಳೆ ದಾಟಿ ಹಳೆಯ ಕಮರೊಟ್ಟು ಮನೆಗೆ ಬಂದರೆ ಆ ರಾತ್ರಿಯಲ್ಲೂ ಯಾರೋ ಹಿಂಬಾಲಿಸಿದಂತಾಗುತ್ತದೆ. ತಿರುಗಿ ನೋಡಿದರೆ ಆಕೆ ವಿಕಾರಿ ಮುದುಕಿ. ಕಣ್ಣು ಗುಡ್ಡೆ ಕೆಕ್ಕರಿಸುತ್ತಲೇ ಮನೆಯ ಬೀಗದ ಕೈಹಿಡಿದು ನಿಂತಿದ್ದಾಳೆ. ಬೀಗ ತೆರೆದರೆ ಎಲ್ಲವೂ ವಿಚಿತ್ರ. ಯಾರೂ ವಾಸಿಸದ ಆ ಮನೆಯೊಳಕ್ಕೆ ಭೂತದ ಒಡವೆಗಳುಳ್ಳ ಪೆಟ್ಟಿಗೆ ತಂದಿಟ್ಟದ್ದೇ ಏನೋ ಬದಲಾವಣೆಯಾದಂತೆ ನಿರಾಳಗೊಂಡ ಪತ್ನಿಗೆ ಮಾರನೇ ಬೆಳಗ್ಗೆ ಮತ್ತೊಂದು ಆಘಾತ. ಬಾವಿಯಿಂದ ನೀರು ಸೇದುತ್ತಿದ್ದಾಗಲೇ ಯಾರೋ ಹಿಂದಿನಿಂದ ದಬ್ಬಿದಂತೆ. ಇನ್ನೇನು ಬಾವಿಗೆ ಬಿದ್ದು ಮುಳುಗಬೇಕೆನ್ನುವಷ್ಟರಲ್ಲಿ ಹೀರೋ ಎಂಟ್ರಿ.

ಕ್ಷಣಕ್ಷಣಕ್ಕೂ ಇಂಥದ್ದೇ ಆಘಾತ, ಭೀತಿ,



ರೋಮಾಂಚನಗಳನ್ನು ಡೈರೆಕ್ಟರ್ ಅನೂಪ್ ಕಟ್ಟಿಕೊಡುತ್ತಾರೆ. ಹಾಗಂತ ಇದು ಹಾರರ್ ಚಿತ್ರವಲ್ಲ. ಸಸ್ಪೆನ್ಸ್, ಥ್ರಿಲ್ಲರ್. ಥ್ರಿಲ್ ಎಂಬುದು ಎಷ್ಟೊಂದು ಸಮೃದ್ಧವಾಗಿದೆಯೆಂದರೆ ಮುಂದೇನಾಗುತ್ತದೆ ಎಂದು ಪ್ರೇಕ್ಷಕ ಕತೆ ಬಗ್ಗೆ ತಲೆ ಕೆರೆದುಕೊಂಡರೆ ಯಾವುದೋ ಆಕೃತಿಯೊಂದು ದಿಗ್ಗನೇ ಕತ್ತಲನ್ನು ಸೀಳಿ ಬಂದಂತಾಗುತ್ತದೆ. ಕಾಡು, ಕರಾಳ ನದಿ, ಕಗ್ಗತ್ತಲು, ಕೊಳ್ಳಿ ದೆವ್ವ, ಭೂತದ ವೇಷ, ಕತ್ತಲಲ್ಲೇ ಮಳೆ, ಚಿತ್ರವಿಚಿತ್ರ ಘಟನಾವಳಿಗಳು, ಅನಿರೀಕ್ಷಿತ ಪಾತ್ರಧಾರಿಗಳು.

ಕಮರೊಟ್ಟು ಭೂತದ ಕೋಲಕ್ಕೆ ತಯಾರಿಯ ಮಧ್ಯೆಯೇ ಹೀರೋನ ಗರ್ಭಿಣಿ ಪತ್ನಿ ಇದ್ದಕ್ಕಿದ್ದಂತೆ ನಾಪತ್ತೆಯಾಗುತ್ತಾಳೆ. ಕಾಡ ನಡುವಿನ ಕತ್ತಲೊಳಗೆ ಏಕಾಏಕಿ ನಾಪತ್ತೆಯಾದ ಪತ್ನಿಯನ್ನು ಹುಡುಕಿಕೊಡುವಂತೆ ಹೀರೋ ಪೊಲೀಸ್ ಠಾಣೆಗೆ ಬಂದರೆ ಅದರ ಇನ್ಸ್‌ಪೆಕ್ಟರ್‌ನ ವರ್ತನೆ ದೆವ್ವಕ್ಕಿಂತಲೂ ಭೀಕರ. ಆತನ ಮುಖಚರ್ಯೆಯೇ ವಿಚಿತ್ರ. ಕಣ್ಮರೆಯಾದ ನಿನ್ನ ಪತ್ನಿ ಅಪಘಾತದಲ್ಲಿ ಸತ್ತು ಆರು ವರ್ಷಗಳಾಗಿವೆ. ನಿನ್ನದು ಮಿಸ್ಸಿಂಗ್ ಕೇಸಲ್ಲ ಮೆಂಟಲ್ ಕೇಸು ಎಂದು ಇನ್ಸ್‌ಪೆಕ್ಟರ್ ಗಹಗಹಿಸಿ ನಗುತ್ತಿದ್ದಂತೆ ಕತೆ ಕುರಿತಂತೆ ಆತನಕ ತುದಿಗಾಲಲ್ಲಿ ಏನೋ ಲೆಕ್ಕ ಹಾಕಿದ್ದ ಪ್ರೇಕ್ಷಕನ ನಿರೀಕ್ಷೆಗಳೆಲ್ಲವೂ ತಲೆಕೆಳಗಾಗಿ ಬಿಡುತ್ತದೆ.

ಹಾರರ್ ಮೂಡ್‌ನಲ್ಲಿದ್ದ ಸಿನಿಮಾ ಇಲ್ಲಿಂದಾಚೆಗೆ ಯಾವುದೋ ಮನೋವೈಜ್ಞಾನಿಕ ತಿರುವೊಂದಕ್ಕೆ ಇಳಿಯುತ್ತದೆ. ಅಂದರೆ ಯಾವತ್ತೋ ಅಪಘಾತದಲ್ಲಿ ಸತ್ತ ತನ್ನ ಪತ್ನಿ ಆ ಕ್ಷಣದ ತನಕ ತನ್ನ ಜೊತೆಗಿದ್ದಳೆಂದು ಹೀರೋ ಭಾವಿಸಿದ್ದೇ ಭ್ರಮೆ!


ಹಾಗೆಂದು ನಂಬಲು ಹೀರೋ ಸಿದ್ಧನಿಲ್ಲ. ಇಂಥ ಕ್ಷೋಭೆಯಲ್ಲಿರುವಾಗಲೇ ಪತ್ರಕರ್ತೆಯೊಬ್ಬಳು ಎಂಟ್ರಿ ಕೊಡುತ್ತಾಳೆ. ಆಕೆಗೆ ಖ್ಯಾತ ಕತೆಗಾರ ಅನಾಮ್ಮ ಯಾರೆಂದು ತಿಳಿಯುವ ತವಕ. ತಾನು ಹುಡುಕುತ್ತಿರುವ Ghost ರೈಟರ್ ಬೇರೆ ಯಾರೂ ಅಲ್ಲ ಇದೇ ಕಮರೊಟ್ಟು ಕಾಡಿನಲ್ಲಿ ಕಣ್ಮರೆಯಾದ ಪತ್ನಿಗಾಗಿ ಅಲೆದಾಡುತ್ತಿರುವ ಹೀರೋ ಎಂದು ಗೊತ್ತಾಗಿದ್ದೇ ಆತನ ಸಹಾಯಕ್ಕೆ ನಿಲ್ಲುತ್ತಾಳೆ. ಕಾಡ ನಡುವೆ ಕೋವಿ ಹಿಡಿದು ನಿಗೂಢವಾಗಿ ಸುತ್ತಾಡುವ ಆಸಾಮಿಯೇ ತನ್ನ ಪತ್ನಿಯನ್ನು ಹೊತ್ತೊಯ್ದಿರಬೇಕೆಂಬ ಹೀರೋನ ಎಣಿಕೆ ತಪ್ಪಾಗುವ ಮೂಲಕ ಕತೆ ಕಾಡ ನಡುವಿನ ಮರಳು ಕಳ್ಳ ಸಾಗಾಣಿಕೆ, ಕೇರಳ-ಕರ್ನಾಟಕ ನಡುವಿನ ಸ್ಮಗ್ಲಿಂಗ್, ಅದಕ್ಕೆ ಪೊಲೀಸ್ ಪುಢಾರಿಗಳ ರಕ್ಷೆಯತ್ತ ಸಾಗುತ್ತದೆ.

ಮರಳು ಸ್ಮಗ್ಲಿಂಗ್‌ನ ಕತೆಯೆಂದುಕೊಂಡರೆ ಅದು ಇನ್ನಾರೋ ಹರಿಣಿ ಎಂಬಾಕೆಯ ಡೈರಿಗೆ ಬಂದು ನಿಲ್ಲುತ್ತದೆ. ಡೈರಿ ಹಿಂದ್ಯಾವತ್ತೊ ನಡೆದ ಅಪಘಾತವನ್ನು ಬಿಚ್ಚಿಡುತ್ತದೆ. ಆ ಪ್ರಕಾರ ಆರು ವರ್ಷಗಳ ಹಿಂದೆ ಸತ್ತವಳೇ ಬೇರೆ ಹೀರೋನ ಪತ್ನಿಯೇ ಬೇರೆ. ಹಾಗಂತ ಹೀರೋ ಆಕೆಯ ಗಂಡನಾ? ಅದೂ ಅಲ್ಲ. ಆತ ಮಡಿಕೇರಿಯಿಂದ ಪಾರ್ಟಿ ಮುಗಿಸಿಕೊಂಡು ಬೈಕಲ್ಲಿ ಬರುತ್ತಿದ್ದಾಗ ಹೀರೋಯಿನ್ ಕಾರಿಗೆ ಸಿಲುಕಿ ತಲೆಪೆಟ್ಟಿನಿಂದಾಗಿ ಜ್ಞಾಪಕಶಕ್ತಿಯನ್ನೇ ಕಳಕೊಂಡಾತ. ತಾನ್ಯಾರೆಂಬುದು ಆತನಿಗೇ ಗೊತ್ತಿಲ್ಲ.

ಕತೆ ಒಂದು ಮಗ್ಗುಲಿಗೆ ಹೊರಳಿತೆಂದು ಪ್ರೇಕ್ಷಕ ಲೆಕ್ಕ ಹಾಕುವುದೇ ಒಂದಾದರೆ ಡೈರೆಕ್ಟರ್ ಅನೂಪ್ ಆಘಾತವೇ ಮತ್ತೊಂದು. ಲವ್‌ಸ್ಟೋರಿ ಎಂದುಕೊಂಡರೆ

ಹಾರರ್. ಹಾರರ್ ಎಂದುಕೊಂಡರೆ ಥ್ರಿಲ್ಲರ್. ಥ್ರಿಲ್ಲರ್ ಎನ್ನುತ್ತಿದ್ದಂತೆಯೇ ಸೈಕಾಲಜಿ. ಸೈಕಾಲಜಿಯತ್ತ ತಲೆಕೆಡಿಸಿಕೊಂಡರೆ ಪತ್ತೇದಾರಿ. ಒಂದು ಕತೆಯಾ? ಅಲ್ಲ-

ಹೀರೋಯಿನ್ ಕತೆಯಲ್ಲೇ ಹೀರೋನ ಪೂರ್ವಾಶ್ರಮದ ಕತೆ ಅನಾವರಣಗೊಳ್ಳುತ್ತದೆ. ಹೀರೋ ಮೂಲಕ ಕೋಲದ ಪಾತ್ರಧಾರಿ ಅಂಗಾರನ ದುರಂತ ಬಯಲಾಗುತ್ತದೆ. ಈ ಅಂಗಾರನ ಹೆಣ ಮರಕ್ಕೆ ನೇತಾಡಿದ ಕತೆಯಲ್ಲಿ ಆ ಊರಿನ ಪಾಳೇಗಾರನ ಮತ್ತೊಂದು ಕತೆಯಿದೆ. ಅದೇ ಹಕೀಕತ್ತೆಂದುಕೊಂಡರೆ ಅಂಗಾರನ ಸಾವಿನ ತಿಥಿಯ ರಹಸ್ಯ ತೆರೆದುಕೊಳ್ಳುತ್ತದೆ. ಅಲ್ಲಿರುವುದು ಪೋಸ್ಟ್‌ಮಾಸ್ಟರ್ ಪಾತ್ರಧಾರಿ ಸಾಯಿಕುಮಾರ್ ಆತನ ಪತ್ನಿ ಅನುಸೂಯಳ ನಿಗೂಢ ಪ್ರೇಮಿ, ಆತ ನಡೆಸುವ ಕ್ಲಿನಿಕ್, ಅಲ್ಲಿ ತಪಾಸಣೆಗೆ



ನಿರ್ದೇಶಕ ಅನೂಪ್ ಭಂಡಾರಿ

ಬರುವ ಗರ್ಭಿಣಿಯರ ಸರಣಿ ಹತ್ಯಾಕಾಂಡ. ಗುಡ್ಡದ ಭೂತವೆಂಬುದು ಇಲ್ಲಿ ಕೇವಲ ಸಂಕೇತ ಮಾತ್ರ. ಸಾಯಿಕುಮಾರ್ ಭೂತದ ವೇಷ ತೊಟ್ಟು ವಿಜೃಂಭಿಸುವ ರೀತಿಯೇ ಅಸಾಧ್ಯ ಕ್ಲೈಮಾಕ್ಸೊಂದನ್ನು ಕಟ್ಟಿಕೊಡುತ್ತದೆ.

ನಿರ್ದೇಶಕ ಅನೂಪ್ ಭಂಡಾರಿಯ ಸಂಗೀತದ ಮಜವೇ ಒಂದಾದರೆ ಅಜನೀಶ್ ಲೋಕನಾಥ್ ನೀಡುವ ಹಿನ್ನೆಲೆ ಸಂಗೀತ ಚಿತ್ರವನ್ನು ಹಾಲಿವುಡ್ ಮಟ್ಟಕ್ಕೇರಿಸುತ್ತದೆ. ಸ್ಟಾರ್ ಹೀರೋಗಳಿಲ್ಲ ನಿಜ. ಆದರೆ ಸ್ಟಾರ್‌ಗಳು ಒಬ್ಬರಾ ಇಬ್ಬರಾ? ಹಾಲಿವುಡ್‌ನ ಉದಯೋನ್ಮುಖ ಕ್ಯಾಮರಾಮನ್ ಲ್ಯಾನ್ಸ್ ಕ್ಯಾಪ್ಲನ್ ಇದರ ಅಸಲೀ ಹೀರೋ. ಅವರೊಂದಿಗೆ ಸರಿಸಮವಾಗಿ ಮತ್ತೊಬ್ಬ ಕ್ಯಾಮರಾಮನ್ ವಿಲಿಯಂ ಡೇವಿಡ್ ಕೈಜೋಡಿಸಿದ್ದಾರೆ. ದೃಶ್ಯ ವೈಭವವೋ ಕಥಾ ಸಮೃದ್ಧವೋ ರೋಚಕವೋ ರೋಮಾಂಚನವೋ ನಿರ್ಧರಿಸುವವರ್ಯಾರು? ಒಮ್ಮೆ ನೋಡಿಬಿಟ್ಟರೆ ಮತ್ತೆ ಮತ್ತೆ ನೋಡಬೇಕೆಂಬ ಯಾವುದೋ ಸೆಳೆತವೊಂದು ರಂಗಿತರಂಗದಲ್ಲಿದೆ. ಅದು ಸಲ್ಮಾನ್‌ಖಾನ್‌ನ 'ಭಜರಂಗಿ'ಯಾಗಲಿ ರಾಜಮೌಳಿಯ 'ಬಾಹುಬಲಿ'ಯಾಗಲಿ ಸೃಷ್ಟಿಸಲಾಗದ ಸೆಳೆತ.

■ ರಾ. ಸೋಮನಾಥ್

ಗುಡ್ಡದ ಭೂತ, ಕಮರೊಟ್ಟು ಎಂಬ ಊರೇ ಇಲ್ಲ!

ನಾನು ಯಾವ ಉದ್ದೇಶವಿಟ್ಟು ಚಿತ್ರಕತೆ ಹೆಣೆದಿದ್ದೆನೋ ಅದಕ್ಕೆ ತಕ್ಕಂತೆ ಪ್ರೇಕ್ಷಕ ಸ್ಪಂದಿಸುತ್ತಿರುವುದೇ ಯಶಸ್ಸಿಗೆ ಮುಖ್ಯ ಕಾರಣ....!

ಇದರ ಹೊರತಾಗಿ ನಿರ್ದೇಶಕ ಅನೂಪ್ ಚಿತ್ರದ ಕುರಿತಂತೆ ಹೆಚ್ಚು ಮಾತಾಡಲಾರ. ಮಾತಾಡಬೇಕಿರುವುದು ತನ್ನ ಕೆಲಸ ಮಾತ್ರವೆಂಬ ನಂಬಿಕೆಯಿರಬೇಕು. ಮಿಸ್ಟರಿ ಹಿಂದಿನಿಂದಲೂ ತನಗೆ ಫೇವರಿಟ್ ವಿಷಯವೆಂಬ ಒಂದೇ ಮಾತಿನ ಉಪಸಂಹಾರ ಬೇರೆ. ಚಿಕ್ಕಂದಿನಲ್ಲೇ ಟೀವಿಯಲ್ಲಿ 'ಗುಡ್ಡದ ಭೂತ' ಎಂಬ ಸೀರಿಯಲ್ ಬರುತ್ತಿತ್ತು. ಅದರ ಡೈರೆಕ್ಟರ್ ಸದಾನಂದ ಸುವರ್ಣ. ಟೈಟಲ್ ಸಾಂಗ್ 'ದೆನ್ನಾನ ದೆನ್ನಾನ.....' ಎಂಬ ತುಳು ಹಾಡಿನ ಯಾವತ್ತೂ ನನ್ನ ಕಿವಿಯಲ್ಲಿ ಅನುರಣಿಸುತ್ತಲೇ ಇತ್ತು. ಅದರ ಗುಂಗಿನಲ್ಲೇ ಹೆಣೆದ ಕತೆಯಿದು. ಹಾಗೆ ನೋಡಿದರೆ ಕಮರೊಟ್ಟು ಎಂಬ ಊರೇ ಒಂದು ಕಾಲ್ಪನಿಕ ತಾಣ. ಆ ಹೆಸರಿನ ಊರ್ಯಾವುದೂ ತುಳುನಾಡಿನಲ್ಲಿಲ್ಲ. ಕಮರೊಟ್ಟು ಪದದ ಅರ್ಥವೇನೆಂಬುದೇ ಯಾರಿಗೂ ಗೊತ್ತಿಲ್ಲ.

ಇಡೀ ಚಿತ್ರ ಇದೇ ಬ್ಯಾಕ್‌ಗ್ರೌಂಡ್ ಹಾಡಿನದೊಂದಿಗೆ ಸಾಗುತ್ತದೆ. ಗುಡ್ಡದ ಭೂತ ಸೀರಿಯಲ್‌ನ ನಿರ್ಮಾಪಕರಿಂದ ಇದರ ಹಕ್ಕನ್ನು ಖರೀದಿಸಿಯೇ ಬಳಸಿಕೊಂಡಿದ್ದೇವೆ. ಮೌಢ್ಯ ಮತ್ತು ವಾಸ್ತವವನ್ನು ಪ್ರತ್ಯೇಕಿಸಿದಂತೆ ಕತೆಗೆ ತಿರುವುಗಳಿರುವುದೇ ಇದರ ವಿಶೇಷ. 'ಭೂತವೇನಿದ್ದರೂ ಇಲ್ಲಿ ಸಂಕೇತ ಮಾತ್ರ' ಎನ್ನುತ್ತಾರೆ ಅನೂಪ್ ಭಂಡಾರಿ.

ದಾವಣಗೆರೆ-ಚಿಕ್ಕಮಗಳೂರು: ಎಚ್ಚರಿಕೆ, ಕೆಎಸ್ಸಾರ್ಟಿಸಿಯಲ್ಲಿ ಖುದ್ದೂಸ್ ಇದ್ದಾನೆ



ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಅಲಿಯಾಸ್ ಕೆಎಸ್ಸಾರ್ಟಿಸಿ ಅನ್ನೋದು ಹುಂಡರ ದಂಡಿನಂತಾಗಿರೋದು ಸುಳ್ಳಲ್ಲ. ಡ್ರೈವರ್, ಕಂಡಕ್ಟರ್, ಮೆಕ್ಯಾನಿಕ್, ಗುಮಾಸ್ತರಂತಹ ಸಣ್ಣಪುಟ್ಟ ದರ್ಜೆಯ ನೌಕರರ ರಕ್ತ ಹೀರಿ ಮೆರೆದಾಡುವಂತಹ ಸರ್ವಾಧಿಕಾರಿ ಆಫೀಸರ್‌ಗಳ ದಂಡೇ ಇದರೊಳಗೆ ಜಮೆಯಾಗಿದೆ. ಹೋದ ವರ್ಷವಷ್ಟೇ ಅಧಿಕಾರಿಗಳ ಕಿರುಕುಳ ತಾಳಲಾರದೆ ಚಾಲಕರು, ನಿರ್ವಾಹಕರು ರಾಜ್ಯಾದ್ಯಂತ ಬಂದ್ ಮಾಡಿ ಪ್ರತಿಭಟಸಿದ ಮೇಲಾದರೂ ಪರಿಸ್ಥಿತಿ ಸರಿ ಹೋಗಿದೆಯಾ ಎಂದರೆ, ಅದೂ ಇಲ್ಲ, ಹೇಳಬೇಕೆಂದರೆ ಪರಿಸ್ಥಿತಿ ಮತ್ತಷ್ಟೂ ಬಿಗಡಾಯಿಸಿದೆ. ಕೆಳ ದರ್ಜೆಯ ನೌಕರರ ಸಣ್ಣಪುಟ್ಟ ತಪ್ಪುಗಳಿಗೂ ನೋಟಿಸ್ ಕಳಿಸೋದು, ಸಸ್ಪೆಂಡ್ ಮಾಡೋದು, ಕಿರುಕುಳ ನೀಡೋದನ್ನೆ ಚಟ ಮಾಡಿಕೊಂಡಿರುವ ಅಧಿಕಾರಿವರ್ಗ ಲಕ್ಷಾಂತರ ಅವ್ಯವಹಾರದ ತಮ್ಮ ಹಗರಣಗಳನ್ನು ತುಂಬಾ ಸಲೀಸಾಗಿ ಮುಚ್ಚಿಹಾಕಿಕೊಂಡು ಎಸ್ಕೇಪಾಗಿ ಬಿಡುತ್ತಾರೆ. ಇದಕ್ಕೆ ತಾಜಾ ಉದಾಹರಣೆ, ಈ ಹಿಂದೆ ದಾವಣಗೆರೆ ಡಿಪೋದಲ್ಲಿ ಲೆಕ್ಕಾಧಿಕಾರಿಯಾಗಿದ್ದು ಈಗ ಚಿಕ್ಕಮಗಳೂರು ಡಿಪೋಗೆ ವರ್ಗಾಯಿಸಿಕೊಂಡಿರುವ ಅಬ್ದುಲ್ ಖುದ್ದೂಸ್‌ನ ಬರೋಬ್ಬರಿ ಇಪ್ಪತ್ತು ಲಕ್ಷದ ಜೋಡಿ ಹಗರಣ!

ದರ್ಪಿಷ್ಟ ಭ್ರಷ್ಟ ಖುದ್ದೂಸ್

ದಾವಣಗೆರೆ ಕೆಎಸ್ಸಾರ್‌ಟಿಸಿ ವಿಭಾಗ ಒಟ್ಟು 9 ಘಟಕಗಳನ್ನೊಳಗೊಂಡ ದೊಡ್ಡ ವಿಭಾಗ. ದಾವಣಗೆರೆ, ಹೊನ್ನಾಳಿ, ಹರಿಹರ, ಹರಪನಹಳ್ಳಿ, ಚಿತ್ರದುರ್ಗ, ಚಳ್ಳಕೆರೆ, ಶಿವಮೊಗ್ಗ ಭದ್ರಾವತಿ, ಸಾಗರ ಡಿಪೋಗಳು ಇದೇ ವಿಭಾಗಕ್ಕೆ ಒಳಪಡುತ್ತವೆ. ಏನಿಲ್ಲವೆಂದರೂ ಮೂರೂವರೆ ಸಾವಿರದಷ್ಟು ಡ್ರೈವರ್ ಕಂಡಕ್ಟರ್‌ಗಳೇ ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆಲ್ಲ ಸಂಬಳ, ಭತ್ಯೆ ಹಂಚಿಕೆ ಮಾಡುವುದರ ಜೊತೆಗೆ ಟೈರು, ಟ್ಯೂಬು, ಗ್ರೀಸು, ಆಯಿಲ್ಲು ಅಂತ ಅಗತ್ಯ ಪರಿಕರ ಖರೀದಿ ನಡೆಸೋದು ಲೆಕ್ಕಾಧಿಕಾರಿ ವಿಭಾಗಕ್ಕೆ ಬರುತ್ತದೆ. ಕೋಟ್ಯಾಂತರ ರೂಪಾಯಿಗಳ ವ್ಯವಹಾರ ವಹಿವಾಟು ನಡೆಸುವ ಈ ವಿಭಾಗದ ಲೆಕ್ಕಾಧಿಕಾರಿಯಾಗಿ ಸುಮಾರು ವರ್ಷಗಳಿಂದ ಅಂಡು ಊರಿದ್ದವನೇ ಈ ಅಬ್ದುಲ್ ಖುದ್ದೂಸ್. ಈತ ಉಡಾಫೆಯ ಮತ್ತು ಅಷ್ಟೇ ಬೇಜವಾಬ್ದಾರಿಯ ದುರಹಂಕಾರಿ ಎನ್ನುವುದು ವಿಭಾಗದ ಪ್ರತಿಯೊಬ್ಬರಿಗೂ ತಿಳಿದಿರುವಂತದ್ದು.

ಈ ಖುದ್ದೂಸ್‌ನ ಕುಟುಂಬದ ಮೂಲ ಕೇರಳವಾದರೂ ದಾವಣಗೆರೆಯೇ ಸ್ವಂತವೂರು. ಅಪ್ಪ ಖಾಸಗಿ ಕಂಪನಿಯಲ್ಲಿ ಆಡಿಟರ್. ಅಪ್ಪನ ಸಕಲ ಗುಣಗಳನ್ನು ಬಟ್ಟಿ ಇಳಿಸಿಕೊಂಡಿರುವ ಖುದ್ದೂಸ್ ಅಪ್ಪನನ್ನೇ ಮೀರಿಸಿಬಿಟ್ಟ. ಜವಾನನಿಂದ ಹಿಡಿದು ದಿವಾನನವರೆಗೂ ಅವರವರ ಬೇಕುಬೇಡಗಳಿಗೆ ಸಹಕಾರ ಮತ್ತು ಸಪ್ಲೇ ಮಾಡುತ್ತಲೇ ತನ್ನ ಅವ್ಯವಹಾರಗಳನ್ನು ಮುಚ್ಚಿಹಾಕುತ್ತಲೇ ಬಂದ. ದಾವಣಗೆರೆಯಿಂದ ಕುಂಡೆ ಅಲ್ಲಾಡಿಸದಂಗೆ ಕೂತವನು ಯಾವ ಮೇಲಧಿಕಾರಿ ಬಂದರೂ ಅಲುಗಾಡಲಿಲ್ಲ.

ಈತ ಅದೆಷ್ಟು ಪ್ರಭಾವಿಯೆಂದರೆ ಬೆಂಗಳೂರಿನಲ್ಲಿರುವ ಶಾಂತಿನಗರದ ಕೆಎಸ್ಸಾರ್‌ಟಿಸಿ ಸಂಸ್ಥೆಯ ಕೇಂದ್ರ ಕಚೇರಿಯಲ್ಲಿ ಕೂತು ಸುಲಭವಾಗಿ ಆಟ ಆಡಬಲ್ಲಷ್ಟು ಚತುರ. ಇಲಾಖೆಯ ಕಮೀಶನರ್ ಚೇಂಬರಿಗೆ ಯಾರ ಅಪ್ಪಣೆ ಇಲ್ಲದೆ ನುಗ್ಗಿ ವ್ಯವಹರಿಸಬಲ್ಲವನಾದ ಈ ಖುದ್ದೂಸ್ ದಾವಣಗೆರೆ ಕೆಎಸ್ಸಾರ್‌ಟಿಸಿ ವಿಭಾಗದಲ್ಲಿ ಎಬ್ಬಿಸಿದ ಧೂಳು ಅಂತಿಂಥದಲ್ಲ, ತಾನು ಮಾಡಿದ ತಪ್ಪನ್ನು ತನ್ನ ಕೈಕೆಳಗಿನ ಸಹಾಯಕರ ಮುಸುಡಿಗೆ ಒರೆಸಿ ಅವರನ್ನು ಅಮಾನತಿನ ಬಲಿಪೀಠದಲ್ಲಿಡುವುದರಲ್ಲಿ ಈತ ನಿಸ್ಸೀಮ. ಖುದ್ದು ದಾವಣಗೆರೆ-ಚಿತ್ರದುರ್ಗ-ಶಿವಮೊಗ್ಗ ಕೆಎಸ್ಸಾರ್‌ಟಿಸಿ ಜಿಲ್ಲಾಧಿಕಾರಿಯೇ ಈ ಖುದ್ದೂಸನ ಹೆಸರುಕೇಳಿ ಬೆಚ್ಚಿ ಬೀಳುತ್ತಾರೆಂದರೆ ಇನ್ನು ಸಾಮಾನ್ಯ ಕೆಲಸಗಾರನ ಪಾಡೇನಾಗಿರಬೇಡ.

ಖುದ್ದೂಸನ ಕೈ-ಬಾಯಿ-ಕಚ್ಚೆ ಯಾವುದೂ ಸಾಚಾ ಆದುವಲ್ಲ. ದಾವಣಗೆರೆ ಕೆಎಸ್ಸಾರ್‌ಟಿಸಿ ವಿಭಾಗದ ಕೋಟ್ಯಾಂತರ ರೂ. ವಹಿವಾಟಿನಲ್ಲಿ ಖುದ್ದೂಸನದೇ ಅಂತಿಮ ಅಂಕಿತ ಬೀಳೋದು. ಪ್ರತಿ ತಿಂಗಳು ಏನಿಲ್ಲವೆಂದರೂ ಖರೀದಿಯಲ್ಲಿ ಕಮೀಶನ್ ಅಂತಾನೇ ಲಕ್ಷಗಳ ಲೂಟಿ ಹೊಡೆಯುವುದಲ್ಲದೇ, 3 ಸಾವಿರ ಕೆಲಸಗಾರರ ಪಗಾರ ಬಿಡುಗಡೆಯ ಕೋಟ್ಯಾಂತರ ರೂಪಾಯಿಗಳ ಬಿಲ್ಲಿಗೆ ಮುಲಾಜಿಲ್ಲದೆ ಪರ್ಸೆಂಟೇಜ್ ಲೆಕ್ಕದಲ್ಲಿ ವಸೂಲಿ ಮಾಡುವ ಹಡಬೆ ಗಿರಾಕಿ ಈತ.

ದಾವಣಗೆರೆಯಲ್ಲಿ 10 ಲಕ್ಷ ಗೋತಾ

ದಿನಾಂಕ 31-01-2015ರಂದು ವಿಭಾಗದ ವ್ಯವಸ್ಥಾಪಕ ಕೃಷ್ಣಪ್ರಸಾದ್ ಎನ್ನುವವರು ದಾವಣಗೆರೆ ನಗರ ಠಾಣೆಯಲ್ಲಿ ಒಂದು ಕಂಪ್ಲೇಂಟು ಕೊಟ್ಟಿದ್ದರು. ಅದರ ಸಾರಾಂಶವೇನೆಂದರೆ 'ವಿಭಾಗದ 5 ಜನ ಅಕೌಂಟ್ಸ್ ನೌಕರರಾದ ಇನ್ಸ್‌ಪೆಕ್ಟರ್ ಗುರುಸಿದ್ದಯ್ಯ, ಸಹಾಯಕ ಟಪ್ಪೂಸಾಬ್, ವಿ.ಆರ್. ರಾಜಪ್ಪ, ಅಕೌಂಟೆಂಟ್ ಉಮಾ ಚಳಗೇರಿ, ಸಿದ್ದೇಶ್ ಎಂಬುವವರು 60 ಜನ ಚಾಲಕರು ಮತ್ತು ಏಜೆಂಟರುಗಳಿಗೆ ಹೆಚ್ಚುವರಿ ರಹದಾರಿ ಭತ್ಯೆ ನೀಡಲು ಅಂತ 10 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿಕೊಂಡಿದ್ದಾರೆ; ಆದರೆ ಅದು ಸಕಾರಣವಲ್ಲ, ಇಲಾಖೆಯ ಹಣ ದುರುಪಯೋಗ ಆಗಿದೆ'. ಹೀಗಂತ ದೂರು ದಾಖಲಾಗುತ್ತಿದ್ದಂತೆಯೇ ಆ ಐದೂ ಜನರನ್ನು ಅಮಾನತು ಮಾಡಿ ಮನೆಗೆ ಕಳುಹಿಸಲಾಗಿತ್ತು.

ಆದರೆ ಈ ಐದೂ ಜನಸಾಮಾನ್ಯ ಅಧಿಕಾರಿಗ[...] ಮಾತ್ರ. ಇವರು ಏನೇ ಬೋಗಸ್ ಬಿಲ್ ಸೃಷ್ಟಿಸಿದರ[...] ಅದಕ್ಕೆ ಲೆಕ್ಕಾಧಿಕಾರಿಯ ಸಹಿ ಬಿದ್ದ ನಂತರವಷ್ಟೇ ಹ[...] ಬಿಡುಗಡೆಯಾಗೋದು. ಅಲ್ಲಿಗೆ ಆ ಸ್ಥಾನದಲ್ಲಿದ್ದ ಅಬ್ದು[...] ಖುದ್ದೂಸ್ ಇದರಲ್ಲಿ ನೇರ ಶಾಮೀಲಿಲ್ಲದೆ ಅಥ[...] ಅವನದೇ ಪಿತೂರಿಯಿಲ್ಲದೇ ಅಷ್ಟು ದೊಡ್ಡ ಮೊತ್ತ ಬ್ಯಾಂ[...] ಅಕೌಂಟ್ ಬಿಟ್ಟು ಹೊರಬರುವುದಿಲ್ಲ. ಆದರೆ ಖುದ್ದೂ[...] ತನ್ನ ಪ್ರಭಾವ ಬಳಸಿಕೊಂಡು ಪ್ರಕರಣದಲ್ಲಿ ತನ್ನ ಹೆಸ[...] ಕೇಳಿಬರದಂತೆ ಮಾಡಿದ್ದಲ್ಲದೆ ಕೈಕೆಳಗಿನ ಸಿಬ್ಬಂದಿಗಳ[...] ಫಿಟ್ ಮಾಡಿಸಿದ್ದಾನೆ.

10 ಲಕ್ಷ ಮೊತ್ತದ ಹೆಚ್ಚುವರಿ ಹ[...] ಬಿಡುಗಡೆಯಾಗಲು 5 ಜನ ಅಧಿಕಾರಿಗಳು ಅದೆ[...] ಜವಾಬ್ದಾರರೋ ಅಷ್ಟೇ ಜವಾಬ್ದಾರನಾಗುವವನು ಲೆಕ್ಕಾಧಿಕಾ[...] ಅಬ್ದುಲ್ ಖುದ್ದೂಸ್. ಆ ಐದು ಜನರಂತೆ ಖುದ್ದೂ[...] ಕೂಡಾ ಅಮಾನತಾಗಬೇಕಿತ್ತು, ಒಂದೊಮ್ಮೆ ಅವ[...] ಮಾಡಿದ ಪಿತೂರಿಯನ್ನು ಅರಿಯದೇ ಕಣ್ತಪ್ಪಿನಿಂದ ಸ[...] ಹಾಕಿದ ಅಮಾಯಕನೇ ಆಗಿದ್ದರೂ ನಿರ್ಲಕ್ಷ್ಯ ಮ[...] ಬೇಜವಾಬ್ದಾರಿತನದಿಂದ ಕರ್ತವ್ಯಲೋಪ ಮಾಡಿ ಸಂಸ[...] ನಷ್ಟ ಮಾಡಿದ್ದಕ್ಕಾಗಿ ಖುದ್ದೂಸ್‌ನ ಮೇಲೆ ಶಿಸ್ತುಕ್ರ[...] ಕೈಗೊಳ್ಳಬೇಕಿತ್ತು. ಅದ್ಯಾವುದೂ ಆಗಿಲ್ಲ, ಅಸಲಿ[...] ಖುದ್ದೂಸ್‌ನ ಹಿನ್ನೆಲೆ ಗೊತ್ತಿರುವ ಯಾರಿಗೇ ಆದರ[...] ಈ ಪ್ರಕರಣದಲ್ಲಿ ಅಪ್ಪಿತಪ್ಪಿ ಸಹಿಹಾಕಿದ ಅಮಾಯಕನಂ[...]

ಸಾಲುಗಟ್ಟಿದ ರೈತರ ಸಾವು

ಕಳೆದ ವಾರದಲ್ಲೇ ದಿನವೊಂದಕ್ಕೆ ಕನಿಷ್ಠ ಐದಾರು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಆತ್ಮಾಹುತಿ ಆರಂಭಗೊಂಡಿದ್ದು ರೈತ ನಾಯಕ ಪುಟ್ಟಣ್ಣಯ್ಯನವರ ಕ್ಷೇತ್ರದಲ್ಲಿ, ಅಲ್ಲಿಗೆ ಪುಟ್ಟಣ್ಣಯ್ಯನಿಗಿಂತಲೂ ಮೊದಲೇ ಧಾವಿಸಿದ ದೇವೇಗೌಡರು ಮತ್ತು ಯಡಿಯೂರಪ್ಪನವರು ಕಣ್ಣೀರುಗರೆದು ಧನಸಹಾಯ ಮಾಡಿದರು. ಇದು ದೃಶ್ಯ ಮಾಧ್ಯಮ ಮತ್ತು ಪತ್ರಿಕೆಗಳಲ್ಲಿ ದಿನವಿಡೀ ಪ್ರಸಾರಗೊಂಡಿತು. ಇದರ ಪರಿಣಾಮವಾಗಿಯೋ ಏನೋ ಸಾಂಕ್ರಾಮಿಕ ರೋಗದಂತೆ ಹರಡಿದ ಆತ್ಮಹತ್ಯೆಗಳು ಇನ್ನೂ ಸಂಭವಿಸುತ್ತಲೇ ಇವೆ.



ಮೊನ್ನೆ ನಾನು ಪಾಂಡವಪುರದ ಸಮೀಪದ ಲಕ್ಷ್ಮಿಪುರಕ್ಕೆ ಹೋದಾಗ ಜನ ಕಬ್ಬಿನ ಗದ್ದೆಗೆ ಬೆಂಕಿ ಹಚ್ಚಿ ಅದಕ್ಕೆ ಹಾರಿದ ರೈತನ ಬಗ್ಗೆ ಒಂದು ರೀತಿ ಹಾಸ್ಯದಿಂದಲೇ ಮಾತನಾಡುತ್ತಿದ್ದದ್ದು ಅಚ್ಚರಿ ಮೂಡಿಸಿತು. ನಮ್ಮಲ್ಲಿ ಸಾವನ್ನು ಕೂಡ ಹಾಸ್ಯಮಿಶ್ರಿತ ಭಾಷೆಯಲ್ಲಿ ಮಾತನಾಡುವವರಿದ್ದಾರೆ ಎನ್ನಿಸಿ ಸುಮ್ಮನಾದೆ. ರೈತರ ಆತ್ಮಹತ್ಯೆ ಪರಿಹಾರ ಸಮಿತಿಯ ಅಧ್ಯಕ್ಷರಾಗಿದ್ದ, ರೈತ ಕುಟುಂಬದಿಂದಲೇ ಬಂದ ದಕ್ಷ ಅಧಿಕಾರಿಯೊಬ್ಬರನ್ನ ವಿಚಾರಿಸಿದಾಗ "ರೈತರ ಆತ್ಮಹತ್ಯೆ ಸಮೀಕ್ಷೆಯಲ್ಲಿ ಹತ್ತು ಜನ ರೈತರಲ್ಲಿ ಮೂರು ಜನ ಮಾತ್ರ ಭೂಮಿ ಸಂಬಂಧವಾದ ಸಾಲಸೂಲದ ಕಾರಣವಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಇನ್ನುಳಿದವರ ಸಾವಿಗೆ ಪ್ರಬಲವಾದ ಬೇರೆ ಕಾರಣಗಳ ಒತ್ತಡ ಇರುತ್ತದೆ" ಎಂದರು.

ಏನೇ ಆದರೂ ರೈತ ಸಾಯುತ್ತಿದ್ದಾನೆ. ಇದು ಕೆಲವರಿಗಂತೂ ರಾಜಕಾರಣದ ಹಬ್ಬವಾಗಿದೆ. ಕರ್ನಾಟಕದಲ್ಲಿ ಪ್ರಬಲವಾದ ರೈತ ಸಂಘದ ಬಣಗಳೂ ಇವೆ. ಇವುಗಳಿಂದಲೂ ಈ ಸಾವನ್ನು ತಡೆಯಲಾಗಿಲ್ಲ; ಆತ್ಮವಿಶ್ವಾಸವನ್ನು ಮೂಡಿಸಲಾಗಿಲ್ಲ ಎಂದರೆ ಇದೊಂದು ತೀವ್ರತರ ತನಿಖೆಗೆ ಯೋಗ್ಯವಾದ ಸಮಸ್ಯೆ.

ನಮ್ಮ ನಡುವೆ ಯಾರೂ ಹಸಿವಿನಿಂದ ಶೀರಿಕೊಳ್ಳಬಾರದೆಂದು ಅನ್ನಭಾಗ್ಯದ ಕಾರ್ಯಕ್ರಮವಿದೆ. ಗ್ರಾಮ ಪಂಚಾಯಿತಿಯಲ್ಲಿ ಉದ್ಯೋಗ ಖಾತ್ರಿ ಕಾರ್ಯಕ್ರಮವಿದೆ. ಆದರೂ ರೈತ ಸಾಯುತ್ತಿರುವುದು ಹಸಿವಿನಿಂದಲ್ಲ, ಸಾಲಬಾಧೆಯಿಂದ.

ಈ ಸಾಲಬಾಧೆ ಬಗ್ಗೆ ನಮ್ಮ ಕುಟುಂಬದ್ದೇ ಉದಾಹರಣೆ ಕೊಡುವುದಾದರೆ ನಮ್ಮಣ್ಣನ ಮಗಳ ಮದುವೆ ಮಾಡಲು ಹಣವಿರಲಿಲ್ಲ, ದಾನಶೂರ ಕರ್ಣನಂತಹ ಬ್ಯಾಂಕ್ ಮ್ಯಾನೇಜರ್ ಬಂದಿದ್ದಾನೆ, ಎಲ್ಲಾ ರೈತರಿಗೂ ಐವತ್ತು ಸಾವಿರ ಸಾಲ ಕೊಡುತ್ತಾನೆಂದು ತಿಳಿಯಿತು. ಕೂಡಲೇ ಹೋಗಿ ಪರಿಚಯ ಹೇಳಿಕೊಂಡು ಒಂದು ಲಕ್ಷ ಸಾಲ ತಂದು ಮದುವೆ ಮಾಡಿದ್ದಾಯ್ತು, ಆದರೆ ನಮ್ಮ ಎದುರು ಒಂದು ಲಕ್ಷ ಸಾಲ ತೀರಿಸುವ ಯಾವ ಮಾರ್ಗವೂ ಇಲ್ಲ, ಈ ಬಗ್ಗೆ ನಮ್ಮ ಸಹೋದರನಾದ ಅಗ್ರಜನ ಬಳಿ ಉತ್ತರವೇ ಇಲ್ಲ, ಬ್ಯಾಂಕಿನ ನೋಟಿಸಿಗೂ, ಅಧಿಕಾರಿಗೂ ಕೇರ್ ಮಾಡುವ ಸ್ಥಿತಿಯಲ್ಲೂ ಆತ ಇಲ್ಲ, ಬೇಕಿದ್ದರೆ ಅಧಿಕಾರಿಯೇ ನೇತು ಹಾಕಿಕೊಳ್ಳಲಿ ಎಂಬಂಥ ಮನುಷ್ಯ.

ಇದನ್ನು ಬಹಳ ಹಿಂದೆ ತೇಜಸ್ವಿಯವರು "ಅಲ್ರೀ ಸಾಲ ಕೊಟ್ಟರೋನು ಸಾಯಬೇಕು. ನೀವ್ಯಾಕ್ರಿ ಆತ್ಮಹತ್ಯೆ ಮಾಡಿಕೊಳ್ತಿರಿ?" ಎಂದು ಕೇಳಿದ್ದರು. ನಮ್ಮ ನಡುವಿನ ಭಿಕ್ಷುಕರು, ಸಮಾಜವೇ ನಿಕೃಷ್ಟವಾಗಿ ನೋಡುವ ಕುಷ್ಠರೋಗಿಗಳು, ಅಲೆಮಾರಿಗಳು ಯಾರೂ ಕೂಡ ಆತ್ಮಹತ್ಯೆ ಮಾಡಿಕೊಳ್ಳುತ್ತಿಲ್ಲ ಆದರೆ ರೈತರು ಹೊರಟುಹೋಗುತ್ತಿದ್ದಾರೆ.

ನಾನೂ ಕೂಡ ರೈತನಾಗಿ ಕೆಲಸ ಮಾಡಿದ್ದೆ. ಎರಡು ಕರಿಗಿಡ್ಡಗಳಲ್ಲಿ ಹೊಲ ಉಳುತ್ತಿರಬೇಕಾದರೆ ರೈತನಷ್ಟು ಕಷ್ಟ ಪಡುವವರು ಈ ದೇಶದಲ್ಲಿ ಯಾರೂ ಇಲ್ಲ ಎನ್ನಿಸಿತ್ತು, ಮಾಡುವ ಬೇಸಾಯದ ಬಗ್ಗೆ ಯಾವ ಭರವಸೆಯೂ ಇರಲಿಲ್ಲ ಹಾಕಿದ ಬೆಳೆ ಮಳೆಯನ್ನು ಅವಲಂಬಿಸಿದ್ದರಿಂದ, ಮಳೆ ಕೈಕೊಟ್ಟರೆ ಮುಂಗಾರಿನ ಕತೆ ಮುಗಿಯಿತು. ಇನ್ನು ಹಿಂಗಾರು ಕೂಡ ಅಷ್ಟೇ. ಸೊಂಪಾಗಿ ಬೆಳೆದ ಪೈರು ಇನ್ನೇನು ಒಡೆಗೆ ಬರುತ್ತಿದೆ ಎನ್ನುವಾಗ ಮಳೆ ಕೈಕೊಟ್ಟರೆ ಮುಗೀತು. ಬದುಕೇ ಬರಡಾಗಿ ಹೋಗುತ್ತಿತ್ತು.

ಆಗ ಊರಿನ ತರುಣ ಜನಾಂಗ ಬಾಂಬೆ, ಭದ್ರಾವತಿ, ಊಟಿ ಕಡೆಗೆ ಓಡುತ್ತಿದ್ದರು. ಮಳೆ ಕೈ ಕೊಟ್ಟಾಗಲೆಲ್ಲಾ ಇಂತಹ ವಲಸೆ ನಡೆಯುತ್ತಿತ್ತು. ನಾನೇ ಒಮ್ಮೆ ಲೆಕ್ಕ ಹಾಕಿದಾಗ ನೂರ ಎಂಭತ್ತು ಮನೆಯ ನಮ್ಮ ಊರಿನಲ್ಲಿ ಎಂಭತ್ತು ಮನೆ ಹುಡುಗರು ಬಾಂಬೆಗೆ ಹೋಗಿ ದುಡಿದು ಇಲ್ಲಿನ ಬರಗಾಲದಿಂದ ಕುಟುಂಬಗಳನ್ನು ಕಾಪಾಡಿದ್ದರು.

ಆಗ ಸರ್ಕಾರಕ್ಕೂ ನಮಗೂ ಯಾವ ಸಂಬಂಧ[...] ಇರಲಿಲ್ಲ. ಈ ಲೋಕ ಇರುವುದೇ ಹೀಗೆ. ಕಷ್ಟಗ[...] ಇದೀ ದೇಶಕ್ಕೆ ಬಂದಿವೆ ಎಂದು ಭಾವಿಸುತ್ತಿದ್ದ ಕಾಲ[...]


ಆಗಿನ ಊರನ್ನ ನಾನು ನಿಮಗೆ ತೋರಿಸುವುದಾ[...] ಎಲ್ಲರ ಮನೆಗಳಲ್ಲೂ ದನಗಳಿದ್ದವು. ಸ್ಥಿತಿವಂತರ ಮನೆಯ[...] ಕರಾವಿನ ಹಸು ಅಥವಾ ಎಮ್ಮೆ ಇದ್ದವು. ಎಂಟು ಮನೆಗ[...] ಕುರಿ ಮಂದೆಗಳಿದ್ದವು. ಈ ಕುರಿಗಳ ನಡುವೆ ಅ[...] ಮತ್ತು ಹೋತಗಳಿದ್ದವು. ಬಹುತೇಕರ ಮನೆಗಳಲ್ಲಿ ನ[...] ಕೋಳಿಗಳಿದ್ದವು. ನಂಟರು ಬಂದರೆ ಅವನ ಎದು[...] ಮೊಟ್ಟೆ ಕೋಳಿ ಕುಯ್ದು ಸೀದು ತರದು ಬಂಗ ಬಡ[...] ಮಾತನಾಡಿಕೊಂಡು ಸಾರು ಮಾಡುತ್ತಿದ್ದರು. ನಂಟ[...] ಹೊರಟಾಗ ತಲೆಗೆ ಕೈಯಗ್ಣೆ ಕೊಟ್ಟು, ತಲೆ ಬಾಚಿಕೊಳ್[...] ಹೇಳಿ, ಅಷ್ಟು ದೂರ ಹೋಗಿ ಕಳುಹಿಸಿ ಬರುತ್ತಿದ್[...] ಇದು ಸಾಮಾನ್ಯ ಸಂಸ್ಕೃತಿಯಲ್ಲ ಒಬ್ಬರಿಗೊಬ್ಬರು ಆಸರೆಯ[...] ಬದುಕಿದ್ದ ಕಾಲ.

ನಂತರ ಸಂಸ್ಕೃತಿಯೇ ಹಠಾತ್ತನೆ ಹೊರಟುಹೋಗಿ[...] ಕುಟುಂಬದಲ್ಲೇ ವಿಘಟನೆಗಳು ನಡೆದು ಅಪ್ಪ ಅ[...] ಮಾತನ್ನು ಕೇಳದೆ "ಅಯ್ಯೋ ಶಿವನೆ ನಮಿಗ್ಯಾರೂ ದಿಕ್ಕಿಲ[...] ಎಂಬ ರೋದನ ಹಳ್ಳಿಯ ಹಿರಿಯರಿಂದ ಕೇಳುತ[...] ಮಕ್ಕಳ ತಿರಸ್ಕಾರದ ನೋಟವನ್ನು ಸಹಿಸದವರಾಗಿದ[...] ನೂರ ಎಂಭತ್ತು ಮನೆ ಊರಿನಲ್ಲಿ ಕೇವಲ ಹದಿನ[...] ಮನೆಗಳಲ್ಲಿ ಮಾತ್ರ ದನಗಳಿವೆ. ಆಡು ಕುರಿಗಳ[...] ಕೋಳಿಗಳಿಲ್ಲ, ಯಾರಾದರೂ ಬಂದರೆ ಫಾರಂ ಕೊ[...] ತಂದು ರುಚಿಯಿಲ್ಲದ ಸಾರು ಮಾಡಿ ಬೆಂಡು ತಿಂದ[...] ಆಗಿಯುತ್ತಾರೆ.

ಆಗ ಕೆಲವರ ಮನೆಯಲ್ಲಿ ಹಿತ್ತಿಲು ಅಥವಾ ಹು[...] ಕೊಪ್ಪಲಲ್ಲಿ ಸೊಪ್ಪಿನ ತೋಟಗಳಿದ್ದವು. ಕೀರೆ, ದಂ[...] ಅರಿವೆ ಸೊಪ್ಪು ತಂದು ಸಾರು ಮಾಡುತ್ತಿದ್ದರು. ಜ[...] ಆಡಿಕೊಂಡು ಹೋದ ಸೊಸೆ ಕೈತೋಟದ[...] ಸಮಾಧಾನಗೊಂಡು ಬರುತ್ತಿದ್ದಳು. ಈ ತೋಟ[...] ಈಗ ಮಾಯವಾಗಿವೆ.

ಒಂದೊಂದನ್ನೇ ಕಳೆದುಕೊಳ್ಳುತ್ತ ಬಂದ ರೈತ[...] ಕುಟುಂಬಗಳು, ಹಠಾತ್ತನೆ ಎದುರಾದ ಹೊಸಗೇಡಿ ವ[...] ಅರಾಜಕ ಸಂಸ್ಕೃತಿಗೆ ಹೆದರಿಹೋಗಿದ್ದಾರೆ.

ನನ್ನೂರಿನಲ್ಲೇ ಅಪ್ಪನೊಬ್ಬ ಮಗನಿಗೆ "ಬಾಯಿ ಕೆ[...] ಒಂದು ನಾಟಿಕೋಳಿ ತಂದು ಸಾರು ಮಾಡಸು" ಎ[...] ಇದು ಮಗನಿಗೆ ಆಡಿಕೊಳ್ಳುವಂತಹ ಬೇಡಿಕೆಯಾ[...]



ನನಲ್ಲ, ಆತನೇ ಭರ್ತಿ ಫಲಾನುಭವಿ ಎನ್ನುವುದು ಲೀಸಾಗಿ ಅರ್ಥವಾಗುತ್ತದೆ.

ಹೀಗೆ ಶಿಕ್ಷೆಗೆ ಅರ್ಹನಾಗಿದ್ದ ಖುದ್ದೂಸ್, ಪ್ರಕರಣ ಳಕಿಗೆ ಬರುತ್ತಿದ್ದಂತೆಯೇ ತನ್ನ ಹೆಸರು ಬಚಾವು ಡಿಕೊಂಡು ತಾನೇ ಓಡಾಡಿ ಚಿಕ್ಕಮಗಳೂರು ವಿಭಾಗಕ್ಕೆ ನ್ಸ್‌ಫರ್ ಮಾಡಿಕೊಂಡು ಪರಾರಿಯಾಗಿದ್ದ. ಅದೆಷ್ಟೇ ಧಿಕಾರಿಗಳು ಬಂದು ಹೋಗಿದ್ದರೂ ದಾವಣಗೆರೆಗೆ ಬೇರಿದ್ದ ತನ್ನ ತಳವನ್ನು ಮೇಲೆತ್ತದೆ ಹಲವು ದಶಕಗಳಿಂದ ೀಯುತ್ತಲೇ ಕೂತಿದ್ದ ಖುದ್ದೂಸ್ ಏಕಾಏಕಿ ಅಲ್ಲಿಂದ ನೇ ಓಡಾಡಿ ಟ್ರಾನ್ಸ್‌ಫರ್ ಮಾಡಿಸಿಕೊಳ್ಳುತ್ತಾನೆ ಎಂದರೆ ನರ್ಥ? ಅದೂ ಅವನನ್ನೇ ಕೇಂದ್ರವಾಗಿಟ್ಟುಕೊಂಡ ಈ ಕರಣ ಬಯಲಿಗೆ ಬಂದ ಸಮಯದಲ್ಲೇ.....

5 ಜನ ನೌಕರರು ಸಸ್ಪೆಂಡಾಗಿ 7 ತಿಂಗಳು ಕಳೆದರೂ ವೋಕ್ ಮಾಡುವುದನ್ನು ಮರೆತಂತಿದೆ. ಯಾರೋ ಾಡಿದ ತಪ್ಪಿಗೆ ಶಿಕ್ಷೆ ಅನುಭವಿಸುತ್ತಿರುವುದಲ್ಲದೇ ಮಾನತ್ತಿನ ಅವಮಾನ ಅನುಭವಿಸುವುದು ಯಾವ ನ್ಯಾಯ? ಬಳವಿಲ್ಲದೆ ಈ ಐದೂ ಜನರ ಜೀವನ ದುಸ್ತರವಾಗಿದೆ. ಸ್ ನಿಲ್ದಾಣದಲ್ಲಿ ಸಹಪಾಟಿಗಳೆದುರು ಕೈಚಾಚುವ ದುರಂತ ವರದು. ಇನ್ನಾದರೂ ಇಲಾಖೆ ಮುಖ್ಯಸ್ಥರು ಚ್ಚೆತ್ತುಕೊಂಡು ಪ್ರಾಮಾಣಿಕ ತನಿಖೆ ಮಾಡಬೇಕಿದೆ.

ಚಿಕ್ಕಮಗಳೂರಿನಲ್ಲೂ ರಿಪೀಟ್

ಹೀಗೆ ದಾವಣಗೆರೆಯಿಂದ ಚಿಕ್ಕಮಗಳೂರಿಗೆ ಖುದ್ದೂಸ್ ವಕ್ಕರಿಸಿ ಬಹಳ ಕಾಲವೇನೂ ಆಗಿಲ್ಲ, ಆದರೆ ಅಷ್ಟರಲ್ಲಾಗಲೆ ಅಲ್ಲೂ ಇಂತದ್ದೇ ಒಂದು ಗೋಲ್‌ಮಾಲ್ ಮಾಡಿಕೊಂಡಿದ್ದಾನೆ.

ಅಲ್ಲಿಯ ಪ್ರಕರಣವೂ ಸೇಮ್ ಟು ಸೇಮ್. ಈತ ಚಿಕ್ಕಮಗಳೂರಿಗೆ ಕಾಲಿಟ್ಟ ಮೇಲೆ ಸಕಲೇಶಪುರ ಘಟಕದ ಮೂರು ಜನ ಗುಮಾಸ್ತರು ಮತ್ತದೇ ಹತ್ತು ಲಕ್ಷ ಹೆಚ್ಚುವರಿ ಬಿಲ್ ಮಾಡಿದ ಸಂಬಂಧ ಅಮಾನತ್ತಾದರು. ಆದರೆ ಖುದ್ದೂಸ್ ಹುದ್ದೆ ಅಲ್ಲಾಡಲಿಲ್ಲ. ಒಂದೊಮ್ಮೆ ದಾವಣಗೆರೆ ಪ್ರಕರಣದಲ್ಲಿ ಖುದ್ದೂಸ್‌ನನ್ನು ಅಮಾಯಕ ಅಂತಲೇ ಇಟ್ಟುಕೊಂಡರೂ ಆತನ ಸರಹದ್ದಿನಲ್ಲೇ ಅಂತಹುದೇ ಮತ್ತೊಂದು ಪ್ರಕರಣ ನಡೆಯೋದು ಕಾಕತಾಳೀಯ ಎನ್ನಲಿಕ್ಕಾಗುತ್ತಾ? ಖಂಡಿತ ಇಲ್ಲ. ಈತನ ಧನದಾಹಕ್ಕೆ ಕಾಸುಬುರುಕ ಗುಮಾಸ್ತರು ಬಲಿಯಾಗಿರೋದು ಸ್ಪಷ್ಟವಾಗಿ ಕಾಣುತ್ತದೆ. ಕೆಳ ಸಿಬ್ಬಂದಿಗಳ ಮೇಲೆ ಸಲೀಸಾಗಿ ಶಿಕ್ಷೆ ಹೇರಿದಷ್ಟು ಖುದ್ದೂಸ್‌ನ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳುವ ತಾಕತ್ತು ಇಡೀ ಕೆಎಸ್‌ಆರ್‌ಟಿಸಿ ಇಲಾಖೆಯ ಯಾವೊಬ್ಬ ಅಧಿಕಾರಿಗೂ ಇಲ್ಲವೆನ್ನುವುದು ಇದರಿಂದ ಸಾಬೀತಾದಂತಾಗಿದೆ. ಇಲ್ಲವಾಗಿದ್ದರೆ ದಾವಣಗೆರೆಯಲ್ಲಿ ಘಟಿಸಿದ್ದು ಚಿಕ್ಕಮಗಳೂರಿನಲ್ಲೂ ರಿಪೀಟ್ ಆಗುತ್ತಿರಲಿಲ್ಲ.

ಇವನ ಲಫಡಾ ಕೆಲಸಗಳು ಇಷ್ಟಕ್ಕೇ ಸೀಮಿತವಾದವಲ್ಲ. ಬಡ್ತಿ ಮತ್ತು ಟ್ರಾನ್ಸ್‌ಫರ್ ದಂಧೆಯಲ್ಲೂ ಕೈ ಆಡಿಸುತ್ತಾನೆ. ಸ್ವತಃ ಇವನದೇ ಬಡ್ತಿ ವಿಚಾರದಲ್ಲಿ ಈತ ಆಡಿರುವ ಅಲ್ಲಂಡೆ ಆಟದಿಂದಾಗಿ ಅರ್ಹತೆಯಲ್ಲಿ ಇವನಿಗಿಂತಲೂ ಮೇಲಿರುವ ಅರ್ಹರು ಅವಕಾಶವಂಚಿತರಾಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈಗಿರುವ ಹುದ್ದೆಯಿಂದ ಬಡ್ತಿ ಪಡೆಯುವ ಯಾದಿಯಲ್ಲಿ ಈತ ಐದನೆಯವನಾಗಿದ್ದಾನೆ. ಸರದಿಯಲ್ಲಿ ಐದನೆಯವನಾಗಿದ್ದರು ತನಗಿಂತ ಮೇಲಿರುವ ನಾಲ್ಕು ಜನರ ಅವಕಾಶ ತಪ್ಪಿಸಿ ತಾನೇ ಮೊದಲು ಬಡ್ತಿ ಪಡೆಯಬೇಕು ಅಂತ ಮೇಲಧಿಕಾರಿಗಳಿಗೆ 'ಮಸ್ತ್‌ಮಸ್ತ್ ಸೌಕರ್ಯ'ಗಳನ್ನೆಲ್ಲಾ ಸಪ್ಲೇ ಮಾಡಿ ಆ ನಾಲ್ವರ ವಿರುದ್ಧ ಕೆಲಸಕ್ಕೆ ಬಾರದ ದೂರು ದಾಖಲಾಗುವಂತೆ ನೋಡಿಕೊಂಡಿದ್ದಾನೆ. ಇವನ ಅವಧಿಯಲ್ಲಾದ ಬಿಲ್ಲುಗಳ ವ್ಯತ್ಯಾಸ, ಖರೀದಿಯಲ್ಲಾದ ಕೋಟ್ಯಾಂತರ ರೂ.ಗಳ ಹಗಲು ದರೋಡೆಗಳನ್ನು ಕೆದಕಿದರೆ ಖುದ್ದೂಸ್‌ಗೆ ಬಡ್ತಿಯ ಭಾಗ್ಯವಿರಲಿ, ಪರಪ್ಪನ ಮುಖ್ಯದ್ವಾರವೇ ಕಾಯಮ್ಮಾಗುತ್ತದೆ. ಆದರೆ ಬೆಕ್ಕಿಗೆ ಗಂಟೆ ಕಟ್ಟುವವರ್‍ಯಾರು ಎಂಬುದೇ ಪ್ರಶ್ನೆ...

■ ಟಿ.ಎನ್. ಷಣ್ಮುಖ

ದ್ದರಿಂದ ಮೂದಲಿಕೆಯ ಮಾತನಾಡಿದ. ಎಂತೆಂತಹ ಷ್ಟದ ದಿನಗಳು ಮತ್ತು ಬರಗಾಲದಲ್ಲೂ ಬದುಕಿಬಂದಿದ್ದ ಂದೆ, ಮಗನ ತಿರಸ್ಕಾರದ ಮಾತುಗಳನ್ನು ಸಹಿಸಲಾರದೆ ೇಣಾಕಿಕೊಂಡು ತೀರಿಕೊಂಡ. ಈಗ ಸಂಭವಿಸಿದ್ದರೆ ದೊಂದು ರೈತನ ಆತ್ಮಹತ್ಯೆಯಾಗುತ್ತಿತ್ತು.

ಮತ್ತೊಬ್ಬ ರೈತನ ಸಾವು ಒಂದಿಷ್ಟು ಭಿನ್ನವಾಗಿದೆ. ಟೊಮ್ಯಾಟೋ ಬೆಳೆದು ಬೆಲೆ ಏರಿಕೆಯಿಂದ ಲಕ್ಷಾಂತರ ರೂಪಾಯಿ ಗಳಿಸಿದ ಮಗ, ಜಮೀನಿಗೆಲ್ಲಾ ತರಕಾರಿ ಹಾಕಿದ. ಚ್ಚಿನ ದುಡ್ಡು ಸಂಪಾದಿಸಲು ಇರುವ ಜಮೀನಿಗೆಲ್ಲಾ ೋರ್‌ವೆಲ್ ಕೊರೆಸುತ್ತಾ ಹೋದ. ನೀರು ಬರಲಿಲ್ಲ, ಾಲ ಏರುತ್ತಾ ಹೋಯ್ತು. ಮನೆಯನ್ನೇ ಮಾರಿಬಿಡುವ ಂತಕ್ಕೆ ಬಂದ. ಮಗನಿಂದ ಇಂತಹ ತೀರ್ಮಾನವನ್ನು ರೀಕ್ಷಿಸಿದ ತಂದೆ ಆತ್ಮಹತ್ಯೆ ಮಾಡಿಕೊಂಡ. ಸುಸ್ಥಿತಿಯಲ್ಲೇ ಾದ್ದ ಕುಟುಂಬವೊಂದು ತರಕಾರಿ ಜೂಜಿಗೆ ಸಿಕ್ಕಿ ಬಲಿಯಾಗಿಹೋಯ್ತು.

ಆಶ್ಚರ್ಯವೆಂದರೆ ಇಡೀ ಊರಿಗೆ ಬುದ್ಧಿ ಹೇಳಿ ಎಂತಹ ಂದರ್ಭದಲ್ಲೂ ಧೈರ್ಯದ ಮಾತನ್ನೇಳುತ್ತಿದ್ದ ಈ ರೈತದ್ವಯರು ಹಠಾತ್ತನೆ ನಿರ್ಗಮಿಸಿದ್ದನ್ನು ನಾನು ೋಧಿಸಿದಾಗ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳು ಮತ್ತು ಟ್ಟಿಕೊಂಡ ಹೆಂಡತಿಯರ ತಿರಸ್ಕಾರದ ಮಾತುಗಳು ಪ್ರಧಾನವಾಗಿ ಬಲಿ ತೆಗೆದುಕೊಂಡಿದ್ದವು. ಇವು ಯಾವ ರೂಪದ ಸಾವುಗಳಾದರೂ ಸರ್ಕಾರ ತಡೆಗಟ್ಟಬೇಕು.

ಒಮ್ಮೆ ರೈತರ ಆತ್ಮಹತ್ಯೆ ಕುರಿತ ಗೋಷ್ಠಿಯಲ್ಲಿ ಮನೋವೈದ್ಯರೊಬ್ಬರು ಪ್ರಪಂಚದ ಯಾವ ಯಾವ ದೇಶದಲ್ಲಿ ಎಷ್ಟು ಆತ್ಮಹತ್ಯೆ ನಡೆಯುತ್ತವೆ ಎಂಬ ಉಪನ್ಯಾಸ ನೀಡಿದರು. ನಂತರ ಮಾತನಾಡಿದ ಎಚ್.ಎಲ್. ಕೇಶವಮೂರ್ತಿಯವರು "ಭೂಮಿ ಹೊಂದಿರುವ ಕಾರಣಕ್ಕೆ ರೈತ ಆತ್ಮಹತ್ಯೆಗೆ ಶರಣಾಗುತ್ತಿದ್ದಾನೆ" ಎಂದರು. ಆದ್ದರಿಂದ ಭೂಮಿ ಹೊಂದಿರುವ ರೈತರ ಬಗ್ಗೆ ಸರ್ಕಾರ ನಿಗಾ ವಹಿಸಬೇಕಿದೆ. ರೈತರ ಹಿತಕ್ಕಾಗಿಯೇ ಜನ್ಮ ತಳೆದ ರೈತ ಸಂಘದ ಕೆಲವು ಲೀಡರುಗಳು ಪುಢಾರಿ ರಾಜಕಾರಣ ಬಿಟ್ಟು ರೈತರ ಬದುಕಿನ ಬಗ್ಗೆ ಚಿಂತಿಸಬೇಕಿದೆ.

ಹೌಸಿಂಗ್ ಬೋರ್ಡ್‌ನಲ್ಲಿರುವ ಅಧಿಕಾರಿಯೊಬ್ಬರು ಾಪ್ಪಚಿಗೆ ಮೇಲುಕೋಟೆ ಬದ್ದೆಯಲ್ಲಿರುವ ಲಕ್ಷ್ಮಿಪುರಕ್ಕೆ ನನ್ನನ್ನು ಕರೆದುಕೊಂಡು ಹೋಗಿದ್ದರು. ಬಡ ಕುಟುಂಬದಿಂದ ಬಂದ ಅವರು "ನಾನು ನಿಮಗೆ ಯಾವ ಸಹಾಯ ಮಾಡಲೂ ಆಗುವುದಿಲ್ಲ, ಒಂದು ಬೋರ್‌ವೆಲ್ ತೆಗೆಸಿಕೊಡುತ್ತೇನೆ" ಎಂದು ಹೇಳಿ ಅದರಂತೆ ನಡೆದುಕೊಂಡಿದ್ದರು. ಲಕ್ಷ್ಮಿಪುರಕ್ಕೆ ಹೋದಾಗ ಅಧಿಕಾರಿಯ ತಾಯಿ ಕೆಂಪಮ್ಮ ಐದು ಸಾವಿರ ಕೊಟ್ಟಳು. ಕೂಡಲೇ ಅವರ ತಂದೆ ಮರಿಯಪ್ಪ ಬಂದು ಅಧಿಕಾರಿಯ ಕೈಗೆ ಐದು ಸಾವಿರ ಕೊಟ್ಟಿದ್ದಲ್ಲದೆ ಅವರ ಮಕ್ಕಳ ಕೈಗೆ ಎರಡೆರಡು ಸಾವಿರ ಕೊಟ್ಟು "ಮಡಿಕಳಿ" ಎಂದರು. ಆಶ್ಚರ್ಯಗೊಂಡ ನಾನು "ಇದೇನು ಹಿಂಗೆ? ಅವುರು ನಿಮಿಗೆ ದುಡ್ಡು ಕೊಡೋದರ ಬದ್ಲು ನೀವೇ ಕೊಡ್ತಿರಲ್ಲ" ಎಂದೆ. ಅದಕ್ಕೆ ಕೆಂಪವ್ವ "ಅಯ್ಯೋ ಈ ಸತಿ ಬೀಮೀಸು (ಬೀನ್ಸ್), ಸ್ಯಾವಂತಿಗೆ ಹೂವು ಬ್ಯಳದಿದ್ವೊ, ವಳ್ಳಿ ದುಡ್ಡು ಬತ್ತು. ಅದ್ಕೆ ಕೊಡ್ತಾಯಿದ್ದಿವಿ" ಎಂದರಲ್ಲದೆ ಕೆಂಪವ್ವ ಶಿವಮೊಗ್ಗಕ್ಕೆ ಬಂದಾಗ ಗರ್ಭಕೋಶದ ಆಪರೇಷನ್ ಸಮಯದಲ್ಲಿ ಚೆನ್ನಾಗಿ ನೋಡಿಕೊಂಡವರಿಗೆ ಕೊಡು ಎಂದು ಮತ್ತೆರಡು ಸಾವಿರ ಕೊಟ್ಟರು. ಎಲ್ಲವೂ ಸರ್ವನಾಶವಾಗುತ್ತಿದೆ ಎಂದು ಹಲುಬುತ್ತಿದ್ದ ಸಂದರ್ಭದಲ್ಲಿ ಎಪ್ಪತ್ತು ವರ್ಷದ ಈ ರೈತ ದಂಪತಿಗಳು ನನಗೆ ಕಳೆದುಹೋದ ಕಾಲವನ್ನು ಕಾಣಿಸಿದ್ದರು. ಸಾವಿರಾರು ರೂಪಾಯಿ ಸಂಬಳ ಪಡೆಯುವ ಅಧಿಕಾರಿ ತನ್ನ ತಂದೆತಾಯಿಗಳು ಮರಳಿಸುತ್ತಿರುವ ಋಣಕ್ಕೆ ಅಚ್ಚರಿಗೊಂಡು ಕೊಟ್ಟ ಹಣವನ್ನು ಜೇಬಿಗಿಳಿಸಿದರು. ಭೂಮಿ ಬದುಕಿನ ರೈತರಿಗೆ ಆದಾಯ ಬಂದರೆ ಅವರು ಈ ಸಮಾಜಕ್ಕೇ ಕೊಡುತ್ತಾರೆಯೇ ಹೊರತು ಯಾರ ಋಣದಲ್ಲೂ ಬದುಕುವುದಿಲ್ಲ.

ಭೂಮಿ ರೈತರ ಬದುಕಾಗಿತ್ತು, ಅವನ ಬದುಕಿನಲ್ಲೇ ಹಾಸುಹೊಕ್ಕಾಗಿತ್ತು, ಆದಕಾರಣ ಮನೆಯಲ್ಲಿ ಬಾನದ ಸಾಲುಗಳಿದ್ದವು. ಈ ಬಾನದ ಮಡಕೆಯಲ್ಲಿ ಅವರೆ, ತೊಗರಿ, ಎಳ್ಳು, ಹುಚ್ಚೆಳ್ಳು, ತಡ್ನಿಕಾಳು, ಪುಣ್ಣಿಕಾಳು, ಬದನೆ, ಹಾಗಲ, ಈರೆ ಮತ್ತು ಕೀರೆ ಬೀಜಗಳೆಲ್ಲಾ ಇದ್ದವು. ಬಿತ್ತನೆ ಕಾಲಕ್ಕೆ ಮನೆಯಿಂದ ಹೊರಡುವ ರೈತ ಮಗ ಪ್ರಸ್ತಕ್ಕೆ ಹೊರಟವನಂತೆ ಸಂಭ್ರಮದಿಂದ ಹೊರಡುತ್ತಿದ್ದ. ಈಗ ಬೀಜ, ಗೊಬ್ಬರ, ಕ್ರಿಮಿನಾಶಕದ ಅಂಗಡಿ ಹುಡುಕುತ್ತ ಭೂಮಿ ಬದುಕಿನ ಗಂಧವನ್ನೆ ತೊರೆದಿದ್ದಾನೆ. ಮನೆಯಿಂದ ಕಣಜ ಮತ್ತು ಬಾನದ ಸಾಲು ಕಾಣೆಯಾಗಿವೆ. ರೈತನ ಆತ್ಮಹತ್ಯೆಗೆ ಹಲವು ಹನ್ನೊಂದು ಕಾರಣಗಳು ಹೊಳೆಯುತ್ತಿವೆ. ಆದರೆ ಈ ಕೆಂಪವ್ವ ಮತ್ತು ಮರಿಯಪ್ಪನ ಮನೆಯಲ್ಲಿನ್ನು ಬಾನದ ಸಾಲು ಸಣ್ಣ ಕಣಜ ಇರುವುದೊಂದು ವಿಶೇಷ!

■ ಬಿ.ಚಂದ್ರೇಗೌಡ

ಸ್ವಾಮಿ ಲೇಖನದಿಂದ ಗೌಡರ ಮನಸ್ಸು ಬದಲಾಯ್ತಂತೆ!

ಧೂತ್ತೇರಿ

ನಮ್ಮ ಸಿರಿಗೆರೆಯ ಸ್ವಾಮೀಜಿಯವರು ಬರೆದ ಲೇಖನವೊಂದು ಮಾಜಿ ಪ್ರಧಾನಿಗಳ ಮನಸ್ಸನ್ನೇ ಬದಲಾಯಿಸಿದೆಯಂತಲ್ಲಾ, ಅದೆಂತಹ ಲೇಖನ? ಇದೆಂತಹ ಜ್ಞಾನೋದಯ ಎಂದು ನಾಡಿನಲ್ಲಿ ಚರ್ಚೆಯಾಗುತ್ತಿರುವಾಗಲೇ ಬರೆದವರು, ಬದಲಾದವರಿಬ್ಬರೂ ಎಲ್ಲೋ ಒಂದು ಜಾಗದಲ್ಲಿ ಸಂಧಿಸುವ ಮನಸ್ಥಿತಿಯವರಾಗಿರಬಹುದೆಂಬ ಸಾಕ್ಷ್ಯಾಧಾರಗಳು ದೊರಕುತ್ತಿವೆಯಲ್ಲಾ, ಸಿರಿಗೆರೆಯ ಸ್ವಾಮಿಗಳು ಸ್ವಾಮಿಗಳಾದ ನಂತರ ಕೆಲವು ಕ್ರಾಂತಿಕಾರಿ ಬದಲಾವಣೆ ತಂದವರು. ಮೂಢನಂಬಿಕೆ ವಿರುದ್ಧ ದನಿ ಎತ್ತಿದವರು. ಸಾರಾಯಿ ಕುಡಿಯದವರನ್ನು ಚುನಾವಣಾ ಕಣಕ್ಕಿಳಿಸಿ ಠೇವಣಿ ಕಳೆದುಕೊಂಡವರು. ಹಾಗೆಯೇ ನಿವೃತ್ತಿ ದಿನಾಂಕದ ದಿನ ಅತ್ತು ಕರೆದು ಪೀಠದ ಸ್ಥಾನ ಉಳಿಸಿಕೊಂಡವರು. ಅವರ ಈ ಭಂಡತನ ನೋಡಿದ ಜನರು ಇಂದಿರಾ ಗಾಂಧಿ ಮುಂದೆ ಚುನಾವಣೆಗೆ ನಿಲ್ಲುವಂತಿಲ್ಲ ಎಂದು ಕೋರ್ಟು ತೀರ್ಪು ನೀಡಿದಾಗ ಪ್ರಧಾನಿಯನ್ನು ಪ್ರಶ್ನಿಸುವಂತಿಲ್ಲ ಎಂದು ಎಮರ್ಜೆನ್ಸಿ ತಂದ ಕಾಲವನ್ನು ನೆನಪಿಸಿಕೊಂಡರಂತಲ್ಲ, ಸಿರಿಗೆರೆ ಭೂಪರೂ ಕೂಡ "ತನ್ನ ಸಂಬಂಧಿಯನ್ನೇ ಸ್ವಾಮಿ ಮಾಡಲೋಸ್ಕರ ಪೀಠದ ಕಾವಲು ಕಾಯುತ್ತಿದ್ದಾರೆ. ಜನಾಂಗದ ಪ್ರಜಾಪ್ರಭುತ್ವವಾದಿಗಳ ಬಾಯಿಮುಚ್ಚಿ ಮೆರೆಯುತ್ತಿದ್ದಾರೆ. ಮಠದ ಸಂವಿಧಾನದಲ್ಲಿ ಅವರಿಗೆ ನಂಬಿಕೆ ಇದ್ದರೆ ಈಗಾಗಲೇ ಮಠದ ಪೀಠಕ್ಕಾಗಿ ಸೀನಿಯಾರಿಟಿ ಯೋಗ್ಯತೆಯೊಂದಿಗೆ ಕಾಯುತ್ತಿರುವ ಸ್ವಾಮಿಯನ್ನು ಪೀಠಕ್ಕೇರಿಸಿ ಅವರಿಳಿದ ನಂತರ ತಮ್ಮ ಕ್ಷುದ್ರ ಆಸೆಯನ್ನ ಈಡೇರಿಸಿಕೊಳ್ಳಬಹುದಿತ್ತು" ಎಂದು ಸಿರಿಗೆರೆ ಮಠಕ್ಕೆ ಕೇಳುವಂತೆಯೇ ಸಾದ ಜನಾಂಗ ಸದ್ದು ಮಾಡುತ್ತಿದ್ದಾರಂತಲ್ಲಾ, ಧೂತ್ತೇರಿ!

***

ಇನ್ನ ಸಿರಿಗೆರೆ ಸ್ವಾಮಿಯ ಲೇಖನದಿಂದ ಮನಸ್ಸನ್ನ ಬದಲಾಯಿಸಿಕೊಂಡಿರುವ ದೇವೇಗೌಡರೂ ಸಿರಿಗೆರೆ ಗುರುವಿನಂತೆ ಒಂದು ಪ್ರಾಂತ್ಯಕ್ಕೆ ಲೀಡರು. ಆ ಕಾರಣವಾಗಿ ಅವರು ಅರಸು ವಿರುದ್ಧ ಸಿಡ್ದು ಹೊಡೆದಾಗ ಪಡೆದ ಸೀಟು ನಲವತ್ತು, ಈಗಲೂ ನಲವತ್ತು. ಆದರೆ ಮಾಜಿ ಪ್ರಧಾನಿಯಾಗಿ ಗಳಿಸಿದ ಎಂ.ಪಿ. ಸೀಟು ಎರಡು. ಅದರಲ್ಲೂ ಮಂಡ್ಯದ ಸೀಟು ಸಿಕ್ಕಿದ್ದು ಕಾಂಗ್ರೆ ಒಳಜಗಳದ ಬೇಗುದಿ ಯಿಂದಾಗಿಯೇ ಹೊರತು ಜನರ ನಿಜವಾದ ತೀರ್ಪಲ್ಲ. ಗೌಡರು ಈಚೆಗೆ "ನನ್ನ ವಿರುದ್ಧ ಮಾತನಾಡಿದವರು ಯಾರೂ ಉಳಿದಿಲ್ಲ" ಎಂದು ಗುಡುಗಿದ್ದಾರೆ. ಅದು ನಿಜ. ಸ್ವಜಾತಿ ಲೀಡರುಗಳನ್ನ ಭಕ್ತ ಕುಂಬಾರನಂತೆ ತುಳಿದು ಮುಗಿಸಿ ಹಾಕಿದ್ದಾರೆ. ಕೆಲವರು ಬಿಜೆಪಿ ಮತ್ತು ಕಾಂಗ್ರೆ ಕಡೆ ಓಡಿ ಪ್ರಾಣ ಉಳಿಸಿಕೊಂಡಿದ್ದಾರೆ. ಇಂತಹ ಮೈಮರೆತು ಮಣ್ಣು ತುಳಿಯುತ್ತ ಕಾಲಿಗೆ ಸಿಕ್ಕವರನ್ನು ಮುಗಿಸಿ ಹಾಕುತ್ತ ಹೊರಟ ಆಧುನಿಕ ಭಕ್ತಕುಂಬಾರನಿಗೆ ಈ ವಯಸ್ಸಿನಲ್ಲಿ ಮನಸ್ಸು ಬದಲುಗೊಂಡಿರುವುದು ಕರ್ನಾಟಕದ ರಾಜಕಾರಣದ ಪಾಲಿಗೆ ಒಂದು ಮಹತ್ತರವಾದ ಘಟನೆ. ಈ ರೀತಿ ಬದಲುಗೊಂಡ ಮನಸ್ಸಿನ ಮೂಲೆಯಲ್ಲಿನ್ನೂ ಚಲುವ, ಬಾಲಕೃಷ್ಣ ಜಮೀರ, ಹೊರಟ್ಟಿ ಇತ್ಯಾದಿ ದಳದ ಜೀವಿಗಳು ಯಾವಾಗ ಗೌಡರ ಕಾಲ್ತುಳಿತಕ್ಕೆ ತುತ್ತಾಗುತ್ತಾರೋ ಎಂದು ದಳದವರೇ ಆತಂಕಗೊಂಡಿದ್ದಾರಂತಲ್ಲಾ, ಅದೇನಾದರಾಗಲಿ, ಗೌಡರ ಮನಸ್ಸಿನ ಬದಲಾವಣೆ ತುಂಬ ತಡವಾಗಿದೆ. ಇಂತಹ ಬದಲಾವಣೆ ಮೊದಲೇ ನಡೆದುಹೋಗಿದ್ದರೆ, ಕೆಲವು ಅನಾಹುತಗಳಾದರೂ ತಪ್ಪಿ, ಕರ್ನಾಟಕದ ಮಟ್ಟಿಗೆ ಒಂದು ಒಳ್ಳೆಯ ಪ್ರಾದೇಶಿಕ ಪಾರ್ಟಿ ತಲೆ ಎತ್ತಿ, ಮಣ್ಣಿನ ಮಗನ 'ದೆಸೆಯಿಂದ' ಕೃಷಿಕರನ್ನಾದರೂ ಉಳಿಸಿಕೊಳ್ಳಬಹುದಿತ್ತಲ್ಲವೆ, ಧೂತ್ತೇರಿ!!

***

ಬಳ್ಳಾರಿಯಿಂದ ಬರಿಗೈಲಿ ಬಂದು, ಶಿವಮೊಗ್ಗದ ಸೀಗೆಹಟ್ಟಿಯಲ್ಲಿ ದೇಹರಕ್ಷಣೆಗೆಂದು ಲಾಠಿ ಹಿಡಿದು, ಲಾಠಿಗಿಂತಲೂ ಬಲಿಷ್ಠವಾಗಿ ಈಶ್ವರಪ್ಪ ಬೆಳೆದರಂತಲ್ಲಾ, ಬಿಜೆಪಿ ಎಂಬ ಭೋಜನ ಪಾರ್ಟಿಯಲ್ಲಿ ಈತ ಬಕಾಸುರನಾಗಿ ಬೆಳೆದ ಫಲವಾಗಿ ನೋಟು ಎಣಿಸಲಾಗದೆ ನೋಟೆಣಿಸುವ ಯಂತ್ರವನ್ನೇ ಕೊಂಡಿದ್ದರಂತಲ್ಲಾ, ಆಗ ಲೋಕಾಯುಕ್ತರು ಮನೆಗೆ ದಾಳಿ ಮಾಡಿ, ನೋಟನ್ನು ಹುಡುಕದೆ ಬರಿ ನೋಟು ಎಣಿಸುವ ಯಂತ್ರವನ್ನು ಪತ್ತೆ ಹಚ್ಚಿ ಬತ್ತರಿಸಿದರಂತಲ್ಲಾ, ಸಂದರ್ಭಕ್ಕೊಂದು ಸುಳ್ಳು ಎಸೆಯುವ ಈಶ್ವರಪ್ಪ "ಅದು ಮಕ್ಕಳು ಆಡಲೆಂದು ತಂದಿದ್ದ ಆಟಿಕೆಯೇ ಹೊರತು ಆ ಯಂತ್ರಕ್ಕೂ ನನಗೂ ಯಾವ ಸಂಬಂಧವೂ ಇಲ್ಲ, ಮಕ್ಕಳಾಡಲು ನೋಟು ಎಣಿಸುವ ಯಂತ್ರ ತಂದು ಕೊಡಬಾರದೆ? ಮುಂದೆ ಮಕ್ಕಳುಗಳು ವ್ಯವಹಾರ ಕಲಿಯುವುದು ಹೇಗೆ" ಎಂದು ಟೀಕಾಕಾರರ ಬಾಯಿ ಮುಚ್ಚಿಸಿದ್ದರಲ್ಲಾ, ಈಗ ಅದೇ ಬಾಯಿಂದ ಕಪ್ಪಿನಕ್ಕಿ ಸದನದಲ್ಲಿ "ನಾನೊಬ್ಬ ವ್ಯವಹಾರಸ್ಥ, ಪ್ರತಿದಿನ ಸಾವಿರಾರು ರೂಪಾಯಿಗಳ ಬಟವಾಡೆ ಇರುತ್ತದೆ. ಪ್ರತಿಪಕ್ಷ ನಾಯಕನ ಜವಾಬ್ದಾರಿ ಹೊತ್ತಿರುವ ನಾನು ನನ್ನ ಗುರುತರ ಕರ್ತವ್ಯ ಬಿಟ್ಟು ನೋಟು ಎಣಿಸುತ್ತ ಕೂರಲಾಗುವುದಿಲ್ಲ, ಅಷ್ಟಕ್ಕೂ ಅದು ನೋಟುಗಳನ್ನ ಎಣಿಸುವ ಯಂತ್ರವೇ ಹೊರತು, ಪ್ರಿಂಟ್ ಮಾಡುವ ಯಂತ್ರವಲ್ಲ" ಎಂದಾಗ ಕಾಂಗ್ರೆಸ ಕಕವಾಗಳು ಪಿಳಿಪಿಳಿ ನೋಡುತ್ತ ಸುಮ್ಮನಿದ್ದವಲ್ಲಾ, ಧೂತ್ತೇರಿ!!!

***

ನಮ್ಮ ಮಹಿಳಾ ಹೋರಾಟಗಾರ್ತಿ ಬಿ.ಟಿ. ಲಲಿತಾನಾಯಕ್ "ಈ ಸಿದ್ದರಾಮಯ್ಯನವರು ಜಾತಿ ಕೂಟ ಬಿಟ್ಟು ಹೊರಬರಬೇಕು. ಮೂಢನಂಬಿಕೆ ತೊಲಗಿಸಬೇಕು, ಜಾತಿ ಕೂಡ ಮೂಢನಂಬಿಕೆ" ಎಂಬ ಸೂಕ್ತ ಸಲಹೆ ಕೊಟ್ಟಿದ್ದಾರಲ್ಲಾ, ಇದನ್ನು ಗಂಭೀರವಾಗಿಯೇ ತೆಗೆದುಕೊಂಡು ಗಮನಿಸಿದಾಗ ಸಿದ್ದರಾಮಯ್ಯ ಕುಂತಲ್ಲಿ, ನಿಂತಲ್ಲಿ ಒಂದು ಕುರುಬರ ಬೇಲಿ ಇರುತ್ತದಂತೆ. ಸೋಷಲಿಸ್ಟ್, ಶಿವಣ್ಣ, ಮಾಜಿ ಪೊಲೀಸ್ ಕೆಂಪಯ್ಯ, ಮಾಜಿ ಮೇಯರ್ ಮತ್ತು ಹಲವು ಮಾಜಿಗಳು ಸಿದ್ದುಗೆ ಇಷ್ಟವಿಲ್ಲದಿದ್ದರೂ




ಮುತ್ತಿಕೊಂಡು ಲಲಿತಾ ನಾಯಕಿಗೆ ಸಿದ್ದು ಕಾಣದಂತೆ ಮಾಡಿವೆಯಂತಲ್ಲಾ, ಅಷ್ಟಕ್ಕು ನಮ್ಮ ಮಹಿಳಾ ಹೋರಾಟಗಾರ್ತಿಯ ಪ್ರೀತಿಯ ಮಗ ಈಗ ಮಾಡಿಕೊಳ್ಳುತ್ತಿರುವುದು ನಾಲ್ಕನೆ ಮದುವೆ. ಮೊದಲ ಮದುವೆ ಸ್ವಜಾತಿಯಲ್ಲಿ ಇನ್ನ ಮೂರು ಮದುವೆ ವಿಜಾತಿಗಳಲ್ಲಿ, ಸದರಿ ನಾಲ್ಕು ಹೆಣ್ಣುಮಕ್ಕಳು ಈ ಮಗನ ಕಿರುಕುಳದಿಂದ ಬೀದಿಪಾಲಾದ ಕಾರಣವಾಗಿ ಈಗ ಮದುವೆ ಒಡಂಬಡಿಕೆ ಬಿಟ್ಟು ಬೇಕಾದವರು ಬಂದು ಇದ್ದುಕೊಂಡು ಹೋಗಲಿ ಎಂದು ತುಂಬ ಜಾತ್ಯತೀತನಾಗಿ ಯೋಚಿಸಿದನಂತಲ್ಲಾ, ಇದರ ಫಲವಾಗಿ, ಸಿನಿಮಾ ನಟಿಯಾಗಲು ಅವಕಾಶ ಕೇಳಿಕೊಂಡು ಬರುವ ಹೆಣ್ಣುಮಕ್ಕಳು, ಆತನ ಮನೆಯಲ್ಲಿ ವಸ್ತಿ ಹೊಗೆದು ಮತ್ತೆ ತಿರುಗಿ ನೋಡದಂತೆ ಹೋಗುತ್ತಿವೆಯಲ್ಲಾ, ಈ ಜಾತ್ಯತೀತ ನಾಯಕಿಯ ಮಗನೇ ಹೆಣ್ಣುಗಳಿಗೆ ಕಂಟಕವಾಗಿರುವುದೊಂದು ವಿಪರ್ಯಾಸವೆಂದು ಲಂಬಾಣಿಗರೇ ಲಬೊ ಲಬೊ ಮಾಡುತ್ತಿದ್ದಾರಂತಲ್ಲಾ, ಧೂತ್ತೇರಿ!!!

***

ಮೊಟ್ಟಮೊದಲ ಬಾರಿಗೆ ನಮ್ಮ ಎಸ್ಸೆಂ ಕೃಷ್ಣ ಆತ್ಮಹತ್ಯೆ ಮಾಡಿಕೊಂಡ ರೈತರ ಮನೆ ಹುಡುಕುತ್ತ ಹೊರಟಿದ್ದಾರೆ. ಇದೊಂದು ಶುಭಸೂಚನೆ. ಹೊನ್ನನಾಯ್ಕನ ಹಳ್ಳಿಯ ಶಿವಲಿಂಗೇಗೌಡರ ಮನೆಗೆ ಹೋಗಿ 50 ಸಾವಿರ ಧನಸಹಾಯವಂತೂ 'ನಮಗ್ಯಾರೂ ಇಲ್ಲ' ಎಂಬ ಭಾವನೆಯವರಿಗೆ ಆತ್ಮವಿಶ್ವಾಸ ತುಂಬಿದೆ. ಯಾವಾಗಲೂ ತಡವಾಗಿ ಏಳುವ, ತಡವಾಗಿ ಸ್ಪಂದಿಸುವ, ತಡವಾಗಿ ಮಾತನಾಡುವ ಸಿದ್ದರಾಮಯ್ಯ ಕೂಡ ಶಿವಲಿಂಗೇಗೌಡನ ಕುಟುಂಬಕ್ಕೆ ಸಹಾಯ ಮಾಡಿದ್ದಾರೆ. ಎಸ್ಸೆಂ ಕೃಷ್ಣರ ಅವಧಿಯಲ್ಲೂ ಆತ್ಮಹತ್ಯೆಗಳು ನಡೆದಿದ್ದವು. ಅದೂ ಮದ್ದೂರು ತಾಲ್ಲೂಕಿನಲ್ಲೇ ನಡೆದಾಗ ಅಸಹಾಯಕರಾಗಿ ಸುಮ್ಮನಿದ್ದ ಕೃಷ್ಣ ಇಂಟಲಿಜೆನ್ಸ್ ರಿಪೋರ್ಟ್ ನೋಡಿ ಕ್ಷೇತ್ರವನ್ನೇ ಬದಲಿಸಿ ಬೆಂಗಳೂರಿಗೆ ಓಡಿದ್ದರು. ಹರುಕಲು ಅಂಗಿಯ, ತೇಪೆ ಚಡ್ಡಿಯ, ಕಾಯಕಲೆ ಟವಲ್ಲಿನ ಬೀದಿ ಬುಕ್ಕ ಜನರಿಂದ ತಪ್ಪಿಸಿಕೊಂಡು ತಿರುಗುವ ಕೃಷ್ಣಗೆ ಕಡೆಗಾಲದಲ್ಲಿ ಜ್ಞಾನೋದಯವಾಗಿರುವುದೊಂದು ಅಚ್ಚರಿ. ಅವರು ಮತ್ತು ಅವರ ಅಳಿಯನ ಆಸ್ತಿ ಅಳೆದರೆ ಪಕ್ಷ ಕರ್ನಾಟಕದಲ್ಲಿ ಮೃತಪಟ್ಟ ಪ್ರತಿ ರೈತರ ಕುಟುಂಬಗಳಿಗೂ 50 ಸಾವಿರ ಕೊಡಬಹುದೆಂದು ಮದ್ದೂರು ಜನಗಳೇ ಹೇಳುತ್ತಿದ್ದಾರಲ್ಲಾ, ಇದಕ್ಕೆ ಸಿಲ್ಲಿ ಮ್ಯಾಟರ್ ಸದಾನಂದಗೌಡನೂ ನಗುತ್ತಲೇ ಉತ್ತರಿಸಿ "ರೈತರ ಸಾವು ಒಂದು ಸಿಲ್ಲಿ ಮ್ಯಾಟರ್" ಎಂದು ಇನ್ನೂ ಪ್ರತಿಕ್ರಿಯಿಸಿಲ್ಲವಂತಲ್ಲಾ, ಧೂತ್ತೇರಿ!!! ■

ಬಾದಾಮಿ ಶಾಸಕನ ಭಾನ್ಗಡಿಗಳು


ಬಿ.ಬಿ. ಚಿಮ್ಮನಕಟ್ಟಿ

ಚಾಲುಕ್ಯ ದೊರೆಗಳಾಳಿದ ಐತಿಹಾಸಿಕ ನಗರ ಬಾದಾಮಿ. ರಾಜ್ಯದ ಪ್ರಮುಖ ಪ್ರವಾಸಿ ತಾಣವೂ ಹೌದು. ಆದರೆ ಶಾಸಕ ಬಿ.ಬಿ.ಚಿಮ್ಮನಕಟ್ಟಿಯ ಪರ್ಸೆಂಟೇಜ್ ಪೊಲಿಟಿಕ್ಸ್‌ನಿಂದಾಗಿ ಇವತ್ತು ಅದೇ ಬಾದಾಮಿ ದಯನೀಯ ಸ್ಥಿತಿ ತಲುಪಿದೆ. ಸರಾಗವಾಗಿ ಹರಿಯದೆ ಗೊಬ್ಬೆದ್ದು ನಾರುವ ಚರಂಡಿಗಳು, ಆಳುದ್ದದ ಗುಂಡಿಗಳ ನಡುವೆ ಅಳಿದುಳಿದ ರಸ್ತೆಗಳು, ಕುಡಿಯುವ ನೀರಿನ ತತ್ವಾರ, ಮೂಲಸೌಕರ್ಯವಿಲ್ಲದ ಪ್ರವಾಸಿ ತಾಣ, ಹೀಗೆ ಗತವೈಭವದ ಬಾದಾಮಿಯ ನತದೃಷ್ಟ ಚಿತ್ರಣ ಚಿಮ್ಮನಕಟ್ಟಿಯ ಶಾಸಕಗಿರಿಗೆ ಸಾಕ್ಷಿಯಾಗಿ ನರಳುತ್ತಿದೆ. ಓಟು ಹಾಕಿದ ಮತದಾರರೇ 'ಸಾಕಪ್ಪಾ, ಸಾಕು ಇವ್ನ ಸಾವಾಸ, ಏಟು ಬೇಗ ಎಲೆಕ್ಷನ್ ಬಂದತೊ' ಅಂತ ಚಿಮ್ಮನಕಟ್ಟಿಗೆ ಗೇಟ್‌ಪಾಸ್ ನೀಡಿ ಗದುಮುಲು ಕಾದು ಕುಳಿತಿದ್ದಾರೆ. ಸಾಮಾನ್ಯ ಜನರ ಮಾತು ಒತ್ತಟ್ಟಿಗಿರಲಿ, ತನ್ನ ಗೆಲುವಿಗೆ ಶ್ರಮಿಸಿದ ಕಾರ್ಯಕರ್ತರನ್ನೇ ಕ್ಯಾರೇ ಎನ್ನದೇ, ಅವರ ಜಮೀನು-ಮನೆಗಳನ್ನೆಲ್ಲ ಅಡ ಇಡಿಸಿ ಸಾಲ ಎತ್ತಿಕೊಂಡಿರುವ ಚಿಮ್ಮನಕಟ್ಟಿ ಯಾರ ಕೈಗೂ ಸಿಗದೇ ಹೆಂಡತಿ ಮಗನ ಕೈಗೆ ಅಧಿಕಾರದ ಚುಕ್ಕಾಣಿ ಕೊಟ್ಟು ನಾಪತ್ತೆಯಾಗಿದ್ದಾನೆ.


ಹೆಂಡತಿ ಮಗನದ್ದೇ ದರ್ಬಾರು

ಒಂದು ಕಾಲಕ್ಕೆ ಮಂತ್ರಿಯಾಗಿ, ಹಲವು ಬಾರಿ ಶಾಸಕನಾಗಿ ಅನುಭವಿ ರಾಜಕಾರಣಿ ಎನಿಸಿಕೊಂಡವ ಹೇಗೆ ನಡೆದುಕೊಳ್ಳಬೇಕಿತ್ತೊ ಅದಕ್ಕೆ ಕಿಂಚಿತ್ತೂ ಸಂಬಂಧವಿಲ್ಲದಂತಿದೆ ಚಿಮ್ಮನಕಟ್ಟಿಯ ನಡವಳಿಕೆ. ತನ್ನನ್ನು ಆರಿಸಿ ಕಳುಹಿಸಿದ ಜನ, ಗೆಲುವಿಗಾಗಿ ಶ್ರಮಿಸಿದ ಕಾರ್ಯಕರ್ತರು ಇವರನ್ನೆಲ್ಲಾ ಪಕ್ಕಕಿಟ್ಟು ಹೆಂಡತಿ ರತ್ನಾಬಾಯಿ ಮತ್ತು ಮಗ ಭೀಮಸೇನ ಅಲಿಯಾಸ್ ರಾಜುಗೆ ಶರಣಾದವನಂತೆ ಮೂಲೆ ಸೇರಿದ್ದಾನೆ.


ಜನ ತನ್ನ ಗಂಡನನ್ನು ಆರಿಸಿದ್ದು ಫುಲ್‌ಟೈಂ ವಸೂಲಿ ಮಾಡೋದಕ್ಕೆ ಅಂತ ತಿಳಿದಿರುವ ರತ್ನಾಬಾಯಿ ಬೆಳಗ್ಗೆ ಎದ್ದ ತಕ್ಷಣ ಮಾಡುವ ಮೊದಲ ಕೆಲಸವೆಂದರೆ ಮಗ ರಾಜು ಜೊತೆ ಕೂತು ಆಫೀಸರ್‌ಗಳ ಟೆಲಿಫೋನ್ ಡೈರಿ ತೆರೆದು ಒಬ್ಬೊಬ್ಬರಿಗೇ ಫೋನ್ ಮಾಡಿ ಬರಹೇಳೋದು. ಬಂದ ಅಧಿಕಾರಿಗಳಿಗೆ 'ಏನಯ್ಯಾ ಎಷ್ಟು ಕೊಡ್ತೀಯಾ, ನಿನ್ನ ಜಾಗಕ್ಕೆ ಬರೋಕ್ಕೆ ಬೇರೆಯವರು ಇಷ್ಟು ಹಣ ಕೊಡಲು ತುದಿಗಾಲಲ್ಲಿ ನಿಂತಿದಾರೆ. ನೀನು ಇಲ್ಲೇ ಉಳಿಬೇಕು ಅಂದ್ರೆ ಇಷ್ಟು ಕೊಡು' ಅನ್ನೋದೂ ಇವರ ನಿತ್ಯ ಕಾಯಕವಾಗಿದೆ. ಬಂದವರು ಕೂಡಾ ಇರುವುದು ಆರೆಂಟು ತಿಂಗಳು ಮಾತ್ರ. ನಂತರ ಬೇರೆ ಸರದಿ ದರದಲ್ಲಿ ಬದಲಾವಣೆ ಸಹಕರಿಸಿ ಎಂಬ ಸ್ಲೋಗನ್ ತೂಗು ಹಾಕಿ ಬಿಡುತ್ತಾರೆ. ಹೀಗೆ ಬಂದ ಅಧಿಕಾರಿಗಳಲ್ಲಿ ಪ್ರಮುಖರೆಂದರೆ ತಹಸೀಲ್ದಾರ್ ವೀರೇಶ್ ಬಿರಾದಾರ್, ಪಿಎಸ್‌ಐ ಪುಂಡಲೀಕ ಪಟಾತರ, ಸಿಪಿಐ ಮಹೇಶ್ ಓಲೇಕಾರ, ಬಿಇಓ ಅಂದಾನಪ್ಪ ವಡಗೇರಿ, ಬಿಆರ್‌ಸಿ ಸಿದ್ದಮ್ಮ ಪಾಟೀಲ್, ಪಿಡಬ್ಲ್ಯೂಡಿ ಕುದರಿ, ಅಗ್ರಿಕಲ್ಚರ್ ಎಡಿ ನರಹಟ್ಟಿ, ಗುಳೇದಗುಡ್ಡ ಚೀಫ್ ಆಫೀಸರ್ ಮಲ್ಲೇಶಿ; ಹೀಗೆ ಪಟ್ಟಿ ಬೆಳೆಯುತ್ತಲೇ ನಡೆದಿದೆ. ಇವರೆಲ್ಲ ಇರೋದು ಸಾರ್ವಜನಿಕರ ಕೆಲಸಕ್ಕಿಂತಾ ಚಿಮ್ಮನಕಟ್ಟಿ ಕೆಲಸಕ್ಕೆ,

> **ಜನ ತನ್ನ ಗಂಡನನ್ನು ಆರಿಸಿದ್ದು ಫುಲ್‌ಟೈಂ ವಸೂಲಿ ಮಾಡೋದಕ್ಕೆ ಅಂತ ತಿಳಿದಿರುವ ರತ್ನಾಬಾಯಿ ಬೆಳಗ್ಗೆ ಎದ್ದ ತಕ್ಷಣ ಮಾಡುವ ಮೊದಲ ಕೆಲಸವೆಂದರೆ ಮಗ ರಾಜು ಜೊತೆ ಕೂತು ಆಫೀಸರ್‌ಗಳ ಟೆಲಿಫೋನ್ ಡೈರಿ ತೆರೆದು ಒಬ್ಬೊಬ್ಬರಿಗೇ ಫೋನ್ ಮಾಡಿ ಬರಹೇಳೋದು. ಬಂದ ಅಧಿಕಾರಿಗಳಿಗೆ 'ಏನಯ್ಯಾ ಎಷ್ಟು ಕೊಡ್ತೀಯಾ, ನಿನ್ನ ಜಾಗಕ್ಕೆ ಬರೋಕ್ಕೆ ಬೇರೆಯವರು ಇಷ್ಟು ಹಣ ಕೊಡಲು ಕಾಲುಮೇಲೆ ನಿಂತಿದಾರೆ. ನೀನು ಇಲ್ಲೇ ಉಳಿಬೇಕು ಅಂದ್ರೆ ಇಷ್ಟು ಕೊಡು' ಅನ್ನೋದೂ ಇವರ ನಿತ್ಯ ಕಾಯಕವಾಗಿದೆ.**

ಈ ಗೌಡಸಾನಿಯ ಬೆದರಿಕೆ ಫಜೀತಿ ಕೇವಲ ಅಧಿಕಾರಿಗಳಿಗೆ ಮಾತ್ರವಲ್ಲ, ತಮ್ಮದೇ ಪಕ್ಷದ ಕಾರ್ಯಕರ್ತರಿಗೂ ಇಂಥದೇ ಧಮಕಿ ಹಾಕೋದ್ರಲ್ಲಿ ರತ್ನಾ'ಬಾಯಿ' ದೊಡ್ಡದು. ಅಷ್ಟಕ್ಕೂ ಚಿಮ್ಮನಕಟ್ಟಿಯ ಯೋಗ್ಯತೆ ಗೊತ್ತಾದ ಮೇಲೂ ಯಾವೊಬ್ಬ



ಕಾರ್ಯಕರ್ತನೂ ಅವನ ಬಳಿ ಸಹಾಯ ಕೇಳಿಕೊಂಡು ಅವನ ಮನೆ ಬಾಗಿಲಿಗೆ ಕಾಲಿಡೋದಿಲ್ಲ, ಅವರೆಲ್ಲಾ ಚಿಮ್ಮನಕಟ್ಟಿ ಮನೆ ಬಾಗಿಲು ಎಡತಾಕಲು ಬೇರೆಯದೇ ಕಾರಣವಿದೆ. ಚಿಮ್ಮನಕಟ್ಟಿಯ ಸಕ್ಕರೆ ಕಾರ್ಖಾನೆ. ಅದಕ್ಕೆ ಕಾರಣ ಮುಂದೆ ಎಲೆಕ್ಷನ್‌ನಲ್ಲಿ ಗೆಲ್ಲೋದು ಶತಃಸಿದ್ಧ, ನಾನು ಮಂತ್ರಿಯಾಗೋದು ಖರೆ, ಆಗ ಶಿಥಿಲಾವಸ್ಥೆಯಲ್ಲಿರುವ ಈ ಸಕ್ಕರೆ ಕಾರ್ಖಾನೆಗೆ ಹೊಸ ಚೈತನ್ಯ ತುಂಬುತ್ತೇನೆ, ಆಗದು ಭಾರೀ ಲಾಭ ಗಳಿಸುತ್ತೆ ಆ ಲಾಭದಲ್ಲಿ ನಿಮಗೂ ಪಾಲು ಬೇಕಾದ್ರೆ ಈಗಲೇ ಅದರ ಪುನಶ್ಚೇತನಕ್ಕೆ ಒಂದಿಷ್ಟು ಶೇರು ಹಾಕಿ ಅಂತ ಕಾರ್ಯಕರ್ತರ ಕಿವಿ ಊದಿದ್ದ ಚಿಮ್ಮನಕಟ್ಟಿ ಅವರ ಜಮೀನುಗಳನ್ನು ಅಡ ಇಟ್ಟು ಸಾಲ ಎತ್ತಿದ್ದ.


ರತ್ನಾಬಾಯಿ


ರಾಜು ಚಿಮ್ಮನಕಟ್ಟಿ


ಕಾರ್ಯಕರ್ತರ ಷೇರು ವಾಪಾಸ್ಸು ಮಾಡುವುದಿರಲಿ, ರೈತರ ಕಬ್ಬಿನ ಬಾಕಿಯನ್ನೇ ತೀರಿಸಲಾಗದೆ ಐಸಿಯು ಸೇರುವ ಹಂತದಲ್ಲಿರುವ ಸಕ್ಕರೆ ಕಾರ್ಖಾನೆಯ ಮೇಲೆ ಅವರ್‍ಯಾರಿಗೂ ಈಗ ಭರವಸೆ ಉಳಿದಿಲ್ಲ. ಅಲ್ಲದೇ ಸಾಲ ಕೊಟ್ಟಿದ್ದ ಬ್ಯಾ... ಇವರ ಮನೆಗಳಿಗೆ ನೋಟಿಸ್ ಕಳಿಸಿದೆ. ಹಾಗಾಗಿ... ತಮ್ಮ ಹಣ ವಾಪಾಸ್ ಕೊಡಿ ಅಂತ ಚಿಮ್ಮನಕಟ್ಟಿ... ಮನೆ ಬಳಿಗೆ ಎಡತಾಕುತ್ತಿದ್ದಾರೆ. ಹಾಗೆ ಬಂದವರಿ... ರತ್ನಾಬಾಯಿಯಿಂದ ಸರಿಯಾದ ಸ್ವಾಗತವೇ ಸಿಗುತ್ತಿ... 'ಸಾಹೇಬರು ಅಧಿಕಾರದಲ್ಲಿದ್ದಾಗ ಎಲ್ಲ ಅನುಭವಿಸಿದ್ದೀರಿ. ನಿಮ್ಮಿಂದ ಫ್ಯಾಕ್ಟರಿ ಗುಜರಿಗೆ ಹಾಕೋ ಸ್ಥಿತಿ ಬಂದಿದೆ. ನೀವೇ ನಿಭಾಯಿಸಿಕೊಳ್ಳಿ... ಮನೆಗೆ ಬರೊ ಜರೋರೆ ಇಲ್ಲ' ಅಂತ ಕಡ್ಡಿಮುರದಂಗೆ ಹೇಳುತ್ತಾಳೆ.

ಇನ್ನು ಆ ಶುಗರ್ ಫ್ಯಾಕ್ಟರಿ ಕತೆಯೆ ಬೇರೆ... ಇಪ್ಪತ್ತು ವರ್ಷದ ಹಿಂದೆ ಚಾಲುಕ್ಯ ಉದ್ಯೋಗ ಮಹಾಹತು ಅಂತ ಒಂದು ಸಂಸ್ಥೆ ಪ್ರಾರಂಭಿಸಿ ಪ್ರತಿ... ನಿರುದ್ಯೋಗಿಗೆ ಉದ್ಯೋಗ ಕೊಡಿಸುತ್ತೇವೆ, ಅದಕ್ಕೆ... ಅವರೇ ಬ್ಯಾಂಕಿಂಗ್ ಸಹಾಯ ಮಾಡಿಕೊಂಡು ಮೂಲಭೂತ ಸೌಲಭ್ಯ ಕಲ್ಪಿಸಿಕೊಳ್ಳುವ ಸಹಕಾರಿ ಯೋಜನೆ ಅನುಷ್ಠಾನಕ್ಕೆ ತರುತ್ತೇವೆ ಅಂತ ಇದೇ ಚಿಮ್ಮನಕಟ್ಟಿ ಸದಸ್ಯತ್ವ ಶುಲ್ಕವೆಂದು ಪ್ರತಿಯೊಬ್ಬರಿ... 5000 ರೂಪಾಯಿ ಕಟ್ಟಿಸಿಕೊಂಡಿದ್ದ. ಅಸಲಿಗೆ ಆ... ಇಡೀ ಯೋಜನೆಯ ಗುತ್ತಿಗೆ ಹಿಡಿದದ್ದು, ಶಾಸಕನ... ಚಿಮ್ಮನಕಟ್ಟಿಯ ಪಿ.ಎ ಆಗಿದ್ದ ದೇಶಪಾಂಡೆ ಎಂಬ... ಆ ಸಂಸ್ಥೆಗೆಂದು ಹತ್ತಾರು ಎಕರೆ ಜಮೀನನ್ನು ಸಿಂ... ವಿಂಡೋ ಸ್ಕಿಮ್‌ನಲ್ಲಿ ಬರಿ ಒಂದು ರೂಪಾಯಿ ಸ್ಟಾಂಪಿಂಗ್ ವ್ಯವಸ್ಥೆಯಲ್ಲಿ ಖರೀದಿಸಿದ್ದ. ಆಮೇಲೆ ಕಲೆಕ್ಟ್ ಮಾಡಿದ್ದ ದೇಶಪಾಂಡೆ ದಿಢೀರ್ ನಾಪತ್ತೆಯಾಗಿದ್ದ. ಚಾಲುಕ್ಯ ಸಂಸ್ಥೆಯ ಅದೇ ಬೋ... ರಾತ್ರೋರಾತ್ರಿ ಬಾದಾಮಿ ಶುಗರ್ಸ್ ಅಂತ ಬದಲಾಗಿಬಿಟ್ಟಿತ್ತು. ನಿರುದ್ಯೋಗಿಗಳಿಗೆ ಭರ್ಜರಿ ಪಂಗನಾಮವೇ ಬಿದ್ದಿತ್ತು. ಹಣ ಕಟ್ಟಿದ್ದವರು ಈ ಸಂಗತಿ ಕೇಳಲು ಹೋದರೆ, 'ನೀವು ಹಣ ಕಟ್ಟಿದ... ದೇಶಪಾಂಡೆಯನ್ನೇ ಕೇಳಿಕೊಳ್ಳಿ. ಆತ ನನಗೆ ನಯಾಪೈಸೆ ನೀಡಿಲ್ಲ, ನಾನೇನು ಮಾಡ್ಲಿ' ಅಂತ ಚಿಮ್ಮನಕಟ್ಟಿ ಏಕದಂ ತಿಪ್ಪೆ ಸಾರಿಸಿದ್ದ.

ಹೀಗೆ ಮೋಸದ ಹಣದಿಂದ ಆರಂಭವಾದ ಶುಗರ್ ಫ್ಯಾಕ್ಟರಿ ಎಷ್ಟು ದಿನ ಬದುಕಿಯಾತು. ವಿಪರ್ಯಾಸವೆಂದರೆ, ಅದು ಏದುಸಿರು ಬಿಟ್ಟು ಬದುಕಿದ್ದಷ್ಟೂ ದಿನ ಹಲವಾರು ರೈತರನ್ನು ವಂಚಿಸುತ್ತಲೇ ಬಂದಿತ್ತು. ಸತತ ಗೆಲುವುಗಳಿಂದ ವಿಜೃಂಭಿಸುತ್ತಿದ್ದ ಚಿಮ್ಮನಕಟ್ಟಿಯನ್ನು ಒಂದು ಹಂ... ಸೋಲಿಸಿದ್ದೇ ಈ ಶುಗರ್ ಫ್ಯಾಕ್ಟರಿ. ಅವನ ಫ್ಯಾಕ್ಟರಿಯಿಂದ ಮೋಸ ಹೋದ ರೈತರು ಅವನ... ಆಗಿನ ಕಾಲಕ್ಕೇ ಬರೋಬ್ಬರಿ 40 ಸಾವಿರ ಮತ... ಅಂತರದಿಂದ ಒಮ್ಮೆ ಮನೆಗಟ್ಟಿದ್ದರು. ಈಗ ಮ... ಫ್ಯಾಕ್ಟರಿಯ ಹೆಸರೇಳಿಕೊಂಡು ಸ್ವಂತ ಕಾರ್ಯಕರ್ತ... ದ್ರೋಹ ಬಗೆದಿದ್ದಾನೆ. ಇವನಿಂದಾಗಿ ಬಾದಾಮಿಯ... ಕಾಂಗ್ರೆಸ್ ಪಕ್ಷದ ಕಾರ್ಯಕರ್ತರೇ ದಿನದಿಂದ ದಿ... ಕ್ಷೀಣಿಸುತ್ತಿದ್ದಾರೆ. ಹಿಂದಿನ ನೆಚ್ಚಿನ ಕಾರ್ಯಕರ್ತರಾ... ಈರಣ್ಣ ಹುನಗುಂದಿ, ಶಂಕರಗೌಡ ಪಾಟೀಲ್, ... ಹಿರೇಮಠ, ಆರ್.ಎಫ್. ಬಾಗವಾನ್,

ಕಿತ್ತಲಿ ಮಲ್ಲ ಕಂಡವರ ಜೇಬಿಗೆ ಕೈ ಇಟ್ಟನಲ್ಲ

ಒಂದೆಡೆ ಶಾಸಕ ಚಿಮ್ಮನಕಟ್ಟಿಯಿಂದಾಗಿ ಬಾದಾಮಿ ಮೂಲ ಸೌಕರ್ಯಗಳಿಲ್ಲದೇ ನರಳಾಡುತ್ತಿದ್ದರೆ, ಇದೇ ಕ್ಷೇತ್ರಕ್ಕೆ ಸೇರುವ ಮತ್ತೊಂದು ವ್ಯಾಪಾರಿ ಕೇಂದ್ರ ಕೆರೂರ ಪಟ್ಟಣದ ಗ್ರಹಚಾರವನ್ನು ಡಾ. ಮಲ್ಲು ಕಿತ್ತಲಿ ಕಿತ್ತು ತಿನ್ನುತ್ತಿದ್ದಾನೆ. ಇಡೀ ಪಟ್ಟಣಕ್ಕೆ ಸ್ವಯಂಘೋಷಿತ ಶಾಸಕನಂತಾಡುವ ಡಾ. ಮಲ್ಲು ಚಿಮ್ಮನಕಟ್ಟಿಯ ಕುಲಬಾಂಧವ. ವೃತ್ತಿಯಿಂದ ಡಾಕ್ಟರ್ ಆದರೂ ಚಿಮ್ಮನಕಟ್ಟಿ ಸಹವಾಸದಿಂದಾಗಿ ನಂದಕೇಶ್ವರ ಗ್ರಾಮದ ಜಿಲ್ಲಾ ಪಂಚಾಯ್ತಿ ಸದಸ್ಯ. ಕೆರೂರಲ್ಲಿ ನಡಯೋ ಪ್ರತಿ ಭಾನ್ಗಡಿಯಲ್ಲಿ ಈತನ ಕೈವಾಡ ಇರೋದು ಖಾತ್ರಿ. ಕಾಂಗ್ರೆಸ್ ಸದಸ್ಯನಾದರೂ ಸಮಯ ಸಾಧಕತನದ ರಾಜಕಾರಣಿ. ಶಾಸಕ ನಮ್ಮವ. ಅಷ್ಟೇ ಏಕೆ ಮುಖ್ಯಮಂತ್ರಿ ನನ್ನ ಖಾಸಾ ಮನುಷ್ಯ ಅಂತ ಸ್ಲೋಗನ್ ಪ್ರಾರಂಭಿಸೋ ಮಲ್ಲು ಅವಾಂತರಗಳು ಒಂದೆರಡಲ್ಲ.


ಮಲ್ಲು ಕಿತ್ತಲಿ

ಸರ್ಕಾರಿ ಆಸ್ಪತ್ರೆಯಲ್ಲಿ ಡಾಕ್ಟರ್ ಮನಿಯಾರ್ ಎಂಬ ವೈದ್ಯ ಜನರ ನಡುವೆ ಒಳ್ಳೆ ಹೆಸರು ಮಾಡಿ, ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡಿಕೊಂಡಿದ್ದರು. ಇದರಿಂದಾಗಿ ಜನ ಖಾಸಗಿ ಕ್ಲಿನಿಕ್ ಮತ್ತು ನರ್ಸಿಂಗ್ ಹೋಂಗಳತ್ತ ತಲೆ ಹಾಕುವುದನ್ನೇ ಮರೆತಿದ್ದರು. ಅವರಿಂದ ಡೀಲು ಪಡೆದ ಮಲ್ಲು, ಊರಿನ ಎಲ್ಲ ಡಾಕ್ಟರ್, ಮೆಡಿಕಲ್ ಶಾಪ್‌ನವರಿಂದ ಚಂದಾ ಎತ್ತಿ ಮನಿಯಾರ್‌ನನ್ನು ಎತ್ತಂಗಡಿ ಮಾಡಿಸಿದ್ದ.

ಪಟ್ಟಣ ಪಂಚಾಯ್ತಿಯ ಅನಭಿಶಕ್ತಿ ಅಧ್ಯಕ್ಷನೂ ಇವನೇ, ಪೊಲೀಸ್ ಇಲಾಖೆ ಮುಖ್ಯಸ್ಥನೂ ಇವನೆ ಎನ್ನುವಂತಾಗಿದೆ. ಎರಡು ವರ್ಷದಲ್ಲಿ ನಾಲ್ಕು ಪಿಎಸ್‌ಐಗಳು, ಇಬ್ಬರು ಇಂಜಿನಿಯರ್, ಮೂರು ಜನ ಚೀಫ್ ಆಫೀಸರ್‌ಗಳು ಕೆರೂರ ಬಿಟ್ಟು ಓಡಿಹೋಗಿದ್ದಾರೆ. ಹೈವೆ ಪಕ್ಕದಲ್ಲಿರುವ ಭೂಮಿಗೆ ಬಂಗಾರಕ್ಕಿಂತ ಹೆಚ್ಚು ಬೆಲೆ ಇರೋದನ್ನು ಅರಿತಿರುವ ಈತ ಪೊಲೀಸರನ್ನು ಛೂ ಬಿಟ್ಟು ಪಪಂ ಚೀಫ್ ಆಫೀಸರ್ ಉಪಯೋಗಿಸಿಕೊಂಡು ಕಂಡಕಂಡವರ ಭೂಮಿ ಕಿತ್ತುಕೊಳ್ಳೋದು ಇವನ ಹಕೀಕತ್ತು. ಹಾಗಾಗಿ ಇವನ ಉಟಪಳ ತಾಳದೆ ಪೊಲೀಸರು ಮತ್ತು ಆಫೀಸರ್‌ಗಳು ಓಡಿಹೋಗುತ್ತಿದ್ದಾರೆ.

...ಗೌಡರ್, ಪುಲಕೇಶಿ ಬೊಂಬ್ಳೆ ಹಾಗೂ ...ರಡಿ ಪುಭಾವಿ ಪುಳಿಕೇರಿ ಬಂದೆ ನವಾಜ್ ...ಲಾದವರು ಈಗಾಗಲೇ ಇವನ ಅಂಗಡಿಯಿಂದ ...ಕ್ಕೆ ಅಡಿ ಇಟ್ಟಾಗಿದೆ.

ದುಸ್ಥಿತಿಯಲ್ಲಿ ಬಾದಾಮಿ

...ತಿಹಾಸಿಕ ಮತ್ತು ಧಾರ್ಮಿಕ ಕ್ಷೇತ್ರವಾಗಿ ಪ್ರಸಿದ್ಧ ... ಬಾದಾಮಿಗೆ ಚಿಮ್ಮನಕಟ್ಟಿಯಿಂದ ಏನಾದರೂ ...ಯೋಜನ ಆಗಿದೆಯಾ ಎಂದರೆ ಅದೂ ಇಲ್ಲ. ... ತಾಣವಾದ ಇಲ್ಲಿನ ರಸ್ತೆಗಳು ಅದೆಷ್ಟು ...ಸ್ತವಾಗಿರಬೇಕಿತ್ತು. ಆದರೆ ಚಿಮ್ಮನಕಟ್ಟಿಯ ...ಜವಾಬ್ದಾರಿಯಿಂದಾಗಿ ರಸ್ತೆ ತುಂಬಾ ಗುಂಡಿಗಳೇ ...ಜಸುತ್ತಿವೆ. ಈ ಕಾರಣಕ್ಕೆ ಪ್ರವಾಸಿಗರ ಸಂಖ್ಯೆಯೇ ...ಮುಖವಾಗಿದೆ. ಸವದತ್ತಿಯಿಂದ ಹುನಗುಂದ ...ದವರೆಗೆ 240 ಕೋಟಿ ವೆಚ್ಚದಲ್ಲಿ ರಸ್ತೆ ...ೀಕರಣಕ್ಕೆ ಕೆಶಿಪ್ ಯೋಜನೆಯಡಿ ಹಣ ...ಗಡೆಗೊಳಿಸಲಾಗಿತ್ತು. ಕೆಲಸವೂ ಪ್ರಾರಂಭವಾಗಿತ್ತು. ... ಅಷ್ಟರಲ್ಲಾಗಲೆ ಚುನಾವಣೆ ನಡೆದು ಸರ್ಕಾರ ...ವಾಯಿತು, ಜೊತೆಗೆ ಚಿಮ್ಮನಕಟ್ಟಿಯೂ ...ಸನಾಗಿ ವಕ್ಕರಿಸಿದ್ದ. ಶಾಸಕನಾಗುತ್ತಿದ್ದಂತೆಯೇ ಆ ...ಗಾರಿಯ ಗುತ್ತಿಗೆದಾರನನ್ನು ಕರೆಸಿ ತನಗೆ ಭರ್ಜರಿ ...ಂಟೇಜ್ ಕೊಡುವಂತೆ ಬೇಡಿಕೆ ಇಟ್ಟಿದ್ದ. ...ನಕಟ್ಟಿ ಬೇಡಿಕೆ ಕೇಳಿಸಿಕೊಂಡ ಆ ಗುತ್ತಿಗೆದಾರ ...ಮಾತಾಡದೆ ಮೆಟೀರಿಯಲ್ ಎತ್ತಿಕೊಂಡು ...ಗಿಬಿಟ್ಟ. ನಂತರ ಒಂದೂವರೆ ವರ್ಷ ರಸ್ತೆ ...ಡಿ ಯಾರೊಬ್ಬರು ಬಾದಾಮಿಗೆ ಬರಲೇ ಇಲ್ಲ. ... ವಿದೇಶಿ ಪ್ರವಾಸಿಗರು ದೈರಿಯಲ್ಲಿ ದೂರು ...ಲಿಸಿ ಹೋದರು.

...ಕೊನೆಗೆ ಎಚ್ಚೆತ್ತ ಪ್ರಾಚ್ಯವಸ್ತು ಇಲಾಖೆ ವಿದೇಶಿ ...ಕ್‌ನಿಂದ ಸಾಲದ ರೂಪದಲ್ಲಿ 25 ಕೋಟಿ ಹಣ ...ಮು ರಸ್ತೆ ದುರಸ್ಥಿಗೆ ಮುಂದಾಗಿತ್ತು, ಅದನ್ನು ಸ್ವತಃ ...ಮ್ಮನಕಟ್ಟಿ ಪತ್ರಿಕಾಗೋಷ್ಠಿಯಲ್ಲಿ ಹೇಳಿಕೊಂಡಿದ್ದ. ಆ ... ಗುಳುಂ ಆಯಿತೇ ವಿನಾಃ ರಸ್ತೆ ಸುಧಾರಿಸಲಿಲ್ಲ. ...ರ ಅರ್ಬನ್ ಡೆವಲಪ್‌ಮೆಂಟ್‌ನಿಂದ 32 ಕೋಟಿ ...ಗಡೆ ಆಯಿತು. ಅದೂ ಕೂಡಾ ಮುಂದೆ ...ಯಿತೆಂಬುದು ಯಾರಿಗೂ ಗೊತ್ತಿಲ್ಲ. ...ೀಕಪಯೋಗಿ ಇಲಾಖೆಯಂತು ಅದನ್ನು ಮರತೇ ...ದೆ. ಈ ಬಗ್ಗೆ ಇಲಾಖಾ ಮುಖ್ಯಸ್ಥ ಕುದರಿಯನ್ನು ...ದರೆ ಸಿಕ್ಕೋದು ಹಾರಿಕೆ ಉತ್ತರ ಮಾತ್ರ.

...ಮರಳು ಮಾಫಿಯಾದಲ್ಲಿ ಚಿಮ್ಮನಕಟ್ಟಿಯ ಮಗ ...ಮನದ್ದೇ ಕಾರುಬಾರು. ತಾಲ್ಲೂಕಿನ ಕಿತ್ತಲಿ ಹಾಗು ...ಳ್ಳಿ ಗ್ರಾಮದ ಮಲಪ್ರಭಾ ನದಿಯಲ್ಲಿ ನಡೆಯೋ ...ಳು ಗಣಿಗೆ ಅವನೇ ಬಾಸು. ಅಸಲಿಗೆ ಆ ...ಡರ್ ಕಾಂಗ್ರೆಸ್‌ನ ನಿಷ್ಠಾವಂತ ಸಂಗಣ್ಣ ...ಬನ್ನವರಗೆ ಆಗಿತ್ತು, 'ನಿಮಗೆ ಟೆಂಡರ್ ...ಮಕೆವಾಸ್ತೆ ಇಲ್ಲೇನಿದ್ರು ನಾನೇ ಮರಳು ಎತ್ತೋದು' ...ತ ಸಂಗಣ್ಣನಿಗೆ ಧಮಕಿ ಹಾಕಿದ ರಾಜು ಆತ ಅತ್ತ



ಚಿಮ್ಮನಕಟ್ಟಿ ಮಗಳ ಮದುವೆಯಲ್ಲಿ ಕಾಂಗ್ರೆಸ್ ನಾಯಕರು

ಸುಳಿಯದಂತೆ ಮಾಡಿದ್ದಾನೆಂದರೆ ಅವನ ಗೂಂಡಾ ಖದರು ಇನ್ನೆಂತದ್ದಿರಬೇಡ.

ಇನ್ನು ಒಂದು ಕಾಲದಲ್ಲಿ ತಾನೇ ಒಂದು ಮತಕ್ಷೇತ್ರವಾಗಿದ್ದ ಗುಳೇದಗುಡ್ಡದ ಗತಿ ದೇವರಿಗೂ ಬೇಡ. ಮರುವಿಂಗಡಣೆಯಲ್ಲಿ ಬಾದಾಮಿ ಕ್ಷೇತ್ರಕ್ಕೆ ಸೇರಿದ್ದು ಗುಳೇದಗುಡ್ಡದ ದುರಾದೃಷ್ಟವೇ ಇರಬೇಕು. ಈ ನಗರದ ಅಭಿವೃದ್ಧಿಗೆ ನಗರೋತ್ಥಾನ ಯೋಜನೆಯಡಿ 5 ಕೋಟಿ ಮಂಜೂರು ಆಗಿದೆ. ಆದರೆ ಅಷ್ಟೂ ಹಣವನ್ನು ತನ್ನ ಮನೆಯ ತಿಜೋರಿ ಸೇರಿಸುವುದಕ್ಕೋಸ್ಕರ ಚಿಮ್ಮನಕಟ್ಟಿ ಇಡೀ ಪ್ಲಾನ್‌ಗೆ ಮುಖ್ಯಾಧಿಕಾರಿಯನ್ನಾಗಿ ತನ್ನ ಕುಲಬಾಂಧವ ಮಲ್ಲೇಶಿಯನ್ನು ಕೂರಿಸಿದ್ದಾನೆ.

ಬಿಬಿಸಿಯ ಪೊಲಿಟಿಕಲ್ ಪಲ್ಟಿಗಳು

ಬಿ.ಬಿ.ಚಿಮ್ಮನಕಟ್ಟಿ ಅಲಿಯಾಸ್ ಬಿಬಿಸಿ ಎಂದೇ ಕರೆಯುವ ಈ ಮಹಾನುಭಾವ ಈ ಹಿಂದೆ ಬಿಎ ಪದವಿ ಪಡೆದು ಆಲಮಟ್ಟಿಯಲ್ಲಿ ದಿನಗೂಲಿಗಾಗಿ ಸೈಕಲ್ ಏರಿ ಓಡಾಡಿಕೊಂಡಿದ್ದವ. ನಂತರ ಸಮಾಜ ಸೇವೆ ಅಂತ ಪೋಜು ಕೊಡುತ್ತಲೇ ತಮ್ಮದೇ ಕುರುಬ ಜನಾಂಗದ ಕಾಡಯ್ಯ ಎಂಬ ನಾಯಕನ ಜೊತೆಗೂಡಿ ರಾಜಕೀಯಕ್ಕೆ ಕಾಲಿಟ್ಟ. ಈ ಕಾಡಯ್ಯ ಕಾಂಗ್ರೆಸ್‌ನೊಂದಿಗೆ ಗುರುತಿಸಿಕೊಂಡ ಸಾಮಾಜಿಕ ಕಳಕಳಿ ಉಳ್ಳಂತಹ ಮನುಷ್ಯ. ಅವರ ಜೊತೆಯಲ್ಲೇ ಸಾರ್ವಜನಿಕವಾಗಿ ಮುಖ ತೋರಿಸುತ್ತಾ ಪ್ರವರ್ಧಮಾನಕ್ಕೆ ಬಂದ ಚಿಮ್ಮನಕಟ್ಟಿಗೆ ಗದಗ ಜಿಲ್ಲೆಯ ಸೊಡಿ ಗ್ರಾಮದ ರತ್ನಾಬಾಯಿಯೊಂದಿಗೆ ವಿವಾಹ ಮಾಡಿಸಲು ಕೂಡಾ ಇದೇ ಕಾಡಯ್ಯ ಮುಖ್ಯ ಕಾರಣ. ನಂತರ ಎಲ್‌ಎಲ್‌ಬಿ ಅಂತ ಅಡ್ಮಿಷನ್ ಮಾಡಿಸಿ ಅಲೆದಾಡಿದನಾದರು ವಕೀಲಿಕೆ ಮಾಡಿದ್ದನ್ನು ಕಂಡವರು ಯಾರೂ ಇಲ್ಲ.

ಗುಳೇದಗುಡ್ಡ ಮತಕ್ಷೇತ್ರದ ಜಮ್ಮನಕಟ್ಟಿ ಗ್ರಾಮದ ಈ ಚಿಮ್ಮನಕಟ್ಟಿಗೆ ಕಾಡಯ್ಯನವರೇ ಓಡಾಡಿ ಕಾಂಗ್ರೆಸ್ ಟಿಕೆಟ್ ಕೊಡಿಸಿದ್ದರು. ಚುನಾವಣೆಗೆ ನಿಂತಾಗ ಪ್ರಚಾರಕ್ಕೆ ಖರ್ಚು ಮಾಡಲೂ ಇವನಲ್ಲಿ ಕಾಸು ಇರಲಿಲ್ಲ, ಮಾವ ನೀಡಿದ 15 ಸಾವಿರ ನಂಬಿಕೊಂಡು ಪ್ರಚಾರಕ್ಕೆ ಹೋಗಿದ್ದ ವಾಹನಗಳು ಅರ್ಧ ದಾರಿಯಲ್ಲಿ ಡೀಸೆಲ್ ಖಾಲಿಯಾಗಿ ಅಲ್ಲೇ ನಿಂತುಬಿಟ್ಟಿದ್ದವು. 80ರ ದಶಕದಲ್ಲಿ ಇಂದಿರಾ ಗಾಂಧಿ ಪ್ರಭಾವ ಮತ್ತು ಕ್ಷೇತ್ರದಲ್ಲಿನ ಅತಿ ಹೆಚ್ಚು ಕುರುಬ ಮತಗಳಿಂದಾಗಿ ಚಿಮ್ಮನಕಟ್ಟಿ ನೋಡನೋಡುತ್ತಿದ್ದಂತೆಯೇ ಜಯಭೇರಿ ಬಾರಿಸಿದ್ದ.

ಚೂಟಿ ಮಾತುಗಾರ ಎಂಬ ಕಾರಣಕ್ಕೆ ಬಿಬಿಸಿಗೆ ಗುಂಡುರಾವ್ ಸರ್ಕಾರದಲ್ಲಿ ಸಣ್ಣ ನೀರಾವರಿ ಮಂತ್ರಿಗಿರಿಯೂ ಒಲಿದು ಬಂದಿತ್ತು, ಹೊಸ ಮುಖ, ಚಿಕ್ಕ ವಯಸ್ಸಿನ ಯುವಕ, ಏನಾದರು ಸಾಧನೆ ಮಾಡಬಹುದು ಅಂದುಕೊಂಡಿದ್ದವರಿಗೆ ಅವನ ಮಂತ್ರಿಗಿರಿಯ ಆರಂಭಿಕ ದಿನಗಳೇ ಆತಂಕ ಹುಟ್ಟಿಸಿದ್ದವು. ಕೈಯಲ್ಲೊಂದು ಸ್ವಂತ ಉದ್ಯೋಗವೂ ಇಲ್ಲದೇ ಅಂಡಲೆಯುತ್ತಿದ್ದ ಆಸಾಮಿಗೆ ಇದ್ದಕ್ಕಿದ್ದಂತೆ ಮಂತ್ರಿಗಿರಿ, ಅಧಿಕಾರ ಸಿಕ್ಕಿದ್ದೇ ತಡ ಮಾಡಬಾರದ ಭಾನಗಡಿ ಮಾಡಿಕೊಂಡಿದ್ದ, ಇವನ ಯೋಗ್ಯತೆಯನ್ನು ಅಂದೇ ಲೆಕ್ಕ ಹಾಕಿದ್ದ ಲಂಕೇಶರು 'ಪತ್ರಿಕೆ'ಯಲ್ಲಿ ಚಿಮ್ಮನಕಟ್ಟಿಯ ವ್ಯಂಗಚಿತ್ರ ಸಮೇತ ಅವನ ಬಂಡವಾಳವನ್ನು ಜನರೆದುರು ಬಿಚ್ಚಿಟ್ಟಿದ್ದರು. ಅಷ್ಟರಲ್ಲಾಗಲೇ, ಸ್ವಂತ ಮತಕ್ಷೇತ್ರದಲ್ಲೇ ಯಾವ ಪರಿ ಹೆಸರು ಕೆಡಿಸಿಕೊಂಡಿದ್ದನೆಂದರೆ ಪತ್ರಿಕೆಯಲ್ಲಿ ಬಂದಿದ್ದ ಅದೇ ವ್ಯಂಗ್ಯಚಿತ್ರವನ್ನು ಜನ 'ಕಟೌಟ್'ಗಳಂತೆ ಬಾದಾಮಿಯ ಪ್ರಮುಖ ಬೀದಿಗಳಲ್ಲಿ ಅಂಟಿಸಿ ರಾರಾಜಿಸುವಂತೆ ಮಾಡಿದ್ದರು.

ವೀರೇಂದ್ರ ಪಾಟೀಲ್ ಕಾಲದಲ್ಲಿ ಇವನಿಗೆ ಕಾಂಗ್ರೆಸ್ ಟಿಕೆಟ್ ಕೈ ತಪ್ಪಿತು. ಇವನ ಗುರು ಕಾಡಯ್ಯನವರಿಗೆ ಟಿಕೆಟ್ ಸಿಕ್ಕಿತ್ತು, ರಾಜಕೀಯ ಗುರು ಕಾಡಯ್ಯಗೆ ಟಿಕೆಟ್ ಸಿಕ್ಕಿದ್ದೇ ತಡ ಬಿಬಿಸಿ ಅದೇ ಗುರುವಿನ ವಿರುದ್ಧ ತಿರುಗಿ ಬಿದ್ದು, ಒಳಗಿಂದೊಳಗೇ ಜನತಾದಳದ ಗೆಲುವಿಗೆ ಕಾರಣನಾದ. ಮುಂದೆ ಎಸ್.ಎಂ. ಕೃಷ್ಣ ಸರ್ಕಾರದಲ್ಲಿ ನಗರಾಭಿವೃದ್ಧಿ ಮಂತ್ರಿಯಾಗಿ ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವನಾದ ಬಿಬಿಸಿ ಅಲ್ಲಿ ಮಾಡಬಾರದ ಕೆಲಸ ಮಾಡಿ ಕೃಷ್ಣಾ ಅವರಿಗೆ ಟಾಂಗ್ ನೀಡಲು ಹೋಗಿ ಮಂತ್ರಿ ಪದವಿಯನ್ನೇ ಕಳಕೊಂಡಿದ್ದ, ಅಲ್ಲಿಂದಲೆ ಅವನ ಸೋಲಿನ ಸರಣಿ ಪ್ರಾರಂಭವಾಯಿತೆಂದೇ ಹೇಳಬಹುದು.

2005 ಮತ್ತು 2008ರ ಚುನಾವಣೆಗಳಲ್ಲಿ ಸತತ ಸೋಲನ್ನು ಕಂಡ ಈತ ಅಕ್ಷರಶಃ ಹತಾಶಗೊಂಡ ಮನೋರೋಗಿಯಾಗಿ ಹೋದ. ವಯಸ್ಸಾದಂತೆ ಕಾಯಿಲೆಗಳು ದೇಹದಲ್ಲಿ ಗೂಟ ಬಡಿದು ಕೂಡಿಕೊಂಡು ಬಿಟ್ಟವು. ಇದನ್ನು ಅರಿತೇ 2013ರ ಚುನಾವಣೆಯಲ್ಲಿ ಪಕ್ಷ ಈತನಿಗೆ ಟಿಕೆಟ್ ಕೊಡಲಿಲ್ಲ, ಬದಲಾಗಿ ಡಾ. ದೇವರಾಜ್ ಪಾಟೀಲ್‌ನೆಂಬ ಅವನದೆ ಕುಲಬಾಂಧವನಿಗೆ ಟಿಕೆಟ್ ನೀಡಿತು. ಸುದ್ದಿ ತಿಳಿಯುತ್ತಲೆ ಚಿಮ್ಮನಕಟ್ಟಿ, ಜಿಲ್ಲೆಯ ಬೇರೆಬೇರೆ ನಾಯಕರಿಗೆ ಬೆದರಿಕೆ ಒಡ್ಡಿ 'ನನಗೆ ಟಿಕೆಟ್ ಸಿಗದಿದ್ದರೆ ಜಿಲ್ಲೆಯಲ್ಲಿರುವ ನನ್ನ ಕುರುಬ ಮತಗಳನ್ನು ಬಳಸಿಕೊಂಡು ನಿಮ್ಮೆಲ್ಲರನ್ನೂ ಸಾಲುಸಾಲು ಸೋಲಿಸಿಬಿಡ್ತೀನಿ' ಅಂತ ಅಂದದ್ದೇ ತಡ ಜೆ.ಟಿ. ಪಾಟೀಲ್ ಸೇರಿದಂತೆ ಹಲವರು ಬೆಂಗಳೂರಿಗೆ ಓಡಿ ಬಂದು ದೇವರಾಜ್ ಪಾಟೀಲನ ಟಿಕೆಟ್ ಕ್ಯಾನ್ಸಲ್ ಮಾಡಿ ಚಿಮ್ಮನಕಟ್ಟಿಗೆ ಬಿ ಫಾರ್ಮ್ ಕೊಡಿಸಿದ್ದರು. ಅಂದಹಾಗೆ, ಇವನ ಬಾದಾಮಿ ಶುಗರ್ಸ್‌ನ ಮೇಲೆ ಡಿಸಿಸಿ ಬ್ಯಾಂಕ್‌ನಲ್ಲಿದ್ದ ಸಾಲ ಮನ್ನಾ ಮಾಡಿಸಿಕೊಂಡಿದ್ದು ಕೂಡಾ ಇಂತದೇ ಬ್ಲಾಕ್‌ಮೇಲ್ ತಂತ್ರದಿಂದ.

2013ರ ಚುನಾವಣೆಯಲ್ಲೂ ಚಿಮ್ಮನಕಟ್ಟಿ ಗೆಲ್ಲುವ ಯಾವ ಸಾಧ್ಯತೆಯೂ ಇರಲಿಲ್ಲ, ಆದರೆ ಕಾಂಗ್ರೆಸ್ ಪಕ್ಷದತ್ತ ಇದ್ದ ಸಾಮೂಹಿಕ ಅಲೆ, ಬಿಜೆಪಿಗಳ ಭ್ರಷ್ಟಾಚಾರದ ಜೊತೆಗೆ ಹಿಂದಿನ ಶಾಸಕ ಎಂ.ಕೆ. ಪಟ್ಟಣಶೆಟ್ಟಿ ಬಿಜೆಪಿಯಿಂದ ಹಾಗು ಅವನ ಸಂಬಂಧಿ ಮಹಾಂತೇಶ್ ಮಮದಾಪೂರ್ ಜೆಡಿಎಸ್‌ನಿಂದ ಸ್ಪರ್ಧಿಸಿದ್ದರಿಂದಾಗಿ ಲಿಂಗಾಯತ ಮತಗಳು ಹಂಚಿ ಹೋಗಿದ್ದು ಕೂಡಾ ಚಿಮ್ಮನಕಟ್ಟಿ ಗೆಲುವಿಗೆ ವರದಾನವಾಗಿ ಪರಿಣಮಿಸಿದ್ದವು. ಅಲ್ಲದೇ ಸತತ ಸೋಲಿನಿಂದ ಮಾನಸಿಕ ರೋಗಿಯಂತಾಗಿದ್ದ ಚಿಮ್ಮನಕಟ್ಟಿ ಈ ಸಲವೂ ಸೋತರೆ ಸಾಯೋದು ಗ್ಯಾರಂಟಿ, ಆ ಸಾವಿನ ಪಾಪ ನಮಗ್ಯಾಕೆ ಅಂತ ಕುರುಬ ಸಮುದಾಯ ಖಾಲಿಡ್ನಾಗಿ ಚಿಮ್ಮನಕಟ್ಟಿಗೆ ಓಟಾಕಿತ್ತು, ಯಾಕೆಂದರೆ, ನಿಮ್ಮ ಒಂದು ಮತ ಒಂದು ಜೀವವನ್ನೇ ಬದುಕಿಸುತ್ತೆ ಅಂತಲೇ ಪ್ರಚಾರ ಮಾಡಲಾಗಿತ್ತು.

■ **ಮೇಘರಾಜ್**

3 ◀◀ ನಿಜ ಜೀವನದ...

...ಧಿಕಾರಿಯೊಬ್ಬ ಸತ್ಯ ಮತ್ತು ಕಾನೂನಿಗೆಬದ್ಧರಾಗಿ ...ಸ ಮಾಡಬೇಕಿದ್ದರಿಂದ ನಾನು ಕರ್ಕರೆ ಅವರಿಗೆ ...ವು ನಿಮ್ಮ ಪೊಲೀಸ್ ಧರ್ಮವನ್ನು ಪಾಲಿಸಿರಿ. ...ಕಿದ್ದರೆ ನಾನೇ ಅಡ್ವಾನಿ ಅವರ ಜೊತೆ ಮಾತನಾಡಿ ...ವನ್ನು ಅವರ ಅರಿವಿಗೆ ತರುತ್ತೇನೆ' ಎಂದಿದ್ದೆ. ...ರದೃಷ್ಟವಶಾತ್ ಮರುದಿನವೇ ಕರ್ಕರೆ ಅವರು ...ತರಾದರು. ಆದರೆ ಅದಕ್ಕೂ ಮುನ್ನ ಕರ್ಕರೆ ಅವರು ... ಪ್ರಕರಣ ಕುರಿತು ನ್ಯಾಯಾಲಯದ ಮುಂದೆ ...ಟಿಎಸ್ ಪರವಾಗಿ ವಾದ ಮಂಡಿಸಲು ರೋಹಿಣಿ ...ಲಿಯಾನ್ ಅವರನ್ನು ಕೋರಿದ್ದರು. ಅದಕ್ಕೆ ಕಾರಣ ...ೋಹಿಣಿ ಯಾವ ಕಾರಣಕ್ಕೂ ಹಣ ಅಥವಾ ಇತರೆ ...ಸದ ಆಮಿಷಗಳಿಗೆ ತುತ್ತಾಗುವವರಲ್ಲ ಎಂದು ...ರ್ಕರೆ ಅವರಿಗೆ ಗೊತ್ತಿದ್ದದ್ದು."

... ಕರ್ಕರೆ ಅವರು 2006ರಲ್ಲಿ ರೋಹಿಣಿ ಅವರಿಗೆ ...ೋನ್ ಮಾಡುವ ಸ್ವಲ್ಪ ದಿನಗಳ ಹಿಂದೆಯೇ ಆಕೆ ...ಕ್ ಪ್ರಾಸಿಕ್ಯೂಟರ್ ಹುದ್ದೆಗೆ ರಾಜೀನಾಮೆ ...ದ್ದರು. ಆ ಹುದ್ದೆಯಲ್ಲಿ ಅವರು ಏಳು ವರ್ಷಗಳ ... ದುಡಿದಿದ್ದರಿಂದ ಸುಸ್ತಾಗಿ ಅವರು ಇನ್ನು ...ಂದೆ ಪ್ರತ್ಯೇಕವಾಗಿ ವಕೀಲಿಕೆ ಮಾಡಲು ...ಮಾನಿಸಿದ್ದರು. ರೋಹಿಣಿ ಅವರು ಒಂದು ...ದರ್ಶನದಲ್ಲಿ ಹೀಗೆ ಹೇಳಿದ್ದಾರೆ: "ಕರ್ಕರೆ ಅವರು ...ನಗೆ ಫೋನ್ ಮಾಡಿದಾಗ ನಾನು 'ಈಗತಾನೆ ಆ ...ದ್ದೆಗೆ ರಾಜೀನಾಮೆ ನೀಡಿದ್ದೇನೆ. ನನಗೆ ...ಸುಸ್ತಾಗಿದೆ' ಎಂದೆ. ಆಗ ಅವರು 'ಇಲ್ಲ ಮೇಡಂ, ...ಸ್ಟ್ ಈ ಕೇಸಿನ ದಾಖಲೆಗಳನ್ನು ಓದಿ' ಅಂದರು. ಅವರು ಹಾಗೆ ಹೇಳಿದಾಗ ಅವರ ದನಿ ನಡುಗುತ್ತಿತ್ತು ಮತ್ತು ಅವರು ಡಿಸ್ಟರ್ಬ್ ಆಗಿದ್ದರು. ಆ ಕೇಸಿನಲ್ಲಿ ಎಲ್ಲಾ ಆರೋಪಿಗಳು ಹಿಂದೂಗಳಾಗಿದ್ದರು ಎಂಬುದು ನನ್ನಲ್ಲಿ ಅಚ್ಚರಿ ಮೂಡಿಸಿತು. ಬೆಳಗ್ಗೆಯಿಂದ ಸಂಜೆಯವರೆಗೆ ಎಲ್ಲಾ ದಾಖಲೆಗಳನ್ನು ಓದಿದೆ, ನನಗೆ ಶಾಕ್ ಆಯಿತು. ನಾನು ಮಾನಸಿಕವಾಗಿ ಅದೆಷ್ಟು ಅಪ್‌ಸೆಟ್ ಆದೆನೆಂದರೆ ನಾನು ಅಳಲು ಶುರುಮಾಡಿದೆ. ಆಮೇಲೆ ಸಂಜೌತಾ ಮತ್ತು ಮೊಡಾಸಾ ಬಾಂಬ್ ಸ್ಫೋಟಗಳ ಹಿಂದೆಯೂ ಇಂಥವರೇ ಇದ್ದಾರೆಂಬುದೂ ನನ್ನ ಗಮನಕ್ಕೆ ಬಂತು. ಅಷ್ಟೇ ಅಲ್ಲ, ಅವರಿಗೆ ನಮ್ಮ ಭಾರತದ ಸಂವಿಧಾನದಲ್ಲಿ ನಂಬಿಕೆ ಇಲ್ಲ, ಅವರ ಉದ್ದೇಶ ಹಿಂದೂ ರಾಷ್ಟ್ರವನ್ನು ಸ್ಥಾಪಿಸುವುದು. ಆ ನಿಟ್ಟಿನಲ್ಲಿ ಅವರು ತಮ್ಮದೇ ಸಂವಿಧಾನವನ್ನು ರಚಿಸಿಕೊಂಡಿದ್ದಾರೆ. ಅವರದೇ ಧ್ವಜವನ್ನೂ ಇಟ್ಟುಕೊಂಡಿದ್ದಾರೆ. ಅವರ ಭಾರತ ಮಾತೆ ಕೂಡ ಅಸ್ತ್ರವನ್ನು ಹಿಡಿದಿದ್ದಾಳೆ. ನಾನು ಯಾವ ಪಕ್ಷವನ್ನಾಗಲಿ, ರಾಜಕಾರಣಿಯನ್ನಾಗಲಿ ಬೆಂಬಲಿಸುವುದಿಲ್ಲ, ನಾನು ಪಕ್ಕಾ ಹಿಂದೂ. ಹಿಂದೂ ಅಂದರೆ ಅರ್ಥವೇನು? ಹಿಂದೂ ಅಂದರೆ ಪ್ರಾಮಾಣಿಕರಾಗಿರಬೇಕು, ಯಾರದ್ದೇ ವಿರುದ್ಧ ಪೂರ್ವಾಗ್ರಹಗಳನ್ನು ಹೊಂದಿರಬಾರದು. ಹಿಂದೂ ಒಬ್ಬ ಅಪರಾಧವನ್ನೆಸಗಿದ್ದರೆ ಆತ ಅಪರಾಧಿ ಎಂಬುದು ಮುಖ್ಯವೇ ಹೊರತು ಆತ ಹಿಂದೂ ಎಂಬುದಲ್ಲ."

ಸಹಜವಾಗಿಯೇ ಕರ್ಕರೆ ಅವರ ಸಾವು ರೋಹಿಣಿ ಸೇರಿದಂತೆ ತನಿಖೆ ನಡೆಸುತ್ತಿದ್ದ ಎಲ್ಲರ ಮೇಲೆ ಪ್ರಭಾವ ಬೀರಿ ಎಲ್ಲರೂ ದುಃಖಿತರಾದರು. ಅದು ಬಹಳ ದಿನ ಮುಂದುವರೆದಾಗ ಕೋಪಗೊಂಡ ರೋಹಿಣಿ ಅವರು ಎಟಿಎಸ್ ಕಚೇರಿಗೆ ಹೋಗಿ ಕಿಂಡಕಾರಿದರು. ಅವರೇ ಹೇಳಿರುವಂತೆ "ಪೊಲೀಸರ ಮುಂದೆ ನಾನು ಚೀರಾಡಲಾರಂಭಿಸಿದೆ. 'ನಾವೆಲ್ಲ ಯಾಕೆ ಹೀಗೆ ಸುಮ್ಮನೆ ಕೂತಿದ್ದೇವೆ? ಕರ್ಕರೆ ಅವರ ಆತ್ಮಕ್ಕಾದರೂ ಶಾಂತಿ ಸಿಗುವಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ. ಬನ್ನಿ ಅವರು ಶುರುಮಾಡಿದ್ದ ಕೆಲಸವನ್ನು ಮುಂದುವರಿಸೋಣ' ಎಂದೆ. ನಾವು ಹಾಕುವ ಚಾರ್ಜ್‌ಶೀಟಿನಲ್ಲಿ ಒಂದು ಹಣಿ ಅಸತ್ಯವೂ ಇರಕೂಡದು, ಒಂದು ಹನಿ ಸತ್ಯವೂ ಬಿಟ್ಟುಹೋಗಬಾರದು ಎಂದು ಹೇಳಿದೆ."

ಇಂತಹ ರೋಹಿಣಿ ಸಾಲಿಯಾನ್ ಅವರು ಮಾಲೆಗಾಂವ್ ಪ್ರಕರಣಕ್ಕೆ ಸಂಬಂಧಪಟ್ಟಂತೆ ತಮ್ಮ ಕರ್ತವ್ಯವನ್ನು 2006ರಿಂದ ನಿಷ್ಠೆಯಿಂದ ಪಾಲಿಸುತ್ತಾ ಬಂದಿದ್ದರು. ಎಟಿಎಸ್‌ಅನ್ನು ಆನಂತರ ನ್ಯಾಷನಲ್ ಇನ್‌ವೆಸ್ಟಿಗೇಶನ್ ಏಜೆನ್ಸಿ ಎಂದು ಪರಿವರ್ತಿಸಿದ ನಂತರವೂ ಅವರನ್ನೇ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ಮುಂದುವರಿಸಲಾಗಿತ್ತು, ಪ್ರಜ್ಞಾ ಸಿಂಗ್‌ಗೆ ಜಾಮೀನು ಸಿಗದಂತೆಯೂ ರೋಹಿಣಿ ನೋಡಿಕೊಂಡಿದ್ದರು. ಆದರೆ ಹೋದವರ್ಷ ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದದ್ದೇ ತಡ ರೋಹಿಣಿ ಅವರ ವಿಕೆಟ್ ತಪ್ಪಿಸುವ ಕಾರ್ಯತಂತ್ರ ಪ್ರಾರಂಭವಾಯಿತು.

ಕಳೆದ ವರ್ಷ ಕೇಂದ್ರದ ಎನ್‌ಐಎ ಅಧಿಕಾರಿಯೊಬ್ಬ ರೋಹಿಣಿ ಅವರಿಗೆ ಫೋನ್ ಮಾಡಿ ಭೇಟಿ ಆಗಬೇಕೆಂದು ಕೋರಿದ. ಆತನನ್ನು ಭೇಟಿ ಆದಾಗ 'ಈ ಕೇಸಿನಲ್ಲಿ ಸ್ವಲ್ಪ ಮೆದುವಾಗಿರು' ಎಂಬ ಸೂಚನೆ ಕೊಟ್ಟ. ಆಗ ರೋಹಿಣಿ ಅವರು 'ನಾನು ಯಾವತ್ತೂ ಕಾನೂನಿಗೆ ಬದ್ಧಳಾಗಿರುವವಳು' ಎಂದು ಉತ್ತರಿಸಿದರು. ರೋಹಿಣಿ ಅವರನ್ನು ಸುಲಭವಾಗಿ ಪಳಗಿಸಲಾಗುವುದಿಲ್ಲ ಎಂದು ಅರ್ಥಮಾಡಿಕೊಂಡ ಕೇಂದ್ರ ಸರ್ಕಾರ ಆನಂತರ ಇದೇ ಕೇಸಿನಲ್ಲಿ ಹಿರಿಯ ವಕೀಲರಾಗಿದ್ದ ಮರಿಯಾರ್ ಪುಟ್ಟಂ ಎಂಬುವವರಿಗೆ ನ್ಯಾಯಾಲಯದಲ್ಲೇ "ಇನ್ನು ಮುಂದೆ ನೀವು ವಾದಿಸುವುದು ಬೇಡ" ಎಂದು ಹೇಳುವ ಮೂಲಕ ಅವಮಾನ ಮಾಡಲಾಗಿತ್ತು, ಆಗಲೇ ಈ ಕೇಸ್ ಅನ್ನು ಹಳ್ಳ ಹಿಡಿಸಲು ಸರ್ಕಾರ ನಿರ್ಧರಿಸಿರುವುದು ರೋಹಿಣಿ ಅವರ ಗಮನಕ್ಕೆ ಬಂದಿತ್ತು, ಅದು ಕಳೆದ ತಿಂಗಳು ನಿಜವಾಯಿತು. ಕೇಂದ್ರದ ಅದೇ ಅಧಿಕಾರಿ ರೋಹಿಣಿ ಅವರನ್ನು ಸಂಪರ್ಕಿಸಿ "ಇನ್ನು ಮುಂದೆ ನೀವು ವಾದಿಸುವುದು ಬೇಡ" ಎಂದ. ಆಗ ರೋಹಿಣಿ "ಇದನ್ನು ನಾನು ನಿರೀಕ್ಷಿಸಿದ್ದೆ, ಈಗ ನನ್ನನ್ನು ಈ ಕೇಸಿನಿಂದ ಕೈಬಿಟ್ಟಿರುವುದಾಗಿ ಅಧಿಕೃತ ಆದೇಶವನ್ನು ಹೊರಡಿಸುವ ಮೂಲಕ ನನಗೆ ಬಿಡುಗಡೆ ಕೊಡಿ. ಯಾಕೆಂದರೆ ಸತ್ಯವನ್ನು ನಾನು ಹೇಳಬೇಕಿದೆ" ಎಂದು ಪ್ರತಿಕ್ರಿಯಿಸಿದರಲ್ಲದೆ, ಸುಮಾರು ನೂರು ಅಮಾಯಕ ಜನರ ಸಾವಿಗೆ ಕಾರಣರಾಗಿದ್ದ ಕೇಸರಿ ಭಯೋತ್ಪಾದಕರು ಶಿಕ್ಷೆಯಿಂದ ಬಚಾವ್ ಆಗುವಂತೆ ನೋಡಿಕೊಳ್ಳಲಾಗುತ್ತಿದೆ ಎಂದೂ ಹೇಳಿದ್ದಾರೆ.

ಭಯೋತ್ಪಾದಕರು ಮತ್ತು ಭ್ರಷ್ಟರು ಯಾವ ಧರ್ಮದ ಪ್ರತಿಪಾದಕರೂ ಅಲ್ಲ, ಬದಲಾಗಿ ಅವರೆಲ್ಲ ರಕ್ತಪಿಪಾಸುಗಳು ಮತ್ತು ದೇಶದ್ರೋಹಿಗಳು ಅಷ್ಟೇ. ಆದ್ದರಿಂದ ಅಂತಹವರಿಗೆ - ಅವರು ಯಾವುದೇ ಧರ್ಮದವರಾಗಿದ್ದರೂ - ರಕ್ಷಣೆ ಕೊಡುವುದು ಅಘಾತಕಾರಿ ಬೆಳವಣಿಗೆಯಾಗುತ್ತದೆ. ಅದನ್ನು ನಿಜ ಜೀವನದ ಆನಂದ್ ರೈ ಮತ್ತು ರೋಹಿಣಿ ಸಾಲಿಯಾನ್ ಅವರು ಎತ್ತಿತೋರಿದ್ದಾರೆ. ಅವರಿಬ್ಬರಿಗೂ ಸಲಾಮ್! ■

ಮಂತ್ರಿ ಶ್ರೀನಿವಾಸ್ ಪ್ರಸಾದ್‌ಗಿದು ಬೇಕಿತ್ತಾ?

ಮಣಿಪಾಲ ಪೈ ಮಾಮಾಗಳ ಲ್ಯಾಂಡ್ ಲೂಟ್ ಮಾರ್!!


ಶ್ರೀನಿವಾಸ್ ಪ್ರಸಾದ್- ಮಂತ್ರಿ

ಅಂತಾರಾಷ್ಟ್ರೀಯ ಶಿಕ್ಷಣ ಮಾರುಕಟ್ಟೆಯಲ್ಲಿ ಕುಳಿತು ಭರ್ಜರಿ ಬಿಸ್ನೆಸ್ ಮಾಡುತ್ತಿರುವ ಮಣಿಪಾಲದ ಪೈ ಮಾಮಾಗಳ ಭಾನ್ಗಡಿ ಬಂಡವಾಳ ಆಗಾಗ ಬಯಲಿಗೆ ಬೀಳುತ್ತಲೇ ಇರುತ್ತದೆ! ಆದರೆ ಕಾನೂನು-ಕಟ್ಟಳೆ, ಆಳುವವರು-ಅಧಿಕಾರಿಗಳನ್ನೆಲ್ಲ ಪಳಗಿಸಿ ಅಕ್ರಮ-ಸಕ್ರಮ ಮಾಡಿಕೊಳ್ಳುವ ಮಸಲತ್ತಿನಲ್ಲಿ ಪ್ರವೀಣರಾದ ಪೈಗಳು ಪಾತಕ ನಿರಾತಂಕ, ನಿರಂತರವಾಗಿ ಮುಂದುವರಿಸಿದ್ದಾರೆ. ವಸಾಹತುಶಾಹಿ ರಣ ಹಸಿವಿನ ಪೈ ಸಾಮ್ರಾಜ್ಯ ನಿಂತಿರುವುದೇ ಧಗಾ-ದಗಲುಬಾಜಿ ಧೋರಣೆ ಮೇಲೆ!

ಉಡುಪಿಯಿಂದ ಕೂಗಳತೆ ದೂರದಲ್ಲಿರುವ ಮಣಿಪಾಲದ ಪೈ ರಿಪಬ್ಲಿಕ್‌ನಲ್ಲಿ, ಈ ನೆಲದ ನೀತಿ-ನಿಯಮ, ರೀತಿ-ರಿವಾಜಿಗೆ ಕವಡೆ ಕಿಮ್ಮತ್ತೂ ಇಲ್ಲ. ಪೈಗಳ ಲಾಭಕೋರ ಹಿತಾಸಕ್ತಿಗೆ ತಕ್ಕಂತೆ ಮಣಿಪಾಲದ ಸಕಲ ಸರ್ಕಾರಿ ಆಗು-ಹೋಗು ಆಗಲೇಬೇಕು. ಪೈಗಳ ಡೀಮ್ಡ್ ಯೂನಿವರ್ಸಿಟಿ 'ಮಾಹೆ'- ಅಂದರೆ ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್- ಕ್ಯಾಂಪಸ್ಸಿನಲ್ಲಿ ನೈತಿಕತೆಯೂ ಅಷ್ಟಕ್ಕಷ್ಟೇ. ಶೃಂಗಾರ, ಕಾಮ, ಕ್ರೋಧ, ಮದ, ಮಾತ್ಸರ್ಯ... ಇಲ್ಲಿ ಖುಲ್ಲಮ್ ಖುಲ್ಲಾ.

ಲ್ಯಾಂಡ್ ಲಫಡಾ

ನಿಮಗೆ ಗೊತ್ತಿರಲಿ, ಪೈ ಮಾಮಾಗಳ ವಾರ್ಷಿಕ ಶೈಕ್ಷಣಿಕ ವ್ಯಾಪಾರ ವಹಿವಾಟು ಸಾವಿರಾರು ಕೋಟಿ! ಆದರೂ ಸರ್ಕಾರದ ಬೊಕ್ಕಸಕ್ಕೆ ಕನ್ನ ಹಾಕುವುದು, ಸರ್ಕಾರಿ ನೆಲ ಕದಿಯುವುದು, ತೆರಿಗೆ ವಂಚಿಸುವುದು, ಸರ್ಕಾರಿ ಸೌಲತ್ತು-ಸೌಕರ್ಯ ಲಪಟಾಯಿಸುವುದು ರೋಗದಂತೆ ಪೈ ಫ್ಯಾಮಿಲಿಗೆ ಅಂಟಿಕೊಂಡು ಬಿಟ್ಟಿದೆ. ಮಣ್ಣ ಪಳ್ಳ, ಹೆರ್ಗ ಸುತ್ತಲಿನ ಗ್ರಾಮಗಳ ಬಹುತೇಕ ಸರ್ಕಾರಿ ಜಾಗವೆಲ್ಲವೂ ಪೈಗಳ ಕಬ್ಜಾದಲ್ಲಿದೆ. ಎಲ್ಲೆಲ್ಲಿ ಬೇಲಿ ಸುತ್ತಿ, ಎಂತೆಂಥ ಅಕ್ರಮ ಕಟ್ಟಡ ಕಟ್ಟಿದ್ದಾರೋ ಪೈ ಸಾಮ್ರಾಜ್ಯದ ಆಡಳಿತಗಾರರಿಗೇ ಗೊತ್ತಿಲ್ಲ! ಸರ್ಕಾರಿ ಜಮೀನೆಂದರೆ ಪೈಗಳಿಗೆ ಮಾವನ ಮನೆಯಿಂದ ಬಂದ ಬಳುವಳಿಯಂತೆ!

ಪೈ ರಿಪಬ್ಲಿಕ್‌ನ ಹೆಚ್ಚಿನ ಕಟ್ಟಡಗಳಿಗೆ ಸ್ಥಳೀಯಾಡಳಿತದ ನಿರಾಕ್ಷೇಪಣಾ ಪತ್ರ, ಸರ್ಕಾರದ ಪರವಾನಗಿಗಳೇ ಇಲ್ಲ! ಸರ್ಕಾರವೇ ಮಂಜೂರಿ ಮಾಡಿದ ಜಾಗಕ್ಕೂ ಮಾರುಕಟ್ಟೆ ದರ ಇವರು ಕಟ್ಟುವುದಿಲ್ಲ, ಹಾಗಂತ ಜಮೀನಿನ ಹಕ್ಕುಪತ್ರ ಮಾತ್ರ ಮರೆಯದೇ ಮಾಡಿಸಿಕೊಳ್ಳುತ್ತಾರೆ. ಪೈಗಳು ರಾತ್ರೋರಾತ್ರಿ ಎಬ್ಬಿಸಿರುವ ಹಲವು ಬೃಹತ್ ಬಿಲ್ಡಿಂಗ್‌ಗಳ ಕಂದಾಯ ಸ್ಥಳೀಯಾಡಳಿತಕ್ಕೆ ಇವತ್ತಿಗೂ ತುಂಬಿಲ್ಲ. ನರ್ಸರಿಯಿಂದ ಮೆಡಿಕಲ್, ಇಂಜಿನಿಯರಿಂಗ್ ಕಾಲೇಜುಗಳವರೆಗೆ, ಅಲ್ಲಿಂದ ವಿವಿಧ ಔದ್ಯೋಗಿಕ ತರಬೇತಿ ತನಕದ ಎಲ್ಲ ರೀತಿಯ ಶಿಕ್ಷಣ ವ್ಯಾಪಾರ ಮಾಡುತ್ತಿರುವ ಪೈಗಳ ಒಂದೇ ಒಂದು ಕಟ್ಟಡವೂ ಅಧಿಕೃತವಲ್ಲ; ಅಸಲಿಗೆ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಆಸ್ಪತ್ರೆ ಕಟ್ಟಡವೇ


ಎನ್‌ಆರ್‌ಐ ಹಾಸ್ಟೆಲ್

ಕಾನೂನುಬಾಹಿರ. ಹಾಗಂತ ಸಿಎಂ ಆಗಿದ್ದ ಎಸ್ಸೆಂ ಕೃಷ್ಣರೇ ಒಮ್ಮೆ ಸದನದಲ್ಲೇ ಹೇಳಿದ್ದರೆಂದು ಅಂದು ಶಾಸಕರಾಗಿದ್ದ ಹಿರಿಯರು ನೆನಪಿಸಿಕೊಳ್ಳುತ್ತಾರೆ!!

ವ್ಯಾಲಿವ್ಯೂವ್ ಹೋಟೇಲ್


ಮಣಿಪಾಲ್ ಪೈ ರಿಪಬ್ಲಿಕ್‌ನಲ್ಲಿ ಮೂರ್‍ನಾಲ್ಕು ದಂಧೆಯ ಕವಲುಗಳಿವೆ. ದೋಖಾ ವ್ಯವಹಾರದಲ್ಲಿ ಒಬ್ಬರಿಗಿಂತ ಇನ್ನೊಬ್ಬ ಮೇಲು! ಖೋಟಾ ಪದ್ಮಭೂಷಣ ರಾಮದಾಸ್ ಪೈ ವಂಶಸ್ಥರದು ಶೈಕ್ಷಣಿಕ ವಹಿವಾಟಾದರೆ, ಸತೀಶ್ ಪೈ-ಸಂಧ್ಯಾ ಪೈ-ಗೌತಮ್ ಪೈ ವಂಶವೃಕ್ಷದ್ದು 'ಉದಯವಾಣಿ', 'ತರಂಗ'ದ ಹೆಸರಿನ ಮಾಧ್ಯಮ ದಂಧೆ. ಅತ್ತ ಅಶೋಕ್ ಪೈ ಎಂಬಾತ ಹೋಟೇಲು, ಮುದ್ರಣ



ವ್ಯವಹಾರದ ದೊರೆ. ಎಲ್ಲರಿಗೂ ಭೂದಾಹ ವಿಪರೀತ. ಮಹಾರಾಷ್ಟ್ರ ಅಪೆಕ್ಸ್ ಬ್ಯಾಂಕ್ ನುಂಗಿನೊಣೆದ ಪೈಗಳ ಬ್ಯಾಂಕಿಂಗ್ ಬಿಸ್ನೆಸ್ ಕತೆಯೇ ಪ್ರತ್ಯೇಕ ಧಾರಾವಾಹಿ ಆಗುವಷ್ಟು!

ಶಿಕ್ಷಣ ಉದ್ದೇಶಕ್ಕೆಂದು ಸರ್ಕಾರಿ ಜಾಗ ಅತಿಕ್ರಮಣ ಮಾಡಿರುವ, ಇನ್ನೊಂದಿಷ್ಟನ್ನು ಮಂಜೂರಿ ಮಾಡಿಕೊಂಡಿರುವ ಪೈಗಳು ಲ್ಯಾಂಡ್ ಗ್ರ್ಯಾಂಟ್ ಉದ್ದೇಶ ಉಲ್ಲಂಘಿಸಿ ವಾಣಿಜ್ಯ ವ್ಯಾಪಾರಕ್ಕೆ ಬಳಸಿಕೊಂಡಿದ್ದಾರೆ. ಪಿಪಿಡಿಆರ್ ಅಂದರೆ ಪಬ್ಲಿಕ್ ಪರ್ಪಸ್ ದರ್ಕಾಸ್ ರಿಜಿಸ್ಟರ್ ನಿಯಮದಂತೆ ಸರ್ಕಾರ ಭೂ ಮಂಜೂರಿ ಮಾಡಿದಾಗ ಆದರಲ್ಲಿ ವಾಣಿಜ್ಯ ಚಟುವಟಿಕೆ ನಡೆಸುವಂತೆಯೇ ಇಲ್ಲ. ಮಣಿಪಾಲ ಪೈ ಗ್ರೂಪಿನ ಮುದ್ರಣ ಮಹಾರಾಜ ಅಶೋಕ್ ಪೈ ಶಿವಳ್ಳಿ ಗ್ರಾಮದ ಸರ್ವೆ ನಂಬರ್ 419ರಲ್ಲಿ ಬಹುಮಹಡಿ ಹೋಟೇಲ್ ಕಟ್ಟಿದ್ದಾನೆ. ವ್ಯಾಲಿವ್ಯೂಲ್ ಇಂಟರ್‌ನ್ಯಾಷನಲ್ ಎಂಬ ಕುಖ್ಯಾತ ನಾಮಧೇಯದ ಈ ಹೋಟೇಲನ್ನು 'ಫಾರ್ಚೂನ್' ಗ್ರೂಪಿನವರು ನಡೆಸುತ್ತಿದ್ದಾರೆ. ಇದು ನಗರಸಭೆಯ ಪರವಾನಗಿ ಇಲ್ಲದ ಪಕ್ಕಾ ಅಕ್ರಮ ಕಟ್ಟಡ.

ಈ ಹೋಟೇಲಿನ ಬಳಿಯೇ ಕೆಎಂಸಿಯಿದೆ. ಇನ್ನೊಂದು ಕಡೆ ದೇವಸ್ಥಾನ ಒಂದಿದೆ. ಇವುಗಳ ಅಂತರ ಇನ್ನೂರು ಮೀಟರೂ ಇರಲಿಕ್ಕಿಲ್ಲ. ಹಾಗೆಯೇ ಮಣ್ಣಪಳ್ಳ ಕೆರೆಯ ಬಳಿ ಪೈಗಳಿಗೆ 5 ಎಕರೆ ಮಂಜೂರಾಗಿತ್ತು. ಆದರೆ ಪೈ


ಡಾ. ಎಚ್.ಎಸ್. ಬಲ್ಲಾಳ್

ಧಣಿಗಳು ಕಬ್ಜಾ ಮಾಡಿಕೊಂಡಿದ್ದು 10 ಎಕರೆಗೂ ಹೆಚ್ಚು. ಈ ಮಣ್ಣಪಳ್ಳ ಕೆರೆಯ ಬಳಿಯೇ ಪ್ಲಾನಿಟೋರಿಯಂ ಮಾಡಿರುವ ಪೈಗಳು ಹಣ ದೋಚುತ್ತಿದ್ದಾರೆ. ಮಾಹೆ ಮತ್ತು ಮಣಿಪಾಲ್ ಅಕಾಡಮಿ ಆಫ್ ಜನರಲ್ ಎಜುಕೇಷನ್‌ನ ಪೈಗಳು ಕೇಳಿಕೇಳಿದಾಗೆಲ್ಲ ಸರ್ಕಾರ ನಡೆಸುವವರು ಕಣ್ಣುಮುಚ್ಚಿ ಮಂಜೂರಿ ಮಾಡಿದ್ದಾರೆ. ಇದೆಲ್ಲದಕ್ಕೆ ಸ್ಥಳೀಯಾಡಳಿತದ ಅನುಮತಿಯೇ ಇಲ್ಲ.

ಯಾವ ಕಾನೂನಿನ ಕೇರ್ ಇಲ್ಲದೆ ಕಂಡಕಂಡಲ್ಲಿ ಐಷಾರಾಮಿ ಬಂಗಲೆ ಎಬ್ಬಿಸಲಾಗಿದೆ. ಪೈಗಳ ಗ್ರೀನ್‌ಪಾರ್ಕ್ ಹೋಟೇಲ್‌ಗಂತೂ ಯಾವ ಸರ್ಕಾರಿ ಏಜೆನ್ಸಿಯ ನಿರಾಕ್ಷೇಪಣಾ ಪತ್ರ ಎಂಬುದೇ ಇಲ್ಲ. ಪೈಗಳ ಸಾಮ್ರಾಜ್ಯದಲ್ಲಿನ ಭೂ ವಹಿವಾಟು, ಕಟ್ಟಡ ಕಟ್ಟೋಣಗಳೆಲ್ಲ 1964/66ರ ಭೂಕಂದಾಯ ಅಧಿನಿಯಮ ಮತ್ತು 1995/96ರ ಕಾನೂನಿನಂತೆ ಇಲ್ಲವೇ ಇಲ್ಲ. ಇದೆಲ್ಲ ಕಂಡೂಕಾಣದಂತೆ ಸ್ಥಳೀಯ ಮಂತ್ರಿ, ಸಂಸದ, ಶಾಸಕರು, ಸ್ಥಳೀಯಾಡಳಿತದವರು ದಿನ ಕಳೆಯುವುದು ಲಾಗಾಯ್ತಿನ



ನಿಯಮ. ಸರ್ವಶಕ್ತ ಪೈ ಫ್ಯಾಮಿಲಿ ಕೆಂಗಣ್ಣಿಗೆ ತುತ್ತಾಗಿ ಒದ್ದಾಡೋದು ಯಾರಿಗೆ ಬೇಕಾಗಿದೆ?

ಎನ್‌ಆರ್‌ಐ ಹಾಸ್ಟೆಲ್ ಎಡವಟ್ಟು

1950ರಿಂದ ಮಣಿಪಾಲದ ದೊರೆಗಳಾದ ಪೈಗಳು ಸ್ವಾಧೀನ ಪಡಿಸಿಕೊಂಡಿರುವ ಒಟ್ಟು ಜಾಗ ಬರೋಬ್ಬರಿ 269 ಎಕರೆ! ಇದರಲ್ಲಿ 52 ಎಕರೆ ಸರ್ಕಾರ ಅಧಿಕೃತವಾಗೇ ಮಂಜೂರಿ ಮಾಡಿರುವಂಥದ್ದು. 102 ಎಕರೆ ಸುಪ್ರೀಂಕೋರ್ಟಿನಲ್ಲಿ ದಾವೆ ಹಾಕಿ ಪೈ ಪಟಾಲಂ ವಶಕ್ಕೆ ಪಡೆದಿದೆ. ಇನ್ನುಳಿದ 109 ಎಕರೆಯಲ್ಲಿ ಕಾನೂನನ್ನು ಬುದ್ಧಿಪೂರ್ವಕವಾಗೇ ಧಿಕ್ಕರಿಸಿ ಬೇಕಾಬಿಟ್ಟಿಯಾಗಿ ಪೈಗಳು ಕಟ್ಟಡಗಳನ್ನೆಬ್ಬಿಸಿ ಬಿಸ್ನೆಸ್ ಮಾಡಿಕೊಂಡಿದ್ದಾರೆ. ಇಲ್ಲೇ ಮಾಹೆಯ ಮಹಾಮಹಿಮರು ಏಳಂತಸ್ತಿನ ಎನ್‌ಆರ್‌ಐ ವಿದ್ಯಾರ್ಥಿಗಳಿಗೆಂದು ಹಾಸ್ಟೆಲ್ ಕಟ್ಟಿದೆ. ಈ ಬಿಲ್ಡಿಂಗೇ ಈಗ ಧನಾಕೋರ ಪೈಗಳಿಗೆ ಗಂಡಾಂತರಕಾರಿ ಆಗಿದೆ.

1968ರಲ್ಲಿ ಶಿವಳ್ಳಿ ಗ್ರಾಮದ 14.95 ಎಕರೆ ಪ್ರದೇಶವನ್ನು ಹಸಿರು ವಲಯವಾಗಿ ಗುರುತಿಸಲಾಗಿತ್ತು. ಅಂದಿನ ಕೆಎಂಸಿಗೆ ಈ ಜಾಗವನ್ನು ಆಟದ ಮೈದಾನ ಮತ್ತು ಈಜುಕೊಳ ನಿರ್ಮಾಣಕ್ಕೆಂದು ಸರ್ಕಾರ ಮಂಜೂರು ಮಾಡಿತ್ತು. ಇತ್ತೀಚಿನ ವರ್ಷದವರೆಗೂ ಅದು ಮಣಿಪಾಲದ ಪ್ರಮುಖ ಆಟದ ಮೈದಾನವಾಗಿತ್ತು; ಅದರ ಬಳಿಯೇ ಈಜುಕೊಳವೂ ಇತ್ತು. ಈಗಲ್ಲಿ ಏಳು ಅಂತಸ್ತಿನ ಕಟ್ಟಡ ಒಂದು ತಲೆಯೆತ್ತಿದೆ. ಇದಕ್ಕೆ ಪೈ ಮಾಮಾಗಳು ಕೊಟ್ಟಿರುವ ಹೆಸರು ಎನ್‌ಆರ್‌ಐ ಹಾಸ್ಟೆಲ್. ಹಸಿರು ವಲಯವನ್ನು ಬೇರೆ ಉದ್ದೇಶಕ್ಕೆ ಬಳಸುವಂತೆಯೇ ಇಲ್ಲ ಎಂಬ ಕಟ್ಟುನಿಟ್ಟಿನ ಕಾನೂನಿದೆ. ಆದರೆ ಮಣಿಪಾಲ ಪೈಗಳ ದುಡ್ಡಿನ ದರ್ಪದೆದುರು ಇದ್ಯಾವ ಲೆಕ್ಕ?

ತಿರುಗಿ ಬಿದ್ದ ಶಾಸಕ ಪ್ರಮೋದ್

ಮಣಿಪಾಲ ಪೈಗಳಿಗೆ ಕೋರ್ಟು-ಕಚೇರಿ ಎಂದರೆ ಕೇರ್ ಇಲ್ಲ; ಅಕ್ರಮಗಳನ್ನು ಎಲ್ಲಿ ಬೇಕಾದರೂ ಸಕ್ರಮ ಮಾಡಿಕೊಳ್ಳುವ ಜಾದೂಗಾರರು ಪೈಗಳು. ನ್ಯಾಯಾಲಯದಲ್ಲೇ 102 ಎಕರೆ ತಮ್ಮದೆಂದು ಕೇಸ್ ಗೆದ್ದಿರುವ ಪೈಗಳು ಯಾರನ್ನೂ ಬೇಕಿದ್ದರೂ ದಿಕ್ಕು ತಪ್ಪಿಸಿ ಗೆಲ್ಲಬಲ್ಲರು. ನ್ಯಾಯಪೀಠದಲ್ಲಿರುವವರ ಪೆದ್ದು ಕುಲೋದ್ಧಾರಕರಿಗೆ ಮಾಹೆಯಲ್ಲಿ ಪುಕ್ಕಟೆ ಅಥವಾ ರಿಯಾಯಿತಿ ದರದಲ್ಲಿ ಯಾವ ಸೀಟು ಬೇಕಾದರೂ ಸಿಗುತ್ತದೆ. ಇದು ಪೈಗಳ ಬಿಸ್ನೆಸ್ ಪಾಲಿಸಿ. ಇದೇ ಪೈಗಳು ಕೇಸು ಗೆಲ್ಲುವ ರಹಸ್ಯ ಎಂಬುದು ಕಾರ್ಪೊರೇಟ್ ವಲಯ ಹಾಗು ಸಾರ್ವಜನಿಕ ವಲಯದಲ್ಲಿರುವ ಅಭಿಪ್ರಾಯ.


ಬಹುಶಃ ಈ ಬಲದಿಂದಲೇ ಇರಬೇಕು, ಪೈಗಳು ಎನ್‌ಆರ್‌ಐ ಹಾಸ್ಟೆಲ್ ಏಕಪಕ್ಷೀಯವಾಗಿ ಕಟ್ಟಿ ನಿಲ್ಲಿಸಿದ್ದು. ಭೂ ಉಪಯೋಗದ ಬದಲಾವಣೆ ಮಾಡಿಸದೇ ಕಟ್ಟಡ ಎಬ್ಬಿಸಿದ್ದನ್ನು ಉಡುಪಿ ಶಾಸಕ ಪ್ರಮೋದ್ ಮಧ್ವರಾಜ್ ಹಿಂಚೂರು ಗಂಭೀರವಾಗಿ ಪರಿಗಣಿಸಿದರು. ಮೊದಲಿನಿಂದಲೂ 'ಮಾಹೆ' ಒಡೆಯರೆಂದರೆ ಮೂಗುಮುರಿಯುತ್ತಿದ್ದ ಪ್ರಮೋದ್ ನಗರಸಭೆಯಲ್ಲಿನ ತನ್ನ ಅನುಯಾಯಿ ಸದಸ್ಯರನ್ನು ಪೈ ಮಾಫಿಯಾದ ಅಕ್ರಮಗಳ


ಫಾರ್ಚೂನ್ ಇನ್ ವ್ಯಾಲಿವ್ಯೂವ್- ಮಣಿಪಾಲ್ ಹೋಟೇಲ್


ವಿನೋದ್ ಭಟ್




ಡಾ. ರಂಜನ್ ಪೈ



ಪೈ ಸಾಮ್ರಾಜ್ಯ ನಡುಗಿಸಿದ ಶೇಟ್!

ಮಣಿಪಾಲದ ಪೈ ರಿಪಬ್ಲಿಕ್ ರಗಳೆ-ರಾಬರಿ-ರಂಗೀಲಾ ಬಗ್ಗೆ ಮಾತಾಡಲಿಕ್ಕೆ ಎಂಟೆದೆ ಬೇಕು. ಜನಸಾಮಾನ್ಯರಿರಲಿ, ಜನಪ್ರತಿನಿಧಿಗಳು, ದೊಡ್ಡ-ದೊಡ್ಡ ಹುದ್ದೆಯ ಅಧಿಕಾರಿಗಳು, ಹೋರಾಟಗಾರರೆಲ್ಲ ಪೈ ಮಾಫಿಯಾದ ಉಸಾಬರಿಗೆ ಹೋಗುವುದೇ ಇಲ್ಲ. ಇಂಥ ಭಯಾನಕ ಪರಿಸ್ಥಿತಿಯಲ್ಲೂ ಯೋಗೀಶ್ ಶೇಟ್ ಎಂಬ ಮಾಹಿತಿ ಹಕ್ಕು ಕಾರ್ಯಕರ್ತ ಜೀವದ ಹಂಗು ತೊರೆದು ಪೈಗಳ ಪಂಚರಂಗಿ ಪ್ರಕರಣ ಒಂದೊಂದಾಗಿ ಬಯಲಿಗೆ ತರುತ್ತಿದ್ದಾರೆ.



"ಈಗ ರಾಮಾಯಣ ಮುಗಿಸಿದ್ದೇನೆ; ಪೈಗಳ ಮಹಾಭಾರತಕ್ಕೆ ಕೈಹಾಕುತ್ತೇನೆ ಸದ್ಯದಲ್ಲೇ...." ಎನ್ನುವ ಯೋಗೀಶ್ ಶೇಟ್‌ಗೆ ಎದುರಾಗುವ ಅಪಾಯದ ಅರಿವಿದೆ. ಪೈ ಮಾಫಿಯಾಕ್ಕೆ ಅಂಡರ್‌ವರ್ಲ್ಡ್ ಸಖ್ಯದ ಲ್ಯಾಂಡ್ ದಂಧೆದಾರರ ರಹಸ್ಯ ನಂಟಿರುವುದು ಬಹಿರಂಗ ಸತ್ಯ. ಉಜ್ವಲ ಡೆವಲಪರ್ಸ್‌ನ ಪುರುಷೋತ್ತಮ ಶೆಟ್ಟಿ ಪೈ ಸಾಮ್ರಾಜ್ಯಕ್ಕೆ ಬೇಕಾದ ಜಾಗದ ಡೀಲ್ ಕುದುರಿಸುವ ಕಿಂಗ್‌ಪಿನ್. ಲಿಟಿಗೇಷನ್ ಇದ್ದರೆ ಪೈ ಪರವಾಗಿ ಇತ್ಯರ್ಥಪಡಿಸುವ ಶೆಟ್ಟಿಗೆ ಅಂಡರ್‌ವರ್ಲ್ಡ್‌ನ ಡಾನ್‌ಗಳ ದೋಸ್ತಿಯಿದೆ. ಕೊರಗ ವಿಶ್ವನಾಥ ಶೆಟ್ಟಿ ಫಂಡ್ ಆಗುತ್ತಿದ್ದಂತೆಯೇ ಡಾನ್ ರವಿ ಪೂಜಾರಿ ಹೆಸರು ಹೇಳಲಾರಂಭಿಸಿದ್ದಾನೆ ಪುರುಷೋತ್ತಮ ಶೆಟ್ಟಿ. ಆರ್‌ಟಿಐ ಸೈನಿಕ ಶ್ರೇಟ್‌ಗೆ ಬೆದರಿಕೆಯ ಕರೆಗಳು ಬರುತ್ತಿರುವುದು ಪೈಗಳ "ಮಹಿಂಯ" ಜೊತೆ ಥಳಕು ಹಾಕಿಕೊಳ್ಳುತ್ತಿದೆ.

ಶೇಟ್ ಕರಾವಳಿಯ ಹಲವು ಹಗರಣ ಹೊರಹಾಕಿದ್ದಾರೆ. ಉಡುಪಿ ಜಿಲ್ಲೆಯ ಕೋಟಿ-ಕೋಟಿಗಳ ಕರ್ಮಕಾಂಡದ ದಾಖಲೆ ಶೇಟ್‌ರಲ್ಲಿದೆ. ಇದೇ ಕಾರಣಕ್ಕೆ ಆತನ ಜೀವವೂ ಗಂಡಾಂತರದಲ್ಲಿದೆ. ಪೈಗಳ ಬುಡಕ್ಕೆ ಕೈಹಾಕಿದಾಗ ಆತನಿಗೆ ಆಮಿಷ ಒಡ್ಡಲಾಗಿತ್ತು. ಅದಕ್ಕಾತ ಆಸೆ ಪಡಲಿಲ್ಲ. ಆಗ ಬಂತು ಬೆದರಿಕೆ. ಅದಕ್ಕೂ ಬಗ್ಗಲಿಲ್ಲ. ಕಂದಾಯ ಇಲಾಖೆಯ ನಿಯಮಕಾನೂನು ಬಲ್ಲ ಶೇಟ್ ಪೈಗಳ ಭೂಗಳ್ಳತನ, ತೆರಿಗೆ ವಂಚನೆ, ಪೈಗಳಿಗೆ ಸಹಕರಿಸಿದ ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ನಗರಸಭೆಯ ಇಂಜಿನಿಯರ್‌ಗಳು, ವಿವಿಧ ಇಲಾಖೆಯ ಖದೀಮರ ಇತಿಹಾಸ-ಭೂಗೋಳ ಗೊತ್ತಿದೆ. ಪೈಗಳ ಇನ್ನಷ್ಟು ಲ್ಯಾಂಡ್ ಲೂಟಿ ದಾಖಲೆ ಆತ ಕಲೆ ಹಾಕುತ್ತಿದ್ದಾರೆ. ಡೈರಿಯಲ್ಲಿ ತನಗೆ ಕಾಡುತ್ತಿರುವವರ ಹೆಸರು ಬರೆದಿಟ್ಟು ಅನ್ಯಾಯ-ಅಕ್ರಮ ವಿರುದ್ಧ ಸಮರ ಸಾರಿರುವ ಶೇಟ್ 1123 ಕೋಟಿ ದಂಡ ಮತ್ತು ಪೈಗಳು ಹುಸಿರುವಲಯವನ್ನು ನುಂಗಿ ಸಹಜವು ಮಾಡಿಕೊಂಡಿರುವ ಕೇಸ್ ಸಿಓಡಿಗೆ ವಹಿಸುವಂತೆ ಒತ್ತಾಯಿಸುತ್ತಿದ್ದಾರೆ.

ತಮಾಷೆಯೆಂದರೆ, ಈತ ಕಾಂಗ್ರೆಸ್ ಕಾರ್ಯಕರ್ತ. ಈತನ ಪಕ್ಷದ ಮಂತ್ರಿ, ಶಾಸಕರೇ ಪಾಪಿ ಪೈ ಪಟಾಲಂನ ಬೆನ್ನಿಗೆ ನಿಂತಿದ್ದಾರೆ. ಕಾಂಗ್ರೆಸ್ ಕೆಲವು ಶಾಸಕರು ಡಬ್ಬಲ್ ಗೇಮ್ ಆಡುತ್ತಿದ್ದಾರೆಂದಾತನಿಗೆ ಸಂಶಯ. 80 ಬಡಗ ಬೆಟ್ಟು ಮತ್ತು ಶಿವಳ್ಳಿ ಗ್ರಾಮದ ನಿರಾಶ್ರಿತ ಬಡವರಿಗೆ 5 ಸೆಂಟ್ಸ್ ಜಾಗ ಮಂಜೂರಿ ಆದವರಿಗೂ ಎಂಆರ್, ಆರ್‌ಟಿಸಿ ಮಾಡಿಸಲು ಹತ್ತಾರು ಪಿಕ್ಸ್ ಒಡ್ಡುವ ಸರ್ಕಾರಿ ಅಧಿಕಾರಿಗಳು ಸಕಲ ನಿಯಮ ಉಲ್ಲಂಘಿಸಿದ, ಮಾರುಕಟ್ಟೆ ದರವೂ ಸರ್ಕಾರಕ್ಕೆ ಭರಣ ಮಾಡದ ಪೈಗಳಿಗೆ ಎಕರೆಗಟ್ಟಲೆ ಜಾಗದ ಎಂಆರ್ ಮತ್ತು ಆರ್‌ಟಿಸಿ ಆಗುತ್ತಿರುವ "ಜಾದೂ" ಬಗ್ಗೆ ಶೇಟ್ ತಲೆಕೆಡಿಸಿಕೊಂಡಿದ್ದಾರೆ.

ಪೈಗಳ ಭೂ ಕಬಳಿಕೆ ಬಗ್ಗೆ ಸಿಓಡಿ ತನಿಖೆ ಬೇಡಿಕೆ ಇಟ್ಟಿರುವ ಶೇಟ್ ಬೊಬ್ಬೆ ಹೊಡೆಯುತ್ತಿದ್ದರೆ, ಅಧಿಕಾರಿಗಳು ಮತ್ತು ಮಂತ್ರಿಗಳು ಒಳ ಒಪ್ಪಂದ ಮಾಡಿಕೊಂಡು ಪೈಗಳ ಅಕ್ರಮಕ್ಕೆ ಅಧಿಕೃತ ಸಿಂಧುತ್ವ ಕೊಟ್ಟಿದ್ದಾರೆ. ಸರಿಯಾಗಿ ತನಿಖೆಯಾದರೆ ಕಂದಾಯ ಇಲಾಖೆಯ ಮಂತ್ರಿ-ಅಧಿಕಾರಿ-ಜಿಲ್ಲಾ ಉಸ್ತುವಾರಿ ಸಚಿವರೆಲ್ಲ ಕಂಬಿ ಎಣಿಸಬೇಕಾಗುತ್ತದೆ. ಪೈ ಪಟಾಲಂ ಜೈಲು ಪಾಲಾಗಲು ಇದೊಂದೇ ಕೇಸ್ ಸಾಕು!! ಶೇಟ್ ಬೆನ್ನಿಗೆ ನಿಲ್ಲುವ ಬದ್ಧತೆ-ನೈತಿಕ-ಸ್ಥೈರ್ಯ ಯಾರಿಗಿದೆ? ಶೇಟ್‌ಗೆ ತೊಂದರೆಯಾಗದಂತೆ ನೋಡಿಕೊಳ್ಳುವ ಹೊಣೆ ಎಸ್ಪಿ ಅಣ್ಣಾಮಲೈ ಮೇಲಿದೆ.

...ತರ್ಚೆಗಿಳಿವಂತೆ ಪ್ರೇರಣೆ ನೀಡಿಬಿಟ್ಟರು. ನಗರಸಭೆಯ ...ಯುವರಾಜ್ ಶಾಸಕ ಪ್ರಮೋದ್‌ರ ನಿಷ್ಠಾವಂತ ...ಬೇರೆ. ಹೀಗಾಗಿ ನಗರಸಭೆಯಲ್ಲಿ ಮೂರ್‍ನಾಲ್ಕು ...ು ಸತತವಾಗಿ ಎನ್‌ಆರ್‌ಐ ಹಾಸ್ಟೆಲ್‌ನ ಅಕ್ರಮಗಳ ...ಚರ್ಚೆ-ಗದ್ದಲ ನಡೆಯಿತು. ಡೋರ್ ನಂಬರ್, ...ಸಿ ಇಲ್ಲದೆ ವಿದ್ಯುತ್ ಸಂಪರ್ಕ ಪೈಗಳು ಪಡೆದ ...ದೊಡ್ಡ ಗೌಜಿಯಾಯ್ತು. ಹೆಸ್ಕಾಮ್‌ನ ಲಂಚಬಡುಕ ...ರಿಗಳಿಗೆ ನಗರಸಭೆ ನೋಟಿಸ್ ನೀಡಿತು.

...ಗರಸಭೆ ಮಾಹೆ ಮಾಮರ ಹಾಸ್ಟೆಲ್‌ಗೆ ಕೊಟ್ಟಿರುವ ...ನಗಿ ತಡೆಹಿಡಿಯಿತು; ಜಾಗದ ಸಮಗ್ರ ಮಾಹಿತಿ



ಮಣಿಪಾಲ್ ವಿವಿ- ಮಾಹೆ



ಕಸ್ತೂರ್ಬಾ ಮೆಡಿಕಲ್ ಕಾಲೇಜ್ ಕ್ಯಾಂಪಸ್

...ವಂತೆ ತಹಸೀಲ್ದಾರ್‌ಗೆ ಸೂಚಿಸಿತು. ನಗರಾಭಿವೃದ್ಧಿ ...ಕಾರ ಹೇಗೆ ಎನ್‌ಓಸಿ ಕೊಟ್ಟಿದೆ ಎಂದು ವಿವರಣೆ ...ತು. ಪೈಗಳ ಲಫಡಾದ ಬಗ್ಗೆ ದೊಡ್ಡದೊಂದು ವರದಿ ...ರಿಸಿದ ನಗರಸಭೆ ಸರ್ಕಾರಕ್ಕೂ ಕಳಿಸಿತು. ಮಜಾ ...ರೆ ಶಾಸಕ ಪ್ರಮೋದ್ ಮಧ್ವರಾಜ್ ನೇರಾನೇರ ...ಗಕ್ಕಿಳಿಯದೇ ತೆರೆಮರೆಯಲ್ಲೇ ನಿಂತು ಸೂತ್ರ ...ಸುತ್ತಿದ್ದಾರೆ. ಧೈರ್ಯವಾಗಿ ಪೈಗಳ ಕರ್ಮಕಾಂಡವನ್ನು ...ರದ ಮಟ್ಟದಲ್ಲಿ ಮಂಡಿಸಿ ಅಕ್ರಮಕ್ಕೆ ತಡೆಹಾಕುವ ...ತ್ನ ಪ್ರಮೋದ್ ಏಕೆ ಮಾಡುತ್ತಿಲ್ಲ ಎಂಬುದೇ ...ಪಿಯ ಜನರಿಗೆ ಒಗಟಾಗಿದೆ!

1123 ಕೋಟಿ ದಂಡ!


...ಮಾಹೆ ಮಾಫಿಯಾ ಶಿಕ್ಷಣ ಉದ್ದೇಶಕ್ಕೆಂದು ಪಡೆದ ...ು ಅನ್ಯ ಬಿಸ್ನೆಸ್‌ಗೆ ಬಳಸುತ್ತಿರುವುದು ಮತ್ತು ಸರ್ಕಾರಿ ...ವನ್ನು ದಾದಾಗಿರಿಯಿಂದ ಆಕ್ರಮಣ ಮಾಡಿ ...ಗಿಸುತ್ತಿರುವುದರ ವಿರುದ್ಧ ಮೊದಲು ಧ್ವನಿ ಎತ್ತಿ ...ದ್ದು ಯೋಗೀಶ್ ಶೇಟ್ ಎಂಬ ಆರ್‌ಟಿಐ ...ರ್ಯಕರ್ತ! ಆತ ಪೈಗಳ ಲ್ಯಾಂಡ್ ಲೂಟ್ ಮಾರ್ ...ಡಿಗೆ ಒಪ್ಪಿಸಿ ತನಿಖೆ ನಡೆಸುವಂತೆಯೂ ಹೋರಾಡುತ್ತಾ ಬಂದಾತ. ಯಾವಾಗ ಯೋಗೀಶ್ ಶೇಟ್ ತಮ್ಮ ಮಾನಹರಾಜು ಹಾಕೋದು ಗ್ಯಾರಂಟಿಯೆಂದು ಪೈ ಮಾಮಾಗಳಿಗೆ ಖಾತ್ರಿಯಾಯ್ತೋ, ಆಗವರು ವಾಮಮಾರ್ಗ ಹಿಡಿದರು. ಸರ್ಕಾರದ ಮಟ್ಟದಲ್ಲೇ ಗೋಲ್‌ಮಾಲ್ ಶುರು ಹಚ್ಚಿಕೊಂಡರು.

ಆರು ತಿಂಗಳ ಹಿಂದೆ ಜಿಲ್ಲಾಧಿಕಾರಿ ಮತ್ತಿತರ ಕಂದಾಯ ಅಧಿಕಾರಿಗಳಿಗೆ ಶೇಟ್ ದೂರು ನೀಡುತ್ತಿದ್ದಂತೆಯೇ ಪೈಗಳು ತಾವು ಅಕ್ರಮವಾಗಿ ಕಟ್ಟಿದ ಹಾಸ್ಟೆಲ್ ಜಾಗದ ಉಪಯೋಗದ ಬದಲಾವಣೆ (ಲ್ಯಾಂಡ್ ಕನ್ವರ್ಷನ್) ಕೋರಿ ಬೆಂಗಳೂರಿನ ಕಂದಾಯ ಕಾರ್ಯದರ್ಶಿಗಳ ಕಚೇರಿಯಲ್ಲೇ ಕಿತಾಪತಿ ಆರಂಭಿಸಿಬಿಟ್ಟರು. ತನಿಖೆ ನಡೆಸುವಂತೆ ಕಂದಾಯ ಇಲಾಖೆಯಿಂದ ಜಿಲ್ಲಾಧಿಕಾರಿ ಡಾ. ವಿಶಾಲ್‌ಗೆ ಸೂಚನೆ ಬಂತು. ತಕ್ಷಣ ತನಿಖೆ ನಡೆಸಿದ ಡಿಸಿ ಪೈಗಳ ಪಾತಕದ ಕರಾರುವಾಕ್ ವರದಿ ಕಳಿಸಿದರು. ಶೈಕ್ಷಣಿಕ ಉದ್ದೇಶಕ್ಕಾಗಿ ನೀಡಲಾದ ಜಾಗವನ್ನು ಬೇರೆ ಉದ್ದೇಶಕ್ಕೆ ಬಳಸಿರುವ 'ಮಾಹೆ'ಗೆ ಕಂದಾಯ ಇಲಾಖೆ 1123 ಕೋಟಿ ರೂ. ದಂಡ ಹಾಕಿತು. ತಕ್ಷಣವೇ ಡಿಸಿ ಬೇಡಿಕೆ ನೋಟಿಸ್ (ಡಿಮಾಂಡ್ ನೋಟಿಸ್) ಜಾರಿ ಮಾಡಿದರು. ಪೈ ಮಾಮಾಗಳು ಸರ್ಕಾರದ ಲ್ಯಾಂಡ್ ಗ್ರ್ಯಾಂಟ್ ಆ್ಯಕ್ಟನ್ನು ಉಲ್ಲಂಘಿಸಿರುವುದನ್ನು ಕಂದಾಯ ಇಲಾಖೆಯ ಅಧಿಕಾರಿಗಳು ಹಾಗು ಜಿಲ್ಲಾಧಿಕಾರಿ ವಿಶಾಲ್ ಸ್ಪಷ್ಟವಾಗಿ ಗುರುತಿಸಿದ್ದಾರೆ!





ಪ್ರಮೋದ್ ಮಧ್ವರಾಜ್- ಶಾಸಕ ಉಡುಪಿ




ಘಟನೋತ್ತರ ಡೀಲ್

ಡಿಮ್ಯಾಂಡ್ ನೋಟಿಸು ಮತ್ತು ಮಾಧ್ಯಮಗಳಲ್ಲಿ ಬರುತ್ತಿರುವ ಡ್ಯಾಮೇಜಿಂಗ್ ವರದಿ-ಸುದ್ದಿ ಕಂಡು ಪೈ ರಿಪಬ್ಲಿಕ್ ಒಂದು ಹಂತದಲ್ಲಿ ಕಂಗಾಲಾಗಿಹೋಯಿತು! ಮಾಹೆ ರಿಜಿಸ್ಟ್ರಾರ್ ಜೆ.ಕೆ. ಪ್ರಭು ತಮ್ಮ ಸಂಸ್ಥೆಯದೇನೂ ತಪ್ಪಿಲ್ಲ ಎಂದು ತಿಪ್ಪರಲಾಗ ಹಾಕಿದ. ನ್ಯಾಯಾಲಯಕ್ಕೆ ಹೋಗುವುದಾಗಿ ಹಾರಾಡಿದ. 2000 ಇಸವಿಯಲ್ಲೂ ಇಂತದ್ದೇ ಹಗರಣದಲ್ಲಿ ಮಾಹೆ ಪೈಗಳು ಸಿಕ್ಕಿ ಹಾಕಿಕೊಂಡಿದ್ದರು. ಅಂದಿನ ರೆವಿನ್ಯೂ ಸೆಕ್ರೆಟರಿ ಪೈಗಳ ಕಬ್ಜಾದಲ್ಲಿದ್ದ 47.93 ಎಕರೆ ಜಾಗವನ್ನು ಮರಳಿ ಪಡೆಯಲು ಆದೇಶ ಮಾಡಿದ್ದರು. ಉಳಿದ 66 ಎಕರೆ ಜಾಗಕ್ಕೆ ಎಕರೆಗೆ ಒಂದು ಕೋಟಿಯಂತೆ ದಂಡ ಹಾಕಿದ್ದರು. ಆದರೆ ಇದನ್ನು ಪೈಗಳು ಧಿಕ್ಕರಿಸಿ ಕೋರ್ಟ್‌ಗೆ ಹೋದರು. ತಮ್ಮ ದೂಮೂಲಿ ತಂತ್ರ-ಷಡ್ಯಂತ್ರ-ಧಗಾ-ಗದಲುಬಾಜಿ ಅಸ್ತ್ರಗಳನ್ನು ಸಂಬಂಧಿಸಿದವರ ಮೇಲೆ ಪ್ರಯೋಗಿಸಿ ಕೇಸ್ ಖತಂ ಮಾಡಿಕೊಂಡರು. ಅಂದರೆ ಸರ್ಕಾರಿ ಜಾಗ ಅನಾಮತ್ತಾಗಿ ನುಂಗಿ ನೊಣೆದರು.

ಈ ಬಾರಿ ಪೈ ರಿಪಬ್ಲಿಕ್ ಆಳುವವರನ್ನೇ ಪಳಗಿಸಲು ಸ್ಕೆಚ್ ಹಾಕಿ ಯಶಸ್ಸು ಕಂಡಿದೆ! ಮಂಜೂರಿ ಷರತ್ತು ಉಲ್ಲಂಘಿಸಿ ಪೈಗಳು ತಮ್ಮ ದೋಖಾ ದಂಧೆಗೆ ಅನುಕೂಲಕರವಾಗಿ ಬಳಸಿಕೊಂಡಿರುವ 109.38 ಎಕರೆ ಜಾಗಕ್ಕೆ ಮೂರು ಪಟ್ಟು ದಂಡ ವಿಧಿಸಿ ಉದ್ದೇಶ ಬದಲಾವಣೆಗೆ ಘಟನೋತ್ತರ ಅನುಮೋದನೆ ನೀಡಲು ಕಂದಾಯ ಇಲಾಖೆ ಆದೇಶಿಸಿತ್ತಲ್ಲವಾ? ಅದೇ 109.38 ಎಕರೆ ಪ್ರದೇಶದಲ್ಲೇ ಅಕ್ರಮ ಎನ್‌ಆರ್‌ಐ ಹಾಸ್ಟೆಲ್ ಕಟ್ಟಲಾದ ಶಿವಳ್ಳಿ ಸರ್ವೆ ನಂಬರ್ 57/1 ಎ ರಲ್ಲಿನ 14.95 ಎಕರೆ ಜಮೀನು ಇದೆ. ಈ ಜಾಗದಲ್ಲಿ ಮಾಹೆ ಹೆಲ್ತ್ ಸೈನ್ಸ್ ಕಟ್ಟಡ, ವಸತಿಗೃಹಗಳು, ಕಾಲೇಜು ಕಟ್ಟಡಗಳು ಮತ್ತು ಉದ್ಯಾನವನಗಳನ್ನು ನಿರ್ಮಿಸಿದೆ.

ಇದನ್ನು ಪೈಗಳು ಕಂದಾಯ ಮಂತ್ರಿ ಶ್ರೀನಿವಾಸ್ ಪ್ರಸಾದ್‌ಗೆ "ಶೈಕ್ಷಣಿಕ ಉದ್ದೇಶಕ್ಕಾಗಿ ಮಾಡಿದ ವಿನಿಯೋಗ"

▶▶ 12



ಭಿನ್ನತೆಯಲ್ಲಿ ಏಕತೆ ಸಾಧಿಸೋಣ

ಜುಲೈ 29 ರ ಸಂಚಿಕೆಯಲ್ಲಿ ಅವಿನಾಶ್ ಎಮ್.ಎಸ್. ನೆಲ್ಲಿಕಾರ್ ಅವರ ಲೇಖನ ನೋಡಿದೆ. ಅವರನ್ನು ಉಲ್ಲೇಖಿಸಿ ಮಾತನಾಡಿರುವ ಗಿರೀಶ್ ಪಡುಬದ್ರಿಯವರ ಲೇಖನವನ್ನೂ ನೋಡಿ ನನ್ನ ಕೆಲವು ಅನಿಸಿಕೆಗಳನ್ನು ಹಂಚಿಕೊಳ್ಳುತ್ತಿದ್ದೇನೆ. ಅವಿನಾಶ್ ಅವರು ಅಂಬೇಡ್ಕರರ ಲೇಖನ ಮಾಲೆಯಲ್ಲಿ ಗಾಂಧೀಜಿಯನ್ನು ಎಳೆದುತಂದ ಕಾರಣ ತಪ್ಪು ಹಾದಿಯತ್ತ ಕೆಲವು ದುರುಳರು ಕೊಂಡೊಯ್ದು ಹಾನಿ ಮಾಡುತ್ತಾರೆ ಎಂಬ ಭಯದಲ್ಲಿದ್ದಾರೆ. ಅವರಿಗೆ ಸ್ಪಷ್ಟಪಡಿಸುವುದೇನೆಂದರೆ ಆ ದುರುಳರು ನಾವು ತೆಪ್ಪಗಿದ್ದಷ್ಟು ಹೆಚ್ಚು ಹಳ್ಳಗಳನ್ನು ತೋಡಲು ಸಿದ್ಧರಿದ್ದಾರೆ. ಆ ಕಾರಣ ಒಂದು ರೀತಿಯ ಅನುಸಂಧಾನ ಎಲ್ಲಾ ವಾದಗಳಲ್ಲೂ ಒಡಮೂಡಬೇಕೆಂಬುದೇ ನನ್ನ ಅದಮ್ಯ ಬಯಕೆ. ನಾವೆಲ್ಲ ಆ ವಾದ, ಈ ವಾದಗಳಲ್ಲಿ ಒಡೆದು ಹೋಗಿರುವುದಕ್ಕೆ ಅಸಮಾನತಾವಾದಿಗಳು ಅಂಬೇಡ್ಕರರಿಗೆ ಜನಿವಾರ ತೊಡಿಸಲು ಹೊರಟಿರುವುದು: ಗಾಂಧೀಜಿಯನ್ನು ಕೊಂದ ಗೋಡ್ಸೆಗೆ ಗುಡಿ ಕಟ್ಟಲು ಅಣಿಯಾಗಿರುವುದು. ಆದ್ದರಿಂದ ಉಮಾಶಂಕರ್ ಹೇಳಿದಂತೆ ನಮ್ಮ ನಮ್ಮಲ್ಲಿ ವಸ್ತುನಿಷ್ಠ ವಿಮರ್ಶೆ ಅಗತ್ಯವಿದೆ. ಅದನ್ನು ಬಿಟ್ಟು ಇಬ್ಬರ ಪಾಳಯದವರೂ ತಮ್ಮ ತಮ್ಮ ವಾದಗಳಿಗೆ ಉಘೇ ಎನ್ನುವುದರಿಂದ ಅಸ್ಪೃಶ್ಯರ ಸಮಸ್ಯೆಯೂ ಬಗೆಹರಿಯುವುದಿಲ್ಲ, ಸಂಪೂರ್ಣ ಸ್ವಾತಂತ್ರ್ಯವೂ ನಮಗೆ ಸಿಗುವುದಿಲ್ಲ. (ಪ್ರಜ್ಞಾಪೂರ್ವಕವಾಗಿ ಈಗ ನಮಗೆ ದೊರೆತಿರುವ ಸ್ವಾತಂತ್ರ್ಯವು ಸಂಪೂರ್ಣ ಸ್ವಾತಂತ್ರ್ಯವಲ್ಲವೆಂದೇ ಹೇಳುತ್ತಿದ್ದೇನೆ). ಆದ್ದರಿಂದ ವಿವಿಧ ವಾದಗಳ ಅನುಸಂಧಾನಕ್ಕೆ ಧಕ್ಕೆ ಬರದಂತೆ ಸಾಗುವುದು ಇಂದಿಗೆ ಅತಿ ಅವಶ್ಯಕ. ಈ ನಿಟ್ಟಿನಲ್ಲಿ ಇಬ್ಬರನ್ನೂ ಸೇರಿಸುವ ಆ ಖಾಲಿ ಜಾಗವನ್ನು ಭರ್ತಿ ಮಾಡಬೇಕಿದೆ. ಆದಕ್ಕಾಗಿ ಮೊದಲು ನಾವು ಈ ಇಬ್ಬರ ಪರ ನಮ್ಮ ಮೊಂಡುವಾದಗಳನ್ನು ಬಿಡಬೇಕಿದೆ.

ಅವಿನಾಶ್ ಅವರು ಹೇಳುವಂತೆ ಗಾಂಧೀಜಿಯವರು ತಮ್ಮ ಹೋರಾಟದ ಒಂದು ಭಾಗವಾಗಿಯಷ್ಟೇ ತಮ್ಮ ಸುಧಾರಣಾ ಕಾರ್ಯಗಳನ್ನು ಮಾಡಿದರು. ಈ ಮೂಲಕ ಅವರು ತಮ್ಮ ಮೊದಲ ಲೇಖನಕ್ಕೆ ಸಂಬಂಧಿಸಿದಂತೆ ಯೂಟರ್ನ್ ಹೊಡೆದಿದ್ದಾರೆ ಎನಿಸುತ್ತದೆ. ಅಸ್ಪೃಶ್ಯತಾ ನಿವಾರಣೆ ಕಾರ್ಯಕ್ರಮವನ್ನು ಈ ಮೊದಲೇ ಅವರು ಗಾಂಧೀಜಿಯವರ ಹೋರಾಟದ ಒಂದು ಭಾಗವಷ್ಟೇ ಎಂದುಬಿಟ್ಟಿದ್ದರೆ ಈ ಚರ್ಚೆ ಇಷ್ಟು ದೂರ ಬರುತ್ತಿರಲಿಲ್ಲ. ಏಕೆಂದರೆ ಎರಡನೇ ದುಂಡುಮೇಜಿನ ಪರಿಷತ್ತಿನಲ್ಲಿ ಭಾರತದ ಸಮಸ್ತ ಅಸ್ಪೃಶ್ಯರ ಪ್ರತಿನಿಧಿ ನಾನೇ ಎಂದಿದ್ದ ಗಾಂಧೀಜಿಗೆ ಇದೇ ಮಾತನ್ನು ಅಂಬೇಡ್ಕರ್ ಸ್ವಲ್ಪ ಕಠೋರವಾಗಿ ಹೇಳಿದ್ದರು. ಆ ನಿಟ್ಟಿನಲ್ಲಿ ಅವಿನಾಶ್ ಅವರು ಅಂಬೇಡ್ಕರ್ ಅವರ ಪರವಾಗಿಯೇ ಇದ್ದಾರೆ. ಆದರೆ ಅಸ್ಪೃಶ್ಯತೆ ನಿಷೇಧವನ್ನು ಒಂದು ಕಾರ್ಯಕ್ರಮವನ್ನಾಗಿ ಘೋಷಿಸಲು ಗಾಂಧೀಜಿಯವರಿಂದ ಸಾಧ್ಯವಿರಲಿಲ್ಲ, ಅದಕ್ಕೆ ಅಂದಿನ ಪರಿಸ್ಥಿತಿ ಸಿದ್ಧವಿರಲಿಲ್ಲ ಎಂದು ಮತ್ತೇ ಹಿಂದೆ ತೆರಳುತ್ತಾರೆ. ಉಡುಪಿ ದೇವಾಲಯಕ್ಕೆ ಅಸ್ಪೃಶ್ಯರಿಗೆ ಪ್ರವೇಶವಿಲ್ಲ ಎಂದಾಕ್ಷಣ ತಾನೂ ಹೋಗದಿದ್ದ ಗಾಂಧೀಜಿ ನಮಗೂ ಇಷ್ಟವಾಗುತ್ತಾರೆ. ಆದರೆ ಅಸ್ಪೃಶ್ಯತೆ ಆಚರಣೆ ಮಾಡುತ್ತಿದ್ದ ಸವರ್ಣೀಯರ ಮನಸ್ಸುಗಳಿಗಿರಲಿ ಅವರ ಮನೆಗಳಿಗೂ ಅಸ್ಪೃಶ್ಯರ ಪ್ರವೇಶ ನಿಷಿದ್ಧವಾಗಿತ್ತಲ್ಲ ಆಗ ಗಾಂಧೀಜಿ ಅವರುಗಳಿಗೂ "ನಿಮ್ಮ ಮನೆಗೆ ಅಸ್ಪೃಶ್ಯರ ಪ್ರವೇಶವಿದೆಯೇ?" ಎಂದು ಪ್ರಶ್ನಿಸಿ ಅವರ ಮನೆಗಳಿಗೂ ಬರಲಾರೆ ಎಂದು ಮುಖಕ್ಕೆ ಹೊಡೆದಂತೆ ಯಾಕೆ ಹೇಳಲಾಗಲಿಲ್ಲ ಎಂಬುದೇ ನಮ್ಮ ನೋವು. ಇರಲಿ, ಅದರಿಂದ ಭಾರೀ ಬದಲಾವಣೆ ಬಂದುಬಿಡುತ್ತಿತ್ತು ಎಂಬ ಭ್ರಮೆ ಅಂಬೇಡ್ಕರರಿಗೂ ಇರಲಿಲ್ಲ, ಏಕೆಂದರೆ ಗಾಂಧೀಜಿಯವರು ಸಭೆ ನಡೆಸಿದ ಕಡೆಯಲ್ಲೆಲ್ಲ ಅಸ್ಪೃಶ್ಯರನ್ನು ಮುಟ್ಟಿಸಿಕೊಂಡು ಬರುತ್ತಿದ್ದದ್ದಕ್ಕೆ ಅವರನ್ನು ಮುಟ್ಟಿಸಿಕೊಳ್ಳದೇ ಕಾರ್ಯಕ್ರಮ ನಡೆಸಿ ಸಾಗಹಾಕಿ ಗೋಮೂತ್ರದಿಂದ ಶುದ್ಧಿಗೊಳಿಸಿದ ಉದಾಹರಣೆಗಳಿವೆ. ಇದರಿಂದ ನಮಗೆ ತಿಳಿಯುತ್ತದೆ ಗಾಂಧೀಜಿಯವರನ್ನು ಸ್ವತಂತ್ರ ಭಾರತವನ್ನು ಆಳಲು ಬಯಸಿದ ಮೇಲ್ಜಾತಿ ಮನಸ್ಸುಗಳು ಹೇಗೆ ತಮ್ಮ ಪರವಾಗಿ ಬಳಸಿಕೊಂಡ ವೆಂಬುದು. ಅದರ ಅರಿವಿದ್ದ ಗಾಂಧೀಜಿಯವರು ಅಸ್ಪೃಶ್ಯರ ವಿಚಾರದಲ್ಲಿ ಎಂದಿಗೂ ಆ ಮೇಲ್ಜಾತಿ ಮನಸ್ಸುಗಳನ್ನು ಮೀರಿ ಕಡ್ಡಿ ಮುರಿದಂತೆ ಒಂದು ನಿರ್ಧಾರ ತೆಗೆದುಕೊಳ್ಳಲಾಗಲಿಲ್ಲ, ಬದಲಾಗಿ ಕೇರಳದ ಅಸ್ಪೃಶ್ಯ ಕೇಳಪ್ಪನ್ ಅವರಿಗೆ ಭರವಸೆ ನೀಡಿದ್ದ ದೇಗುಲ ಪ್ರವೇಶದ ಸತ್ಯಾಗ್ರಹವನ್ನು ಹಿಂಪಡೆದುಬಿಟ್ಟರು. ಈ ವಿಚಾರದಲ್ಲಿ ಗಾಂಧೀಜಿಯವರು ಸ್ವರಕ್ಷಣೆಗಾಗಿ ಮಾಡಿಕೊಂಡ ಉಪಾಯವನ್ನು. ಯಾವ ದಲಿತನೂ ಮರೆಯಲಾರನು. ಇದೇ ಉಪಾಯ ಕವಿತಾ ಗ್ರಾಮದ ಪ್ರಕರಣದಲ್ಲೂ ಕಂಡುಬರುತ್ತದೆ.

ಇಲ್ಲಿ ಡಿ.ಆರ್.ನಾಗರಾಜ್ ಅವರ ಹೇಳಿಕೆಯನ್ನು ಹೇಳಿದರೆ ಸೂಕ್ತವಾಗುತ್ತದೆ. "ಗಾಂಧೀಜಿಯವರು ಅಸ್ಪೃಶ್ಯತೆಯನ್ನು ಮನಪರಿವರ್ತನೆಯ ಮೂಲಕ ಹೋಗಲಾಡಿಸಲು ಬಯಸಿದ್ದರು" ಎಂಬುದು. ಹೌದು, ಅಂಬೇಡ್ಕರರೊಂದಿಗಿನ ವಿಚಾರಮಂಥನದಲ್ಲಿ ಜಾತಿ ಪರವಾಗಿದ್ದ ಗಾಂಧೀಜಿಯವರು ಜಾತಿ ನಾಶದವರೆಗೆ ಬೆಳೆದುನಿಂತದ್ದು ನಿಜಕ್ಕೂ ಸ್ವಾಗತಾರ್ಹ. ಆದರೆ ಧರ್ಮದ ವಿಚಾರಕ್ಕೆ ಬಂದಾಗ ಅವರು ಅಲ್ಲಾಡಲಿಲ್ಲ. ಚಾತುರ್ವರ್ಣವನ್ನು ಪ್ರತಿಪಾದಿಸುವ ಧರ್ಮಗ್ರಂಥಗಳು ಅವರಿಗೆ ಕೇವಲ "ಸತ್ಯ ಮತ್ತು ಅಹಿಂಸೆ"ಯನ್ನು ಬೋಧಿಸುತ್ತಿದ್ದವು. ಇಲ್ಲೇ ಅವರಿಬ್ಬರ ನಡುವಿನ ಭೇದ ಎದ್ದು ಕಾಣುವುದು. ಅಂಬೇಡ್ಕರರ ಪ್ರಕಾರ "ಹಿಂದೂ ಧರ್ಮ ಜಾತಿಪದ್ಧತಿಯಿಲ್ಲದೆ ಬದುಕುವುದೇ ಇಲ್ಲ." ಆದರೆ ಗಾಂಧೀಜಿಗೆ ಅಸ್ಪೃಶ್ಯತೆ ನಿವಾರಿಸಲು ಕೇವಲ ಮನಪರಿವರ್ತನೆ ಸಾಕು. ಅವರಿಗೆ ರಾಜಕೀಯ, ಧಾರ್ಮಿಕ, ಸಾಮಾಜಿಕ ಪರಿಹಾರಗಳು ಕಾಣುವುದೇ ಇಲ್ಲ.

ಡಿ.ಆರ್.ನಾಗರಾಜ ಅವರು ಗುರುತಿಸುವಂತೆ ಗಾಂಧೀಜಿಯವರು ತಮ್ಮ ಆಶ್ರಮಗಳಲ್ಲಿ ಗುಡಿಕೈಗಾರಿಕೆಗಳಿಗೆ ಅತಿ ಒತ್ತು ಕೊಟ್ಟಿದ್ದರು. ಹಳ್ಳಿಗಳನ್ನು ಬಲಪಡಿಸುವ ಹೆಬ್ಬಯಕೆ ಅದು. ಆದರೆ ಆ ಕೈಗಾರಿಕೆಗಳಲ್ಲಿ ಚರ್ಮಗಾರಿಕೆ ಇತ್ತೇ? ಚಪ್ಪಲಿ ಹೊಲಿಯುವ ಕಾಯಕವಿತ್ತೆ? ಇರಲಿಲ್ಲ, ಹಾಗಾದರೆ ಹಳ್ಳಿಗಳಲ್ಲಿನ ಗುಡಿ ಕೈಗಾರಿಕೆಗಳಲ್ಲಿ ದಲಿತರ ಪಾಲೇನು? ದಲಿತರು ಚರಕ ನೂಲುವಂತಿಲ್ಲ, ಎಂಜಲು ಸೋಕಿಸಿ ತಯಾರಿಸುವುದು ಸಾಧ್ಯವಿರಲಿಲ್ಲ, ಹೋಗಲಿ ದಲಿತೇತರರನ್ನಾದರೂ ಚಪ್ಪಲಿ ಹೊಲಿಯುವ ಕೆಲಸಕ್ಕೆ ಇಳಿಸಬಹುದಿತ್ತಲ್ಲ? ದಲಿತರ ಕಾಯಕಕ್ಕೆ ಘನತೆ ಬರುತ್ತಿತ್ತು, ಈಗ ಸುಸ್ಥಿರ ಬದುಕಿನ ಕನಸು ಕಾಣುತ್ತಿರುವವರೂ ಇದೇ ಪ್ರಶ್ನೆಗಳನ್ನು ಹಾಕಿಕೊಳ್ಳಬೇಕಿದೆ. ಏಕೆಂದರೆ ಗಾಂಧೀಜಿ ಮೊದಲು ಕಲಿತದ್ದು ಚರಕ ನೂಲುವುದನ್ನಲ್ಲ, ವಿದೇಶಿ ಕ್ರೈಸ್ತ ಪಾದ್ರಿಯೊಬ್ಬನಿಂದ ಚಪ್ಪಲಿ ಹೊಲಿಯುವುದನ್ನು. ಚಪ್ಪಲಿ ಹೊಲಿಯುವ ಗಾಂಧೀಜಿಯನ್ನು ನೆನೆದರೇ ಮೈ ಜುಂಎನ್ನುತ್ತದೆ. ಇನ್ನು ಸ್ವತಂತ್ರ ಚಳವಳಿಗಾರರೆಲ್ಲರೂ ಚರಕ ನೂಲುವ ಬದಲು ಚಪ್ಪಲಿ ಹೊಲಿದಿದ್ದರೆ? ಕ್ಷಮಿಸಿ ನನ್ನ ಕನಸು ಭ್ರಮಾಲೋಕಕ್ಕೆ ಹತ್ತಿರವಾಯಿತೇನೋ.

ಇನ್ನು ಅವಿನಾಶ್ ಅವರು ಇಂದಿನ ದಲಿತ ರಾಜಕೀಯ ನಾಯಕರುಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಅವರಿಗಿರುವಷ್ಟು ಸಿಟ್ಟಿಗಿಂತ ನೂರು ಪಟ್ಟು ದಲಿತರಿಗಿದೆ. ಆ ಕಾರಣಕ್ಕಾಗಿಯೇ ಪ್ರಜ್ಞಾವಂತ ದಲಿತರು ಇಂದಿಗೂ ಪ್ರತ್ಯೇಕ ಮತದಾನ ಪದ್ಧತಿಯನ್ನು ನೆನೆದು ಗಾಂಧೀಜಿಯವರ ಮೇಲೆ ಕೆಂಡಕಾರುತ್ತಾರೆ. ದಲಿತರಿಗೆ ಪ್ರತ್ಯೇಕ ಮತದಾನ ಸಿಕ್ಕಿದ್ದರೆ ದಲಿತರು ದಲಿತರಲ್ಲಿಯೇ ಒಬ್ಬನನ್ನು ಆಯ್ಕೆ ಮಾಡಿ ಸವರ್ಣೀಯರಲ್ಲೊಬ್ಬನನ್ನು ಆಯ್ಕೆ ಮಾಡುವ ಎರಡು ಓಟಿನ ಅವಕಾಶವಿರುತ್ತಿತ್ತು, ಅಂದರೆ ಸವರ್ಣೀಯರ ಗುಲಾಮನಲ್ಲದ ದಲಿತನೊಬ್ಬನನ್ನು ಆಯ್ಕೆ ಮಾಡಿ ತಮ್ಮ ಪರವಾಗಿ ಕೆಲಸ ಮಾಡುವ ಸವರ್ಣೀಯನೊಬ್ಬನನ್ನು ಆಯ್ಕೆ ಮಾಡುವ ಅವಕಾಶವದು. ದಲಿತರ ಓಟು ಸಹ ಸವರ್ಣೀಯನಿಗೆ ಅತಿ ಮುಖ್ಯವಾಗಿ ದಲಿತರ ತೂಕ ಹೆಚ್ಚುತ್ತಿತ್ತು, ಆದರೆ ಆ ಅವಕಾಶವನ್ನು ಗಾಂಧೀಜಿಯವರು ಅವರ ಸುತ್ತಾ ಇದ್ದ ಒತ್ತಡದಿಂದಾಗಿ ಬಹುಸಂಖ್ಯಾತ ಬಲ ಕಳೆದುಕೊಳ್ಳುತ್ತೇನೆ ಎಂದೇನೋ ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಬಳಸಿದರು. ಅಂದು ಅಲ್ಲಿ ಕಳೆದುಕೊಂಡ ಈ ಪ್ರತ್ಯೇಕ ಮತದಾನದಿಂದಲೇ ಇಂದು ವರ್ತೂರು, ಅಂಗಾರ, ಜಿಗಜಿಣಗಿಗಳಂತವರು ಹುಟ್ಟಿಕೊಂಡಿರುವುದು. ನೈಜ ದಲಿತರ ಹೆಸರಿನಲ್ಲಿ ಸ್ಪೃಶ್ಯರು ಗದ್ದುಗೆಗೆ ಏರುತ್ತಿರುವುದು. ಅದನ್ನರಿಯದೇ ಪ್ರತ್ಯೇಕ ಮತಕ್ಷೇತ್ರಗಳು ದಲಿತರಲ್ಲಿ ಪುಂಡಾಟಿಕೆಯನ್ನು ಹೆಚ್ಚು ಮಾಡಿಬಿಡುತ್ತಿದ್ದವೇನೋ ಎಂಬ ಗಿರೀಶ್ ಪಡುಬಿದ್ರೆಯವರ ವಾದ ಬಹಳ ಎಳಸೆನ್ನಿಸುತ್ತದೆ.

ಇಂದಿನ ಶೂದ್ರ ಜಾತಿಗಳಲ್ಲಿ ಅರ್ಧದಷ್ಟು ಜನರು ಮಠಗಳನ್ನು ಕಟ್ಟಿಕೊಂಡು, ಬಂಡವಾಳಶಾಹಿಗಳಾಗುತ್ತಾ, ಜಾತಿ ಕೋಟೆಗಳನ್ನು ಭದ್ರಪಡಿಸುತ್ತಿದ್ದಾರೆ ಎಂಬ ಕಾರಣಕ್ಕೆ ಮನುಸ್ಮೃತಿಯೇ ಇರಬೇಕಿತ್ತು, ಸಂವಿಧಾನ ಜಾರಿಯಾಗಬಾರದಿತ್ತು, ಮೀಸಲಾತಿ ಸಿಗಬಾರದಿತ್ತು ಎಂಬಂ... ಪ್ರತಿಗಾಮಿ ಧೋರಣೆ ಅವರಲ್ಲಿದ್ದಂತಿದೆ. ಪ್ರಗತಿಪರರಿ... ಅಂತಹ ಮಾತುಗಳು ಶೋಭೆತರುವಂತಹದಲ್ಲ, ಎಲ... ಜಾತಿಗಳಲ್ಲೂ ಪುಂಡರಿದ್ದಾರೆ. ತಮ್ಮ ಜಾತಿಯ ಜನರನ್ನ... ಮೋಸಗೊಳಿಸಿ ಅಧಿಕಾರದ ಗದ್ದುಗೆ ಹಿಡಿದವರಿದ್ದಾ... ವೈದಿಕರ ಪಾದ ತೊಳೆಯುವವರಿದ್ದಾರೆ. ಹಾಗೆಂದು ಒಂದಿಡಿ... ಜನಾಂಗಕ್ಕೆ ಸಲ್ಲಬೇಕಿರುವ ಸೌಲಭ್ಯವನ್ನೇ ನೀಡಬಾರದ... ಎನ್ನುವುದು ಕಟ್ಟಾ ಬಲಪಂಥೀಯವಾದ. ಅಂತಹ... ಮಾತುಗಳನ್ನಾಡಬೇಕಾದರೆ ಉದ್ವೇಗ ಮರೆತು ಎಚ್ಚರಿಕೆಯಿಂ... ಮಾತನಾಡಬೇಕಾಗುತ್ತದೆ. ದಲಿತರಲ್ಲೊಬ್ಬನ ಪುಂಡಾಟವನ್ನು... 'ದಲಿತ ಪುಂಡಾಟ' ಎಂದದ್ದಕ್ಕೆ ನಮ್ಮ ಆಕ್ಷೇಪವಿತ್ತೇ ಹೊರತು... ಆ ಶಾಸಕನ ಪುಂಡಾಟಕ್ಕಲ್ಲ, ಜೊತೆಗೆ ಜನಿವಾರ ಧರಿಸ... 'ನಾನು ಬ್ರಾಹ್ಮಣ' ಜಾತಿ ಹಿರಿಮೆ ಮೆರೆಯದ ಮನುಷ್ಯನನ್ನು... ನಾವೂ ಗೌರವಿಸುತ್ತೇವೆ.

ಇನ್ನು ಮಾಯಾವತಿಯವರನ್ನು ನಾವು ಭಾರತದಲ್ಲಿ... ಇತರೆ ರಾಜಕೀಯ ವ್ಯಕ್ತಿಯಂತೆಯೇ ನೋಡಬೇಕಿದೆ. ಅವರು... ಮಾಡುತ್ತಿರುವುದೂ ಅದೇ ರಾಜಕೀಯ. ಅಲ್ಲಿ ನೋಟಿ... ಹಾರ, ಅದ್ದೂರಿ ಹುಟ್ಟುಹಬ್ಬಗಳೆಲ್ಲವೂ ಇರುತ್ತದ... ಪ್ರಶ್ನೆಯೆಂದರೆ ದಲಿತರಿಗೆ ಮುಖ್ಯಮಂತ್ರಿ ಪಟ್ಟ ಕೊಡಲು... ನಿರಾಕರಿಸುವ ಪಕ್ಷಗಳ ನಡುವೆ ಬಿಎಸ್ಪಿ ರಾಜಕಾರಣ ಒಂದು... ಕೈಮೇಲಾಗುತ್ತದೆ. ಅದಕ್ಕೂ ಮೀರಿ ಪ್ರಶ್ನಿಸ ಬೇಕೆಂದ... ಆ ವಿಮರ್ಶೆ ವಸ್ತುನಿಷ್ಠವಾಗಿ ಮೇಲಿನಿಂದ ಕೆಳ... ಹರಿಯಬೇಕಾಗುತ್ತದೆ. ಬಹುಶಃ ಬಿಹಾರದ ನಿತೀಶ್... ಕುಮಾರ್ ಮಾಂಜಿಗೆ ಮಾಡಿದ ದ್ರೋಹವನ್ನು ವಿಮರ್ಶಿಸದ... ಮೋದಿ ಪಾಳಯ ಸೇರಿದ ಮಾಂಜಿಯನ್ನು... ವಿಮರ್ಶಿಸುವುದು ಕ್ರೌರ್ಯವಾಗುತ್ತದೆ.

ಕೊನೆಯದಾಗಿ ಗಾಂಧೀಜಿಯನ್ನು ಪಾಲಿಸುವ... ಗಾಂಧಿವಾದಿಗಳೂ ಇದ್ದಾರೆ. ಅಂಬೇಡ್ಕರರನ್ನು ಪಾಲಿಸುವ... ಅಂಬೇಡ್ಕರ್‌ವಾದಿಗಳೂ ಇದ್ದಾರೆ ಎಂದು ನನ್ನ ನಂಬಿಕೆ... ಆದರೆ ಅವರೆಲ್ಲರೂ ಅವರಿಬ್ಬರಲ್ಲಿನ ಯಾವ್ಯಾವ ರೂಪಗಳನ್ನು... ಗಟ್ಟಿಯಾಗಿ ಪ್ರತಿಪಾದಿಸುತ್ತಿದ್ದಾರೆ ಎಂಬುದೇ ಇಲ್ಲಿನ ಪ್ರಶ್ನೆ... ಈ ಗೊಂದಲದಲ್ಲಿ ಆಯಾ ಅನುಯಾಯಿಗಳು ಅವರವ... ನಾಯಕರ ನಾಯಕತ್ವಕ್ಕೆ ವಿರುದ್ಧವಾದ ನಡೆಯನ್ನು... ತೋರುತ್ತಿರುವುದೂ ನಿಜ. ಅದರ ಹೊರತಾ... ಅವಕಾಶವಾದಿತನದಿಂದ ಹೆಸರಿಗೆ ಮಾತ್ರ... ಅನುಯಾಯಿಗಳಿರುವುದೂ ನಿಜ. ಈ ನಡುವೆ... ಸಮಾನತೆಗಾಗಿ ದುಡಿಯುವ ಮನಸ್ಸುಳ್ಳವರ... ಭಿನ್ನತೆಗಳೊಂದಿಗೇ ಏಕತೆ ಬಯಸುವ ಅಗತ್ಯವಿದೆ. ಅಸ್ಪೃಶ್ಯತೆ... ಜಾತಿ ಪದ್ಧತಿ, ಲಿಂಗತಾರತಮ್ಯದ ವಿರುದ್ಧ ಜೇನುಗೂಡನ್ನು... ಕಟ್ಟಬೇಕಿದೆ. ಈ ಜೇನುಗೂಡು ಕಟ್ಟಲು ಯಾವುದೇ... ವಾದವನ್ನೂ ಮೀರುವ ಮನಸ್ಸುಗಳು ಬೇಕಿದೆ. ... ಮನಸ್ಸುಗಳು ನಮ್ಮದು ನಿಮ್ಮದಾಗಬೇಕಿದೆ. ಇಲ್ಲವಾದ... 'ಬ್ರಾಹ್ಮಣರ ಪಾದ ತೊಳೆಯುವ ಕೈಗಳು ದಲಿತ... ಒದೆಯುವ ಕಾಲುಗಳನ್ನು ಹೊಂದಿರುತ್ತವೆ' (ಇಲ್ಲಿ ನಾನು... ದಲಿತರೆಂದದ್ದು ಇಡೀ ಶೋಷಿತರನ್ನು).

■ ವಿಕಾಸ ಆರ್ ಮೌರ್ಯ

ಮಣಿಪಾಲ....


11 ◀◀


ಎಂದು ಸಮಜಾಯಿಷಿ ನೀಡಿ ಒಲಿಸಿದ್ದಾರೆ! ಸಾಕ್ಷಾತ್ ಕಂದಾಯ ಮಂತ್ರಿಗಳಿಗೇ ಪೈಗಳ ಲ್ಯಾಂಡ್ ಲಪಟಾ "ಸದುದ್ದೇಶವೆಂದು" ಒಪ್ಪಿಯಾದ ಮೇಲೆ ಕಂದಾಯ ಅಧಿಕಾರಿಗಳೇನು ಮಾಡಿಯಾರು, ಪಾಪ? ಬಾಸ್‌ನ ಒಳ ಉದ್ದೇಶ ಅರ್ಥಮಾಡಿಕೊಂಡ ಕಂದಾಯ ಇಲಾಖೆಯ ಅಧಿಕಾರಿಗಳು ಶಿವಳ್ಳಿ ಸರ್ವೆ ನಂಬರ್ 57/1 ಸಿ ರಲ್ಲಿನ 14.95 ಎಕರೆ ಪೈಕಿ ಅಕ್ರಮ ಕಟ್ಟಡಗಳಿರುವ 12.45 ಎಕರೆ ಜಮೀನಿಗೆ ಪರಿಷ ತ ಆದೇಶ ಹೊರಡಿಸಿದ್ದಾರೆ (ಆರ್‌ಡಿ 30 ಎಲ್‌ಜಿಎ 2015 ದಿನಾಂಕ 10.7.2015). ಈ ಆದೇಶದಂತೆ ಹಸಿರು ವಲಯ ಸ್ವಾಹಾ ಮಾಡಿ ಪೈಗಳು ಕಟ್ಟಿದ ಅಕ್ರಮ ಕಟ್ಟಡಗಳೆಲ್ಲ ಸಕ್ರಮವಾಗಿವೆ!!

ಶ್ರೀನಿವಾಸ್ ಪ್ರಸಾದ್‌ಗಿದು ಬೇಕಿತ್ತಾ?

"ಮಾಹೆ"ಯ ಸಕಲ ಮಹಿಮೆಯ ಹಿಂದಿನ ಶಕ್ತಿ ಡಾ ರಾಮದಾಸ್ ಪೈ ಎಂಬ ಕ್ಯಾಪಿಟೇಶನ್, ಡೊನೇಷನ್ ಪಿತಾಮಹ! ಈತನೀಗ 70 ಗಡಿ ದಾಟಿದ್ದಾರೆ. ಹೀಗಾಗಿ ತನ್ನ ಮೆಡಿಕಲ್ ಮತ್ತಿತರ ತಾಂತ್ರಿಕ-ಶೈಕ್ಷಣಿಕ ಸಾಮ್ರಾಜ್ಯದ ಉಸ್ತುವಾರಿ ಕುಲಕಂಠೀರವ ರಂಜನ್ ಪೈಗೆ ವಹಿಸಿದ್ದಾರೆ. ಈ ರಂಜನ್ ಪೈ ಬೆಂಗಳೂರು ಕೇಂದ್ರವಾಗಿಟ್ಟುಕೊಂಡು ಕಾರ್ಯಾಚರಣೆ ನಡೆಸುತ್ತಿದ್ದಾರೆ. ಆತ ಹೆಚ್ಚು ಇರುವುದು ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯ ಅಡ್ಡೆಯಲ್ಲಿ, ಆದರೆ ಮಾಹೆಯ ಅಷ್ಟೂ ಆಡಳಿತ ನೋಡಿಕೊಳ್ಳುವುದು ಲೇವಾದೇವಿ ಚತುರನಾದ ಡಾ. ಎಚ್.ಎಸ್. ಬಲ್ಲಾಳ್.

ಈ ಎಚ್.ಎಸ್. ಬಲ್ಲಾಳ್ ಒಂದು ಅವಧಿಗೆ ಮಾಹೆಯ ಉಪಕುಲಪತಿ ಆಗಿದ್ದಾತ. ಕೆಎಂಸಿಯಲ್ಲೇ 30 ವರ್ಷ ಪೈಗಳ ಸೇವೆ ಮಾಡಿದಾತ. ಹೀಗಾಗಿ ಆತನಿಗೆ ಮಾಹೆ ಕುಲಾಧಿಪತಿ ರಾಮದಾಸ ಪೈ ಪರಿವಾರದ ಇಷ್ಟಾನಿಷ್ಟ ಎಲ್ಲವೂ ಗೊತ್ತು. ಹೀಗಾಗಿ ವೈಸ್-ಛಾನ್ಸಲರಿಕೆಯಿಂದ ನಿವೃತ್ತನಾದರೂ ಬಲ್ಲಾಳರನ್ನು ಬಿಟ್ಟುಕೊಡಲು ರಾಮದಾಸ್-ರಂಜನ್ ಪೈಗಳು ರೆಡಿಯಿಲ್ಲ, ಆತನಿಗೆ "ಪ್ರೋ.





ಛಾನ್ಸಲರ್" ಎಂಬ ಒಂದು ಅಲಂಕಾರಿಕ-ಹುದ್ದೆ ಸೃಷ್ಟಿಸಿ ಕೊಟ್ಟಿರುವ ಪೈಗಳು ಆಡಳಿತದ ಆಯಕಟ್ಟಿನ ಜಾಗದಲ್ಲಿ ಪ್ರತಿಷ್ಠಾಪಿಸಿದ್ದಾರೆ. ಈ ಬಲ್ಲಾಳ್ ಪೈಗಳ ದೋಖಾ ದಂಧೆಗೆ ಧಕ್ಕೆ ಬರದಂತೆ ನಿಯತ್ತಿನಿಂದ ದುಡಿಯುತ್ತಿದ್ದಾರೆ.

ಬಲ್ಲಾಳ್ ಮಾಹೆಗೆ ಗಂಡಾಂತರಕಾರಿಯಾಗಿ ವಕ್ಕರಿಸಿದ್ದ 1123 ಕೋಟಿ ರೂಪಾಯಿ ದಂಡ ಮತ್ತು 12.45 ಎಕರೆ ಅಕ್ರಮ-ಸಕ್ರಮ ಹಗರಣದಲ್ಲಿ ನಾಜೂಕಾಗಿ ದಲ್ಲಾಳಿಗಿರಿ ನಿಭಾಯಿಸಿದ್ದಾರೆಂದು ಪೈ ರಿಪಬ್ಲಿಕ್‌ನಲ್ಲಿ ಪ್ರಶಂಸೆ ಶುರುವಾಗಿದೆ! ಮೊದಲು ಈ ಸಮಸ್ಯೆಯಿಂದ ಪಾರು ಮಾಡುವಂತೆ ಬಲ್ಲಾಳ್ ಸಂಧಿಸಿದ್ದು ಜಿಲ್ಲಾ ಉಸ್ತುವಾರಿ ಮಂತ್ರಿ ವಿನಯಕ್ ಕುಮಾರ್ ಸೊರಕೆಯನ್ನು. ಆದರೆ ಸೊರಕೆ ಅದ್ಯಾಕೋ ರಿಸ್ಕ್ ತೆಗೆದುಕೊಳ್ಳಲು ಧೈರ್ಯ ಮಾಡಲಿಲ್ಲ, ಹಾಗಂತ ಈ ಅನ್ಯಾಯ-ಅಕ್ರಮಕ್ಕೆ ಆತನ ವಿರೋಧವೂ ಇರಲಿಲ್ಲ, ಪೈಗಳ "ಉದಯವಾಣಿ"ಯ ಭಯ ಸೊರಕೆಯಾದಿಯಾಗಿ ಕರಾವಳಿಯ ಜಿಲ್ಲೆಯ ಸಕಲ ಶಾಸಕರು, ಮಂತ್ರಿ, ಸಂಸದರಿಗೆ ಇದ್ದೇ ಇದೆ. ಹೀಗಾಗಿ ಪೈಗಳ ಪಾತಕದ ವಿರುದ್ಧ ಯಾರೂ ಸೊಲ್ಲೆತ್ತುವುದಿಲ್ಲ, ಶಾಸಕ ಪ್ರಮೋದ್ ಮಧ್ವರಾಜ್ ಮತ್ತು ಪೈ ಗ್ಯಾಂಗಿನ ಸಂಬಂಧ ಕೆಟ್ಟು ಅದ್ಯಾವುದೋ ಕಾಲವಾಗಿದೆ.

ಆಗ ಬಲ್ಲಾಳ್ ನೇರಾನೇರ ಕಂದಾಯ ಮಂತ್ರಿ ಶ್ರೀನಿವಾಸ್ ಪ್ರಸಾದ್ ಜೊತೆಗೆ "ಒಪ್ಪಂದ" ನಡೆಸಲು ಸ್ಕ್ರಾಟಜಿ ಮಾಡಿದರು. ಅದಕ್ಕವರಿಗೆ ಒಂದು ಅಮೂ... ಅವಕಾಶವೂ ಸಿಕ್ಕಿದ್ದು ಭೂಗಳ್ಳ ಪೈಗಳ ಯೋಗಾಯೋಗವ... ಸರಿ ಎಂದು ಕರಾವಳಿ ಜನರಾಡಿಕೊಳ್ಳುತ್ತಿದ್ದಾರೆ. ಪ್ರೊ... ಛಾನ್ಸಲರ್ ಎಚ್.ಎಸ್. ಬಲ್ಲಾಳರ ಸಹೋದರ ಡಾ... ಸುದರ್ಶನ ಬಲ್ಲಾಳ ಇದ್ದಾರಲ್ಲ, ಆತ ಕಿಡ್ನಿ ವೈಫ... ಮುಂತಾದ ವಯೋಸಹಜ ಕಾಯಿಲೆಗಳಿಂದ ಬಳಲುತ್ತಿರು... ಮಂತ್ರಿ ಶ್ರೀನಿವಾಸ್ ಪ್ರಸಾದರ ಅಧಿಕೃತ ವೈದ್ಯ... ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿರುವ ಸುದರ್ಶನ... ಬಲ್ಲಾಳ ಮೂಲಕ ಅಣ್ಣ ಎಚ್.ಎಸ್. ಬಲ್ಲಾಳ್ ಮಂ... ಪ್ರಸಾದರ ಜೊತೆ ಪೈಗಳ ಅಕ್ರಮ ಸಕ್ರಮೀಕರಣಕ್ಕೆ ಮಾತುಕ... ನಡೆಸಿದ್ದಾರಂತೆ. ಮುದಿ ಕಾಲದಲ್ಲಿ ಈ ಕಳಂಕದ ಕೆಲ... ಪ್ರಸಾದ್‌ಗೆ ಬೇಕಿತ್ತಾ?!

ಹಾಗಂತ ಇಡೀ ಕರಾವಳಿಯಷ್ಟೇ ಅಲ್ಲ, ಮಾಹೆಯ... ಮಹಾಮಹಿಮರೂ ಹಲಬುತ್ತಿದ್ದಾರೆ. ಇದೊಂದು... ಬಹುಕೋಟಿ ಡೀಲ್. ಕೋಟ್ಯಂತರ ರೂ. ಭೂವಿ... ಯಾವುದೇ ಶುಲ್ಕ, ದಂಡ, ತೆರಿಗೆ ಇಲ್ಲದೆ ಪುಕ್ಕಟೆ ಆ... ನೆಲಗಳ್ಳ ಪೈ ಮಾಮಾಗೆ ದಕ್ಕಿದೆ. 1123 ಕೋಟಿ ಇ... ದಂಡ ಮನ್ನಾ ಆಗಿದೆ. ಮರಂತವೆಂದರೆ, ಸಾಮಾಜಿ... ನ್ಯಾಯ ಮತ್ತು ಭ್ರಷ್ಟಾಚಾರ ವಿರೋಧಿಪ್ರಜ್ಞೆಯ ಹಿರಿಯ... ಮಂತ್ರಿ ಎಂಬ ಇಮೇಜಿನ ಪ್ರಸದ್ ಭೂಗಳ್ಳ, ತೆರಿಗೆವಂಚ... ಡೊನೇಷನ್ ದೊರೆ ಮಣಿಪಾಲ ಪೈಗಳ ಸಖ್ಯ... ಬಿದ್ದಿರುವುದು. ಇದು ಡೀಲಾ? ಜೀವ ಉಳಿಸುತ್ತಿರು... ವೈದ್ಯನ ಬಗೆಗಿನ ಕೃತಜ್ಞತೆಯಾ?

ಏನೇ ಇರಲಿ, ಮಾಹೆಯ ಮಾಫಿಯಾದ ಕೊ... ಜಾರಿ ತುಪ್ಪಕ್ಕೇ ಬಿದ್ದಿದೆ. ಸರ್ಕಾರದ ಬೊಕ್ಕಸಕ್ಕೆ ಕೋಟಿಗಟ್ಟಲೆ... ಹಾನಿಯಾಗಿದೆ!!

■ ಶುದ್ಧೋಧನ

ಪಂಚಾಯತ್ ರಾಜ್ ವ್ಯವಸ್ಥೆ: ಒಂದು ಅವಲೋಕನ

ತಿಂಗಳ ಹಿಂದಷ್ಟೇ ನಡೆದ ಗ್ರಾಮ ಪಂಚಾಯತಿಗಳು ಧಾನವಾಗಿ ತಮ್ಮ ಅಧ್ಯಕ್ಷ-ಉಪಾಧ್ಯಕ್ಷರುಗಳನ್ನು ಆಯ್ಕೆ ಮಾಡಿಕೊಂಡು ಕರ್ತವ್ಯ ನಿರ್ವಹಿಸಲು ಶುರು ಮಾಡಿವೆ. ಈ ಹಿನ್ನೆಲೆಯಲ್ಲಿ ನಮ್ಮ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಒಂದು ವಿಶ್ಲೇಷಣೆಗೊಳಪಡಿಸುವ ಅವಶ್ಯಕತೆ ಇದೆ. ಇದರಲ್ಲೂ ಎರಡು ವಿಷಯಗಳು ಮುಖ್ಯವಾಗಿವೆ.

ಮೊದಲನೆಯದು ನಮ್ಮ ಪಂಚಾಯತ್ ರಾಜ್ ವ್ಯವಸ್ಥೆ ಜನಸಮುದಾಯದ ಮೇಲೆ ಬೀರಿರಬಹುದಾದ ದೀರ್ಘಕಾಲೀನ ಪರಿಣಾಮಗಳು. ಎರಡನೆಯದು ಗಾಂಧಿಯವರು ಕಂಡ ಗ್ರಾಮ ಸ್ವರಾಜ್ಯದ ಕನಸು ನನಸಾಗಿದೆಯೇ ಎಂಬುದು.

ಪ್ರತಿ ಸಮಾಜವೂ ಸುಖೀ ರಾಜ್ಯದ ಕನಸೊಂದನ್ನು ತನ್ನೊಳಗೆ ಅಡಗಿಸಿಟ್ಟು ಕೊಂಡಿರುವುದು ಅದರ ಅಸ್ತಿತ್ವದ ದೃಷ್ಟಿಯಿಂದ ಅನಿವಾರ್ಯವಾಗಿರುತ್ತದೆ ಮತ್ತು ಆ ದಿಸೆಯಲ್ಲಿ ಚಲನೆ ಮಾಡಬೇಕಾಗಿರುತ್ತದೆ. ಸಮಾಜವೊಂದರ ಶೋಷಿತ-ದುಡಿಯುವ ವರ್ಗಗಳು ತಮ್ಮ ಕೋಟಲೆಗಳು ಅಧಿಕವಾದಾಗ ತಮ್ಮ ಹಕ್ಕುಗಳಿಗಾಗಿ ಹೋರಾಟ ನಡೆಸತೊಡಗುತ್ತವೆ. ಇಂತಹ ಹೋರಾಟಗಳು ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದ್ದಂತೆ ಎಚ್ಚರಗೊಂಡ ಪ್ರಭುತ್ವಗಳು, ತಮ್ಮ ಉದಾರತೆಯನ್ನು ಪ್ರದರ್ಶಿಸಲು ಸಮುದಾಯಕ್ಕೆ ಅತ್ಯವಶ್ಯಕವಾದ ಎಲ್ಲ ರೀತಿಯ ಸೇವೆ ಸರಕುಗಳನ್ನು ಒದಗಿಸಲು ಹೊಸ ಯೋಜನೆಗಳ ಮೂಲಕ ಪ್ರಯತ್ನಿಸುತ್ತವೆ. ಹೀಗೆ ಅವು ಜಾರಿಗೊಳಿಸುವ ಪಂಚಾಯತ್ ರಾಜ್ ವ್ಯವಸ್ಥೆಯ ಮೂಲಕ ಜನರ ಆಶಯಗಳನ್ನು ಈಡೇರಿಸಲು ಪ್ರಯತ್ನಿಸುತ್ತದೆ.

ಸಮುದಾಯದ ಹೋರಾಟದ ಮೂಲಕ ಜಾರಿಗೆ ಬರುವ ಪಂಚಾಯತ್ ರಾಜ್ ವ್ಯವಸ್ಥೆಗೆ ತನ್ನದೇ ಆದ ಒಂದು ಘನತೆಯಿರುತ್ತದೆ. ಜೊತೆಗೆ ಜನ ಸಮುದಾಯ ಸಹ ಬಹಳ ಕ್ರಿಯಾಶೀಲತೆಯಿಂದ ಅದರಲ್ಲಿ ಪಾಲ್ಗೊಳ್ಳುತ್ತದೆ. ಇಂತಹದೊಂದು ವ್ಯವಸ್ಥೆಯಲ್ಲಿ ಆಸಕ್ತಿಯಿಂದ, ಕ್ರಿಯಾಶೀಲವಾಗಿ ಭಾಗವಹಿಸುವ ಜನಸಮುದಾಯ ನಿಧಾನವಾಗಿ ಸ್ವಾವಲಂಬಿಯಾಗುವತ್ತ ಹೆಜ್ಜೆ ಇಡತೊಡಗುತ್ತದೆ. ಕ್ರಮೇಣ ಅದು ಪ್ರಭುತ್ವದ ಮೇಲಿನ ಅವಲಂಬನೆಯಿಂದ ಹೊರಬರತೊಡಗುತ್ತ, ಸುಖೀ ರಾಜ್ಯದೆಡೆಗೆ ದಾಪುಗಾಲಿಡತೊಡಗುತ್ತದೆ.

ಆದರೆ, ಇಲ್ಲಿ ಗಮನಿಸಬೇಕಾದ ವಿಚಾರವೆಂದರೆ, ಸುಖೀ ರಾಜ್ಯದ ಕನಸನ್ನು ನೀಡುವ ಪ್ರಭುತ್ವಕ್ಕೆ, ತಾನು ಸಮುದಾಯಕ್ಕೇನೊ ನೀಡುತ್ತಿದ್ದೇನೆಂಬ ಅಹಂಕಾರವಾಗಲಿ, ಪಡೆಯುವ ಸಮುದಾಯಕ್ಕೂ ತಾನು ಪ್ರಭುತ್ವದಿಂದೇನೊ ಪಡೆಯುತ್ತಿದ್ದೇನೆಂಬ ಧನ್ಯತೆಯಾಗಲಿ ಇರುವುದಿಲ್ಲ.

ಆದರೆ ನಮ್ಮಲ್ಲಿ ಈಗ ಅಸ್ತಿತ್ವದಲ್ಲಿರುವ ಪಂಚಾಯತ್ ರಾಜ್ ವ್ಯವಸ್ಥೆ ನಮ್ಮ ಜನಸಮುದಾಯದ ಸುದೀರ್ಘ ಹೋರಾಟದ ಫಲವೇನಲ್ಲ. ಯಾಕೆಂದರೆ ಪಂಚಾಯತ್ ರಾಜ್ ಕಲ್ಪನೆಯನ್ನು ಗಾಂಧೀವಾದಿಗಳು ಪ್ರತಿಪಾದಿಸುತ್ತ ಬಂದಿದ್ದು ಜನರನ್ನು ಓಲೈಸಲು ನಮ್ಮ ನಾಯಕರುಗಳು ಜಾರಿಗೆ ತಂದ ಇವತ್ತಿನ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಸಾಕಷ್ಟು ಲೋಪದೋಷಗಳಿವೆ ಮತ್ತು ನಮ್ಮ ಸಮುದಾಯಕ್ಕೆ ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ ಅಂತಹ ಭಾವನಾತ್ಮಕ ನಂಟೇನೂ ಇಲ್ಲ.

ಕೇಳದೆಯೇ, ಹೋರಾಡದೆಯೇ ಪಡೆದುಕೊಂಡ ಈ ವ್ಯವಸ್ಥೆಯ ಬಗ್ಗೆ ಜನರಿಗಿರಬೇಕಾಗಿದ್ದ ಗೌರವವಾಗಲಿ, ಇದನ್ನು ಯಶಸ್ವಿಗೊಳಿಸಬೇಕೆಂಬ ಹೊಣೆಗಾರಿಕೆಯಾಗಲಿ ಕಂಡುಬರುತ್ತಿಲ್ಲ. ತಮ್ಮ ಬದುಕಿನ ಎಲ್ಲದಕ್ಕೂ ಸರಕಾರವೇ ಜವಾಬ್ದಾರಿ ಹೊರಬೇಕೆಂಬ ಮನಸ್ಥಿತಿಗೆ ನಮ್ಮ ಜನ ಬಂದು ನಿಂತಿದ್ದಾರೆ. ಇದರ ಪರಿಣಾಮವಾಗಿ ಜನತೆ ಕ್ರಿಯಾಶೀಲತೆಯಿಲ್ಲದೆ ಪರಾವಲಂಬಿಗಳಾಗುವತ್ತ ನಡೆದಿದ್ದಾರೆ. ಇದಕ್ಕೊಂದು ಉದಾಹರಣೆಯೆಂದರೆ: ತಮಗೆ ಬೇಕಾದ ಚರಂಡಿಗಳ ವ್ಯವಸ್ಥೆಯನ್ನು ಮಾಡುವ ಸರಕಾರವೆ ಅದರ ಸ್ವಚ್ಛತೆಯ ಹೊಣೆಗಾರಿಕೆಯನ್ನೂ ಹೊರಬೇಕೆಂಬ ಮಟ್ಟಿಗೆ ಜನ ನಿಷ್ಕ್ರಿಯರಾಗಿದ್ದಾರೆ. ಹೀಗಾಗಿಯೇ ಇವತ್ತು ಡೆಂಗೀ ಮುಂತಾದ ಕಾಯಿಲೆಗಳು ಬಂದಾಗಲೂ ಜನ ಸರಕಾರವನ್ನು ದೂರುತ್ತಾರೆಯೇ ಹೊರತು ತಾವು ನಿರ್ವಹಿಸಬೇಕಾದ ಹೊಣೆಗಾರಿಕೆಯ ಬಗ್ಗೆ ಮಾತಾಡುವುದಿಲ್ಲ.

ಯಾವುದೇ ಸಂಘರ್ಷವಿಲ್ಲದೆ, ದೀರ್ಘಕಾಲೀನ ಹೋರಾಟದ ಕಲ್ಲುಮುಳ್ಳುಗಳ ಹಾದಿಯನ್ನು ಸವೆಸುವ ಹೋರಾಟದ ಹಂಗಿಲ್ಲದೆಯೆ ರೂಪುಗೊಳ್ಳುವ ಯಾವ ವ್ಯವಸ್ಥೆಯೂ ಜನರನ್ನ ಕ್ರಿಯಾಶೀಲರನ್ನಾಗಿ ಮಾಡಲು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ನೋಡಿದರೆ ನಮ್ಮ ಪಂಚಾಯತ್ ರಾಜ್ ವ್ಯವಸ್ಥೆ ಜನರನ್ನು ಸಕ್ರಿಯವಾಗಿ ಒಳಗೊಳ್ಳುವಲ್ಲಿ ವಿಫಲವಾಗಿಯೆಂದೇ ಹೇಳಬಹುದು. ಹಾಗಾಗಿಯೇ ಸರಕಾರದ ಹಲವು ಯೋಜನೆಗಳ ಅನುಷ್ಠಾನದ ನಂತರವೂ ನಮ್ಮ ಪಂಚಾಯತ್ ವ್ಯವಸ್ಥೆ ಇನ್ನೂ ಪ್ರಾಯೋಗಿಕ ಹಂತದಲ್ಲಿಯೇ ಕೆಟ್ಟು ನಿಂತಿದೆಯೆನ್ನಬಹುದು.

ಇನ್ನು ಎರಡನೆಯದಾಗಿ, ನಾವು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತಂದ ಉದ್ದೇಶವನ್ನೇ ಮರೆತುಬಿಟ್ಟಿದ್ದೇವೆ. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಹಳ್ಳಿಯೊಂದು ಉತ್ಪಾದನಾ ಘಟಕವಾಗಿ ಪರಿವರ್ತನೆಯಾದಾಗ ಮಾತ್ರ ನಿಜವಾದ ಗ್ರಾಮಸ್ವರಾಜ್ಯ ಸಾಧ್ಯವೆಂದು ಗಾಂಧಿಯವರು ನಂಬಿದ್ದರು. ಆದರೀಗ ಎಲ್ಲವು ತಿರುವುಮುರುವಾಗಿದೆ.

ಗಾಂಧಿಯವರ ಗ್ರಾಮ ಸ್ವರಾಜ್ಯದ ಕನಸಿನ ಪ್ರಕಾರ ಗ್ರಾಮವೊಂದು ತನಗೆ ಬೇಕಾದ ಎಲ್ಲ ವಸ್ತುಗಳನ್ನೂ ಸ್ವತಃ ಉತ್ಪಾದಿಸಿಕೊಂಡು ಸ್ವಾವಲಂಬಿಯಾಗಬೇಕು. ಆದರೆ ಆ ಕನಸನ್ನು ನನಸು ಮಾಡಬಲ್ಲ ಯಾವ ಪ್ರಯತ್ನಗಳೂ ನಮ್ಮಿಂದ ನಡೆದಿಲ್ಲ. ಇದಕ್ಕೆ ಕಾರಣ, ಪಂಚಾಯತ್ ರಾಜ್‌ನ ಮೊದಲ ಹಂತದಲ್ಲಿ ಅದಕ್ಕೊಂದು ಆರ್ಥಿಕ ಭದ್ರತೆಯನ್ನು ಒದಗಿಸಿಕೊಡಲು ನಾವು ವಿಫಲರಾದದ್ದು.

ನಂತರದಲ್ಲಿ ತೊಂಭತ್ತರ ದಶಕದಲ್ಲಿ ಬದಲಾದ ನಮ್ಮ ಆರ್ಥಿಕ ನೀತಿ ಅಂತಹ ಎಲ್ಲ ಸಾಧ್ಯತೆಗಳನ್ನು ವಿಫಲಗೊಳಿಸಿತು. ಉದಾರೀಕರಣದ ಇವತ್ತಿನ ದಿನಗಳಲ್ಲಿ ನಾವು ಹಳ್ಳಿಯೊಂದನ್ನು ಉತ್ಪಾದನಾ ಘಟಕವನ್ನಾಗಿ ಮಾಡುವ ಬಗ್ಗೆ ಊಹೆ ಮಾಡಲೂ ಸಾಧ್ಯವಿರದಾಗಿದೆ. ಮೊದಲಾಗಿದ್ದರೆ ನಮ್ಮ ಹಳ್ಳಿಯ ಸಣ್ಣ ಕೈಗಾರಿಕೆಗಳು ದೇಶೀಯ ದೊಡ್ಡ ಕೈಗಾರಿಕೆಗಳನ್ನು ಎದುರಿಸಿ ನಿಲ್ಲಬಹುದಿತ್ತು, ಬಹುಶ ಸರಕಾರವೊಂದರ ನೆರವು ಇದನ್ನು ಸಾಧ್ಯವಾಗಿಸಬಹುದಿತ್ತು.

ಆದರಿವತ್ತು ಜಾಗತೀಕರಣದ ಯುಗ. ದೇಶೀಯ ಉದ್ಯಮಗಳ ಜೊತೆಗೆ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳು ನಮ್ಮ ಮಾರುಕಟ್ಟೆ ಪ್ರವೇಶಿಸಿ ಮೆರೆಯುತ್ತಿವೆ. ಇಂತಹುದರಲ್ಲಿ ನಮ್ಮ ಹಳ್ಳಿಗಳ ಸಣ್ಣ ಕೈಗಾರಿಕೆಗಳು ಬೃಹತ್ ಉದ್ಯಮಗಳನ್ನು ಎದುರಿಸಿ ನಿಲ್ಲಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಉದಾಹರಣೆಗೆ ಉಪ್ಪು, ಉಪ್ಪನ್ನು ತಯಾರಿಸುವ ಹಕ್ಕು ಕೇವಲ ಹಳ್ಳಿಗಳದು ಮಾತ್ರವೆಂದು ಗಾಂಧಿ ಪ್ರತಿಪಾದಿಸಿದ್ದರು. ಆದರಿವತ್ತು ಟಾಟಾದಂತಹ ದೈತ್ಯ ಕಂಪನಿಗಳು ಉಪ್ಪನ್ನು ಉತ್ಪಾದಿಸಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾರುತ್ತಿವೆ. ಹೀಗಿರುವಾಗ ಗುಣಮಟ್ಟದಲ್ಲಾಗಲಿ, ಮಾರುಕಟ್ಟೆಯ ತಂತ್ರದಲ್ಲಾಗಲಿ ದೊಡ್ಡ ಉದ್ದಿಮೆಗಳಿಗೆ ಸೆಡ್ಡು ಹೊಡೆದು ನಿಲ್ಲುವ ಯಾವ ಶಕ್ತಿಯನ್ನು ನಮ್ಮ ಹಳ್ಳಿಗಳ ಕೈಗಾರಿಕೆಗಳು ಹೊಂದಿಲ್ಲ. ಹೀಗಾಗಿ ನಮ್ಮ ಹಳ್ಳಿಗಳನ್ನು ಉತ್ಪಾದನಾ ಘಟಕವನ್ನಾಗಿ ಮಾಡುವ ಸಾಧ್ಯತೆ ಎಂದೋ ಇಲ್ಲವಾಗಿಬಿಟ್ಟಿದೆ.

ಇಂತಹ ಪರಿಸ್ಥಿತಿಯಲ್ಲಿ ಕೆಲಸ ಮಾಡತ್ತಿರುವ ನಮ್ಮ ಪಂಚಾಯತ್ ರಾಜ್ ವ್ಯವಸ್ಥೆ ಒಂದು ಸರಕಾರಿ ಕಚೇರಿಯ ಮಟ್ಟಕ್ಕಿಳಿದುಬಿಟ್ಟಿದೆ. ಕೇಂದ್ರ ಮತ್ತು ರಾಜ್ಯ ಸರಕಾರಗಳು ನೀಡುವ ಅನುದಾನವನ್ನು ವಿತರಿಸುವ ವಿತರಣಾ ಕೇಂದ್ರದಂತೆ ಅದು ಕೆಲಸ ಮಾಡುತ್ತಿದೆ.

ಆದರೆ ಏನೂ ಇಲ್ಲದ್ದಕ್ಕಿಂತ, ಒಂದಿಷ್ಟಾದರೂ ಇದೆಯಲ್ಲ ಎನ್ನುವ ಸಮಾಧಾನದಲ್ಲಿಯೆ ಈ ನಮ್ಮ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಇನ್ನಷ್ಟು ಸಕ್ರಿಯಗೊಳಿಸಿ, ಜನಪರಗೊಳಿಸುವ ಗಟ್ಟಿ ಪ್ರಯತ್ನವೊಂದನ್ನು ಮಾಡಬೇಕಾಗಿದೆ. ಇದು ಕೇವಲ ಸರಕಾರದ ಕರ್ತವ್ಯ ಮಾತ್ರವಲ್ಲ! ನಮ್ಮದೂ ಸಹ ಎಂಬ ಅರಿವನ್ನು ಸಮುದಾಯದಲ್ಲಿ ಮೂಡುವಂತೆ ಮಾಡುವ ಹೊಣೆಗಾರಿಕೆ ನಮ್ಮೆಲ್ಲರದೂ ಆಗಿದೆ.

■ ಅನಿತಾ ಕು.ಸ.ಮಧುಸೂದನ್, ಚಿಕ್ಕಮಗಳೂರು

ಭೂಮಿಯ ಒಡೆಯನಿಗೆ ನ್ಯಾಯಯುತ ಪರಿಹಾರ ಅಂದರೆ ಎಷ್ಟು?



ಭೂಮಿಯ ಒಡೆಯನಿಗೆ ನ್ಯಾಯಯುತ ಪರಿಹಾರ ಅಂದರೆ ಎಷ್ಟು? ಅಥವಾ ಭೂಮಿಯ ಮಾಲೀಕ ಕೈಗಾರಿಕೆಯ ಮಾಲೀಕನೂ ಆಗಲಾರನೆ? ಭೂಮಿಯನ್ನು ಬಿಟ್ಟು ಹೂಡಿಕೆಗೆ ಅವನ ಕೊಡುಗೆ ಎಂದು ಪರಿಗಣಿಸಿ ಅವನನ್ನೂ ಉದ್ಯಮಿ ಆಗಿಸಬಾರದೆ?

ಭೂಮಿಯ ಬೆಲೆ ಎಷ್ಟು? ಅದು ಮಿಕ್ಕ ಮೂಲವಸ್ತುಗಳಂತೆ ಅಲ್ಲ. ಅದು ನಿರಂತರ ವೃದ್ಧಿ ಆಗುತ್ತಾ ಹೋಗುವುದನ್ನು ಗಮನಿಸುತ್ತೇವೆ. ಅದು ಬಂಗಾರಕ್ಕಿಂತಲೂ ಮೌಲ್ಯಯುತ. ವಿಶಿಷ್ಟ ಸಂದರ್ಭಗಳನ್ನು ಬಿಟ್ಟು ನಗರ ಪ್ರದೇಶಗಳಲ್ಲಂತೂ ಇದು ಕ್ಷಣಕ್ಷಣಕ್ಕೂ ಏರುತ್ತಿರುವಂತೆ ಭಾಸವಾಗುತ್ತದೆ. ರೈತನ ಭೂಮಿಗೆ ಪರ್ಯಾಯವಾಗಿ ಮಾರುಕಟ್ಟೆಯ ನಾಲ್ಕರಷ್ಟು ಬೆಲೆ ನೀಡುತ್ತೇವೆ ಅಂತ ಹೇಳುವಾಗ ಮಾರುಕಟ್ಟೆಯ ಬೆಲೆ ಅನ್ನುವ ಕಲ್ಪನೆಯೇ ಪ್ರಶ್ನಾರ್ಹವಾದುದು. ಉಪನೋಂದಣಾಧಿಕಾರಿಯ ಕಡತದಲ್ಲಿ ದಾಖಲಾದ ಬೆಲೆ ಅಂತ ಹೇಳುವಾಗ ಅದು ದಾಖಲಾದ ದಿನದ ವಾಸ್ತವ ಬೆಲೆಯನ್ನು ಮುಚ್ಚಿಟ್ಟದ್ದು ಎನ್ನುವುದು, ಅದಕ್ಕೆ ಹಲವು ಪಟ್ಟಿನ ಕಪ್ಪು ಹಣ ಸಂದಿರುತ್ತದೆ ಅನ್ನುವುದು ತೆರೆದ ಗುಟ್ಟು. ಅದಲ್ಲದೆ ಭೂಮಿಯ ಬೆಲೆ ಏರುತ್ತಾ ಹೋಗುವ ಇಂದಿನ ಪರಿಯಲ್ಲಿ, ಐದು ವರ್ಷದ, ಹತ್ತು ವರ್ಷದ, ದೀರ್ಘಕಾಲೀನ ಸಮಯವ್ಯಾಪ್ತಿಯಲ್ಲಿ ಅದೇ ಭೂಮಿಯ ಬೆಲೆ ನೂರು ಮಡಿ ಇರುವುದನ್ನು ನೋಡಬಹುದು. ಅಂದರೆ ರೈತನಿಗೆ ದೊರೆತ ಪರಿಹಾರದ ಹಣ ಕೇವಲ ಮಾರುಕಟ್ಟೆಯ ಬಡ್ಡಿಯ ದರದಲ್ಲಿ ಏರಬಹುದು ಅಷ್ಟೆ. ನಗದಿನ ಮೌಲ್ಯ ಬೆಲೆಯೇರಿಕೆಯಿಂದಾಗಿ ಸತತ ಕುಗ್ಗುತ್ತಾ ಹೋಗುತ್ತದೆ inflation ಅನ್ನುತ್ತಾರಲ್ಲ ಅದು. ಇದು ಒಂದು ವಾಸ್ತವ. ಅಂದರೆ ರೈತನಿಗೆ ಎಂದೂ ನ್ಯಾಯಯುತ ನಗದು ಪರಿಹಾರ [illegible]ಗುವುದಿಲ್ಲ, ಅದೇ ಒಂದು ಉದ್ದಿಮೆಗಾಗಿ ಆ ಭೂಮಿಯನ್ನು ಪಡೆದುಕೊಂಡ ಉದ್ಯಮಿ ಮುಂದೆ ಅವನ ಕೈಗಾರಿಕೆಯನ್ನು ನಡೆಸಲು ವಿಫಲನಾದರೂ ಅಂದಿನ ಭೂಮಿಯ ಬೆಲೆ ಅವನನ್ನು ಕಾಪಾಡುತ್ತದೆ. ಬೆಂಗಳೂರಿನಲ್ಲಿ ಕಿರ್ಲೋಸ್ಕರ್ ಎಲೆಕ್ಟ್ರಿಕಲ್ಸ್ ಕಂಪನಿ ಕದಮುಚ್ಚಿ ಕಾರ್ಮಿಕರನ್ನು ಬೀದಿಪಾಲು ಮಾಡಿತು. ಮಾಲೀಕ ರಿಯಲ್ ಎಸ್ಟೇಟ್ ದಂಧೆ ಮಾಡಿಕೊಂಡು ಅಪಾರ ಸಂಪತ್ತು ದೋಚಿಕೊಂಡ. [illegible] ರೈತರು ಅದ್ಯಾವುದೋ ಕೊಳಚೆಪ್ರದೇಶದಲ್ಲಿ [illegible]ಹೋದರು.

[illegible] ಸುಳಿಯುಳ್ಳಿರುವ ರೈತ ನಗದು [illegible] ಕ್ರಮೇಣವಾಗಿ ಕಳೆದುಕೊಂಡು ಬಕಾರಿ ಆಗುತ್ತಾನೆ. ಅವನನ್ನು [illegible] ಬಕಾಸುರರುಗಳು ಸುತ್ತುವರಿದಿರುತ್ತಾರೆ. [illegible] ಭೂಮಿ ಕಳೆದುಕೊಂಡ ರೈತರ ಸ್ಥಿತಿ ಎಲ್ಲರಿಗೂ ತಿಳಿದಿದೆ. ಅಂದರೆ ಯಾವುದೇ ಹಣಕಾಸಿನ ಪರಿಹಾರವೂ ನ್ಯಾಯಯುತ ಪರಿಹಾರ ಅಲ್ಲವೇ ಅಲ್ಲ. ಇದರೊಂದಿಗೆ ಆ ಭೂಮಿಯನ್ನು ಕಾನೂನಿನ ಬಲದಿಂದ ಕಿತ್ತುಕೊಂಡಾಗ ಆಗುವ ಅನ್ಯಾಯವಂತೂ ವಿವರಿಸಬೇಕಿಲ್ಲ. ಅವನ ಮನುಷ್ಯತ್ವವನ್ನು ಕಡೆಗಾಣಿಸುವ ಕ್ರಿಯೆ ಅದು. ಮೋದಿ ಕಾನೂನಿನಲ್ಲಿ ಈ ಬಲವಂತ ಇದೆ.

ಭೂಮಿಯ ಒಡೆಯ ಅನ್ನುವ ಒಂದು ಸಾಮಾಜಿಕ ಅಂತಸ್ತಿನ ಕಲ್ಪನೆಗೆ ಸಾಟಿಯಾದುದು ಮತ್ತೊಂದಿಲ್ಲ. ಅದೂ ಈ ಬಂಡವಾಳಿಗ ವ್ಯವಸ್ಥೆಯಲ್ಲಿ ಮಾಲೀಕ ಅನ್ನುವ ಮರ್ಯಾದೆಗೆ ಯಾವುದೇ ನಗದಿನ ಬೆಲೆ ಕಟ್ಟಲಾಗುವುದಿಲ್ಲ. ಅಂತಹ ರೈತ - ಎಷ್ಟೇ ಹಣದ ಪರಿಹಾರವಿರಲಿ - ಮರುದಿನ ಆ ಅಂತಸ್ತನ್ನು ಕಳೆದುಕೊಂಡಾಗ ಮಾನಸಿಕವಾಗಿ ಹಿಂಸೆಯನ್ನು ಅನುಭವಿಸುತ್ತಾನೆ. ಅಂಥವನಿಗೆ, ಅವನು ಸುಶಿಕ್ಷಿತ ಅಲ್ಲ ಅಂತ ಆಪಾದಿಸಿ, ಕನಿಕರದಿಂದ ಆ ಉದ್ಯಮದಲ್ಲಿ ಒಬ್ಬ ಜವಾನನ ಅಥವಾ ಅಂತಹುದೇ ಕೀಳುದರ್ಜೆಯ ನೌಕರಿ ನೀಡುತ್ತೇನೆ ಎನ್ನುವುದು ಕ್ರೌರ್ಯದ ಮತ್ತೊಂದು ಪರಮಾವಧಿ. ನಿನ್ನೆಯ ಮಾಲೀಕ ಇಂದು ಆಳು ಆಗುವ ಅನುಭವಕ್ಕೆ ಎಷ್ಟು ಹಣದ ಪರಿಹಾರ ನೀಡಬಹುದು? ನೆಹರು ಸಂವಿಧಾನ ರಚನಾ ಅಸೆಂಬ್ಲಿಯಲ್ಲಿ ಸಾರ್ವತ್ರಿಕ ಮತದಾನದ ಹಕ್ಕು ನೀಡಬೇಕೆಂದು ಸಮರ್ಥಿಸುತ್ತ ಹೇಳಿದ ಮಾತು ನೆನಪಿಗೆ ಬರುತ್ತದೆ: "ನಮ್ಮ ಜನ ನಿರಕ್ಷರಿಗಳಿರಬಹುದು; ಆದರೆ ಅವರು ಸಾಂಪ್ರದಾಯಿಕ ಜ್ಞಾನ ತುಂಬಿದ ಸುಶಿಕ್ಷಿತರು" ಅಂದಿದ್ದರು.

ನಮ್ಮ ರೈತ ಅಷ್ಟೊಂದು ನಿರುಪಯೋಗಿಯೇ? ಅಷ್ಟೊಂದು ಅನಿಶ್ಚಯ ಪರಿಸ್ಥಿತಿಗಳನ್ನು ಸಮರ್ಥವಾಗಿ ನಿಭಾಯಿಸಿ ಯುಗಯುಗದಿಂದ ನಮಗೆ ಆಹಾರ ಬೆಳೆದುಕೊಡುತ್ತಿರುವ ಈ ಕುಶಲಕರ್ಮಿ ಈ ಕಾಲದ ಉದ್ಯಮಗಳ ಯಾವ ನಿರ್ವಾಹಕ- ಮ್ಯಾನೇಜರ್‌ಗಿಂತ ಸಾಮರ್ಥ್ಯದಲ್ಲಿ ಏನು ಕಡಿಮೆ? ಅವನಲ್ಲಿ ಈ ನಿರ್ವಾಹಕನಾಗುವ ಸಾಮರ್ಥ್ಯ ಸಹಜ ರೂಢಿಗತ. ಅವನ ಸಾಮರ್ಥ್ಯ ಅವನ ಭೂಮಿಯ ಮೇಲೆ ಕಟ್ಟುವ ಕೈಗಾರಿಕೆ / ಉದ್ಯಮಕ್ಕೆ ಖಂಡಿತ ಉಪಯುಕ್ತ.

ಅವನ ಸಾಮರ್ಥ್ಯಕ್ಕೆ ಪಟ್ಟಣ ನಾಗರಿಕತೆಯ ಒಂದಿಷ್ಟು ಮೆರುಗು ಬರುವಂತೆ ಒಂದಿಷ್ಟು ತರಬೇತಿ ಬೇಕಾಗಬಹುದು. ಅದು ಸುಲಭ ಸಾಧ್ಯ. ಇದನ್ನು ಅರ್ಥಮಾಡಿಕೊಂಡರೆ, ಅವನನ್ನು ಅದೇ ಉದ್ಯಮದ ಪಾಲುದಾರನನ್ನಾಗಿಸುವುದು, ಬೋರ್ಡ್ ಸಭೆಯಲ್ಲಿ ಕೂರಿಸುವುದು ಖಂಡಿತ ಸಾಧ್ಯ ಮತ್ತು ಉತ್ತಮ ಪರ್ಯಾಯ. ಹಾಗೆಯೇ ಅದೇ ಭೂಮಿಯ ಮೇಲೆ ಅವಲಂಬಿಸಿದ ಮಾಲೀಕರಲ್ಲದ ಕೃಷಿ ಕಾರ್ಮಿಕರಿಗೆ ಉದ್ಯೋಗವನ್ನೂ ನೀಡಬೇಕು. ಇದು ರೈತರನ್ನು ಕೃಷಿಯಿಂದ ಉದ್ಯಮ ಲೋಕಕ್ಕೆ ವರ್ಗಾಯಿಸುವ ರೀತಿಯಾಗಬೇಕೇ ವಿನಃ, ಅವರನ್ನು ಬಲವಂತದಿಂದ ನಿರ್ದಯವಾಗಿ ಉಚ್ಚಾಟಿಸಿ, ಪಟ್ಟಣದ ಕೊಳಚೆ ಪ್ರದೇಶಕ್ಕೆ ನೂಕುವುದಲ್ಲ.

ಇನ್ನೊಂದು ವಿಷಯ. ಈ ಮಾರ್ಗವನ್ನು ಒಪ್ಪಿಕೊಂಡ ಮೇಲೂ, ಮಾಡಬೇಕಾದ ಮತ್ತೊಂದು ಕೆಲಸವಿದೆ. ರೈತನಿಗೆ ಭೂಮಿ ಹೋದ ಮೇಲೆ, ತಕ್ಷಣಕ್ಕೆ ಜೀವನ ಮಾಡಲು ನೆರವು ಬೇಕು. ಭೂಮಾಲೀಕನಿಗೆ ಈಗ ಹೇಳುತ್ತಿರುವಂತೆ ಅಂದಿನ ಮಾರುಕಟ್ಟೆಯ ನಾಲ್ಕರಷ್ಟು ನಗದನ್ನು ಕೂಡಲೇ ನೀಡಬೇಕು ಹಾಗೂ ಅವನನ್ನು ಉದ್ಯಮದ ಪಾಲುದಾರನನ್ನಾಗಿ ಮಾಡಬೇಕು. ಅದು ಭೂಮಿಯ ಭವಿಷ್ಯದ ಬೆಲೆಯ ಆಧಾರದ ಮೇಲೆ. ಉದ್ಯಮಕ್ಕೆ, ಚರ್ಚೆಗಾಗಿ 50 ವರ್ಷಗಳು ಅಂದರೆ, ಆ 50 ವರ್ಷಗಳಲ್ಲಿ ಅದರ ಬೆಲೆ ಏರಬಹುದಾದ ಮಟ್ಟವನ್ನು ಲೆಕ್ಕ ಹಾಕಿ, ಅವನ ಪಾಲನ್ನು ದಾಖಲಿಸಬೇಕು. ನಂತರ ಆ ಆಧಾರದ ಮೇಲೆ ಉದ್ಯಮದ ಲಾಭದಲ್ಲಿ ಅವನಿಗೆ ಹೂಡಿಕೆ ಮತ್ತು ಪಾಲುಗಾರಿಕೆ ಮಾಲೀಕತ್ವಕ್ಕೆ ದಕ್ಕುವ ಹಂಚಿಕೆ ಆಗುತ್ತಿರಬೇಕು ಹಾಗು ಅವನು ನಿರ್ವಹಿಸುವ ಕೆಲಸವನ್ನು ಆಧರಿಸಿದ ವೇತನ - ಕೂಲಿ ಅಲ್ಲ - ವೇತನ ದೊರೆಯಬೇಕು. ಮುಂದೊಮ್ಮೆ ಉದ್ಯಮ ಕದಮುಚ್ಚಿ ಆಸ್ತಿಯ ಮಾರಾಟವಾದಾಗ ಅವನ ಪಾಲುಗಾರಿಕೆಗೆ ತಕ್ಕ ಪಾಲು ದೊರೆಯಬೇಕು. ಕೈಗಾರಿಕೆ ನಡೆಯುತ್ತಿರುವಾಗ, ಯಾವುದೇ ಕಾರಣಕ್ಕೂ ರೈತ ತನ್ನ ಪಾಲುಗಾರಿಕೆ ಅಂತ ನೆಪ ಮಾಡಿ ಭೂಮಿಯನ್ನು ಹಿಂದಕ್ಕೆ ಪಡೆಯುವಂತಿಲ್ಲ ಅನ್ನುವ ಷರತ್ತು ಮಾಡಬಹುದು. ಮಧ್ಯೆ ಎದ್ದು ಹೋಗಬೇಕಾದರೆ ಆ ಹಂತದಲ್ಲಿ ಅವನ ಪಾಲನ್ನು ಲೆಕ್ಕ ಹಾಕಬಹುದು. ಏತನ್ಮಧ್ಯೆ ಅವನೇ ಉತ್ತಮ ಉದ್ಯಮಿಯಾಗುವ ಬೆಳವಣಿಗೆಯೂ ಆಗುತ್ತದೆ.


ಇಲ್ಲಿ ನೀಡಿರುವ ಸಲಹೆಗಳು ಬಂಡವಾಳಿಗ ಅರ್ಥನೀತಿಯನ್ನೇ ಆಧರಿಸಿದ್ದು. ಇದನ್ನು ತಿರಸ್ಕರಿಸುವುದು ಸಕಾರಣವಾಗುವುದಿಲ್ಲ. ಎಡ ಪಂಥೀಯರು ಹೀಗೆ ತಮ್ಮದೇ ಧ್ಯೇಯದ ಒಳಗೆ ನೀತಿ ರೂಪಿಸಿ ಹೋರಾಡದೆ ಇಂದಿನ ಆಡಳಿತ ವರ್ಗದ ಬಂಡವಾಳಿಗ ನೀತಿಗೆ ಪರಿಷ್ಕಾರ ನೀಡಿದರೆ ಅವರನ್ನು ಜನ ಏಕೆ ಒಪ್ಪಿಕೊಳ್ಳುತ್ತಾರೆ?

ನಾನು ಮೂವತ್ತು ವರ್ಷಗಳ ಹಿಂದೆ, ಎರಡು ದಶಕಗಳ ಕಾಲ ಸಹಕಾರಿ ಗೃಹ ನಿರ್ಮಾಣ ಸಂಘಕ್ಕೆ ಸಾಕಷ್ಟು ಭೂಮಿ ಪಡೆದುಕೊಂಡ ಅನುಭವ ಇದೆ. ನಾವೇ ರೈತರನ್ನು ಸಂಧಿಸಿ ಭೂಮಿ ಕೊಡಿ ಅಂತ ಪ್ರಾರ್ಥಿಸಿ ಬೆಲೆ ನಿಗದಿ ಮಾಡುವಾಗ ಮೊಟ್ಟಮೊದಲು ಮುಂದೆ ಬಂದವರಿಗೆ ನೀಡುವ ಬೆಲೆಗಿಂತ ಅತಿ ಹೆಚ್ಚು ಬೆಲೆಯನ್ನು ಕೊನೆಕೊನೆಗೆ ನೀಡಬೇಕಾಯ್ತು. ತದನಂತರ ಮೊದಲಿನ ರೈತರಿಗೂ ಅವರ ಸಹಕಾರ ಪಡೆಯಲು ಅದೇ ಬೆಲೆಯನ್ನು ನೀಡಬೇಕಾಯ್ತು. ಮುಂದುವರಿದು ನನ್ನದೇ ಕಾರ್ಮಿಕ ಪಕ್ಷ ಮುಂದೆ ಬಂದು, ಕಾನೂನಿನಲ್ಲಿ ಅವಕಾಶ ಇಲ್ಲದಿದ್ದರೂ ರೈತರಿಗೆ ಸದಸ್ಯತ್ವ ನೀಡಿ, ನಿವೇಶನ ನೀಡಿದ್ದರಿಂದ ಅವರು ಮುಂದೆ ಆ ನಿವೇಶನಕ್ಕೆ ಮಾರುಕಟ್ಟೆಯಲ್ಲಿ ತಮ್ಮ ಭೂಮಿ ಮಾರಿ ಬಂದದ್ದಕ್ಕಿಂತ ತುಂಬಾ ಹೆಚ್ಚಿನ ಹಣ ಪಡೆಯಲು ಸಾಧ್ಯವಾಯಿತು. ಮುಂದೆ ಸರ್ಕಾರಕ್ಕೆ ಒತ್ತಾಯ ತಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವೂ ರೈತರಿಗೆ ನಿವೇಶನ ನೀಡುವ ಪರಿಪಾಟಲು ಬಂತು. ಭೂಮಿ ಪಡೆಯುವುದು ಸುಲಭವಾಯಿತು.

ಇಲ್ಲಿಯ ಸಲಹೆಗಳು ಚರ್ಚೆಗೆ ಮಾತ್ರ. ಆದರೆ ಮೂಲ ವಿಷಯ ರೈತರನ್ನು ಉದ್ಯಮಿ ಆಗಿಸುವ ವಿಷಯ. [illegible] ಆಗಿಸುವುದು ಸಲ್ಲ.

■ ಕೆ.ಎಸ್.ಪಾರ್ಥಸಾರಥಿ

ಅಪ್ಪ ಎಂಬ ಬೇತಾಳ



ಅಪ್ಪನಿಗೆ ಮಗಳು ಪ್ರಿಯ; ಅಮ್ಮನಿಗೆ ಮಗ ಪ್ರಿಯ–ಇದು ಪ್ರಕೃತಿ ನಿಯಮ. ಈ ನಿಯಮದಲ್ಲಿ ನಾನು ಕೂಡ ಬಂಧಿಯಾಗಿದ್ದೆ. ಹೌದು!! ನನ್ನ ಮೇಲಿನ ಅಪ್ಪನ ಅತಿಯಾದ ಪ್ರೀತಿ ಎಂಬುದು ಬಂಧನವೇ ಸರಿ. ಫಾದರ್ಸ್ ಡೇಯಂದು ಅಪ್ಪನೊಂದಿಗಿನ ನನ್ನ ಒಡನಾಟದ ಕೆಲವು ಅಪರೂಪದ ಕ್ಷಣಗಳನ್ನು ಹಂಚಿಕೊಳ್ಳಲು ಹೊರಟಿದ್ದೇನೆ.

ಐದನೆಯ ತರಗತಿಯವರೆಗೆ ನನಗೆ ಚಾಕು, ಚೆಂಕಿಪೊಟ್ಟಣ, ಬ್ಲೇಡು ಇವುಗಳನ್ನು ಉಪಯೋಗಿಸಲು ಬಿಟ್ಟಿರಲಿಲ್ಲ. ಎಲ್ಲಿ ತನ್ನ ಮಗಳಿಗೆ ಇವುಗಳಿಂದ ಹಾನಿಯಾಗುತ್ತೋ ಎಂದು ಇವೆಲ್ಲವುಗಳಿಂದ ದೂರವಿಟ್ಟಿದ್ದರು. ನಾನು ಏಳನೇ ತರಗತಿಯಲ್ಲಿ ಓದುವಾಗ 'ಕುಕಿಂಗ್ ವಿದೌಟ್ ಫೈರ್' ಸ್ಪರ್ಧೆಯಲ್ಲಿ ಭಾಗವಹಿಸಿದ್ದೆ. ಅಮ್ಮ ನನಗೆ ಬೆಂಕಿಯನ್ನು ಉಪಯೋಗಿಸದೆ ಮಾಡಬಹುದಾದ ರೆಸಿಪಿಗಳನ್ನು ಹೇಳಿಕೊಟ್ಟು, ಸ್ಪರ್ಧೆಯಲ್ಲಿ ಭಾಗವಹಿಸಲು ಹುರಿದುಂಬಿಸಿದರು. ಮೊದಲ ಬಾರಿಗೆ ಅಪ್ಪನಿಗೆ ತಿಳಿಯದ ಹಾಗೆ ಚಾಕುವಿನ ಹರಿತವನ್ನು ಅರಿತ ನನಗೆ, ಮೊದಲನೆಯ ಪ್ರಶಸ್ತಿ ಬಂದದ್ದಕ್ಕಿಂತ ಹೆಚ್ಚು ಖುಷಿಯಾಗಿತ್ತು.

ಏಳನೇ ತರಗತಿಯಲ್ಲಿ ನಾನು ವಾಲಿಬಾಲ್ ಪಂದ್ಯಕ್ಕೆ ಸೇರಿದೆ. ಅದನ್ನು ಕೇಳಿ ಅಪ್ಪನಿಗೆ ತುಂಬಾ ಕಸಿವಿಸಿಯಾಗಿತ್ತು, 'ಇವಳ ಕೈ ಕೋಳಿಕಾಲಿನ ಹಾಗೆ ಇದೆ, ಅಷ್ಟು ದೊಡ್ಡ ಬಾಲ್‌ಅನ್ನು ಹೊಡೆದರೆ, ಇವಳ ಕೈಗಳು ಉಳಿಯಲು ಸಾಧ್ಯವೇ' ಎಂಬ ಪ್ರಶ್ನೆ ಅಪ್ಪನ ಮನಸ್ಸಿನಲ್ಲಿ ಚುಚ್ಚುತ್ತಿತ್ತು, ಅಪ್ಪನ ಮನಸ್ಸಿನಲ್ಲಿ ಆಗುತ್ತಿದ್ದ ತಳಮಳಗಳನ್ನು ಅರಿತ ನಾನು, ಆಡುವುದನ್ನು ಮಾತ್ರ ಬಿಡಲಿಲ್ಲ, ಜಿಲ್ಲಾ ಮಟ್ಟದಲ್ಲಿ ಗೋಲ್ಡ್ ಮೆಡಲ್ ಪಡೆದು ಸ್ಟೇಟ್ ಲೆವೆಲ್‌ಗೆ ಆಯ್ಕೆ ಆದೆವು. ಮುಂದಿನ ಪಂದ್ಯ ತುಂಬಾ ಕಾಂಪಿಟಿಟಿವ್ ಆಗಿದ್ದುದರಿಂದ, ನಮ್ಮ ಕೋಚ್ ಎಕ್ಸ್ಟ್ರಾ ಟೈಮ್ ಪ್ರಾಕ್ಟೀಸ್ ಮಾಡಿಸುತ್ತಿದ್ದರು. ಒಂದು ದಿನ ರವಿವಾರದಂದು ಮುಂಜಾನೆ ಹೊತ್ತಿನಲ್ಲಿ ಅಪ್ಪ ನನ್ನ ಸ್ಕೂಲ್ ಮೈದಾನಕ್ಕೆ ಬಂದರು. ಮೈದಾನಕ್ಕೆ ನೂರು ಮೀ. ದೂರದಲ್ಲಿ ಇದ್ದ ಮರದ ಮರೆಯಲ್ಲಿ ನಿಂತು, ನಾನು ಆಡುವುದನ್ನು ನೋಡಿದರು. ಆಟದಲ್ಲಿ ತಲ್ಲೀನಳಾದ ನಾನು, ಅಪ್ಪನನ್ನು ಗಮನಿಸಲಿಲ್ಲ, ನನ್ನ ಗೆಳತಿ ಅನುಪ್ತ ಅಪ್ಪ ಸ್ಕೂಲ್ ಹತ್ರ ಬಂದು, ಕದ್ದು ನನ್ನ ಆಟವನ್ನು ನೋಡಿದ್ದನ್ನು ಹೇಳಿದಳು. ಮನೆಗೆ ಹಿಂತಿರುಗಿ ಹೋದಾಗ, ಅಪ್ಪನ ಮುಖದಲ್ಲಿ ಕಂಡ ಕಳ್ಳನಗುವು ಅವರ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಸಿಕ್ಕಿದೆ ಎಂದು ತಿಳಿಸಿತು.

ಆರನೇ ತರಗತಿಯಲ್ಲಿ ಡಿಸ್ಟಿಂಕ್ಷನ್ ಬಂದರೆ ನನಗೆ ಸೈಕಲ್ ತೆಗೆಸಿಕೊಡಬೇಕೆಂದು ಅಪ್ಪ-ಅಮ್ಮನಲ್ಲಿ ಡಿಮ್ಯಾಂಡ್ ಮಾಡಿದೆ. ಡಿಸ್ಟಿಂಕ್ಷನ್ ಬಾರದಿದ್ದರೂ ಸೈಕಲ್ ತೆಗೆಸಿಕೊಡುತ್ತಿದ್ದರು. ಆದರೆ ಗೆದ್ದು ಪಡೆಯುವುದರಲ್ಲಿ ಇರುವ ಮಜವೇ ಬೇರೆ. ಸೈಕಲ್ ಬಗ್ಗೆ ಎಷ್ಟು ಹುಚ್ಚಿತ್ತು ಅಂದರೆ ಪರೀಕ್ಷೆಗೆ ಓದುವ ಸಮಯದಲ್ಲೂ ನಾನು ಅದರ ಬಗ್ಗೆಯೇ ಕನಸು ಕಾಣುತ್ತಿದ್ದೆ. ಕೊನೆಗೆ ಪರೀಕ್ಷೆಯ ಫಲಿತಾಂಶದ ಫಲವಾಗಿ ನನ್ನ ಕನಸು ನನಸಾಗಿತ್ತು. ಸೊಸೈಟಿಯಿಂದ ಮನೆಗೆ ಸಾಮಾನು ತರುವುದು, ಸ್ಟಂಟ್ಸ್ ಮಾಡುವುದು, ನನ್ನ ಗೆಳತಿಯರಿಗೆ ಸೈಕಲ್ ಕಲಿಸುವುದು, ಚೈನ್ ಕಳಚಿಕೊಂಡಾಗ ಅದನ್ನು ಸರಿಪಡಿಸಲು ಹೋಗಿ ಬಟ್ಟೆ, ಮೈ ಎಲ್ಲಾ ಮಸಿ ಮಾಡಿಕೊಂಡು ಮನೆಗೆ ಬರುತ್ತಿದ್ದುದು–ಹೀಗೆ ಹಲವಾರು ನೆನಪುಗಳೊಂದಿಗೆ ಬೆಳೆದೆ.

ಒಬ್ಬಳೇ ಮಗಳಾದ ನನಗೆ ಸೈಕಲ್ ಒಂದು ಸಂಗಾತಿಯ ಹಾಗೆ ಸಾಥ್ ನೀಡಿತ್ತು, ಒಂದು ಚೂರೂ ಹಾಳಾಗದಂತೆ ಅದರ ಸರ್ವಿಸ್ ಕೂಡಾ ಮಾಡಿಸುತ್ತಿದ್ದೆ. ನಾನು ಏಳನೇ ತರಗತಿಯಲ್ಲಿದ್ದಾಗ ನಮ್ಮ ಸ್ವಂತ ಮನೆ 'ಕನಸು'ಗೆ ಬಂದೆವು. ಈ ಹಿಂದೆ ಯುನಿವರ್ಸಿಟಿ ಕ್ಯಾಂಪಸ್‌ನಲ್ಲೇ ಇದ್ದ ನಮಗೆ, ಮೈನ್‌ರೋಡ್‌ನಲ್ಲಿ ಯಮದೂತರಂತೆ ಬರುವ ವಾಹನಗಳ ಭಯವೇ ಇರಲಿಲ್ಲ. ಈಗ ನಮ್ಮ ಹೊಸಮನೆಗೆ ಹೋಗಬೇಕಾದರೆ ಮುಖ್ಯರಸ್ತೆಯನ್ನು ದಾಟಿಯೇ ಹೋಗಬೇಕು. ಹದಿನೈದು ವರ್ಷಗಳ ಹಿಂದೆ ನಮ್ಮ ಮನೆ 'ಕನಸು'ವಿನ ಎದುರು ರಸ್ತೆಗೆ ಟಾರ್ ಆಗಿರಲಿಲ್ಲ, ಇಳಿಜಾರಾಗಿದ್ದ ದಾರಿಯಲ್ಲಿ ಸ್ವಲ್ಪ ಹಳಿತಪ್ಪಿದರೆ ಪಾತಾಳಕ್ಕಿಳಿಯಬೇಕಾಗಿತ್ತು, ನಾನು ಇಂಥ ರಸ್ತೆಯಲ್ಲಿ ಸೈಕಲ್ ಓಡಿಸಿಕೊಂಡು ಹೋದರೆ ಎಲ್ಲಿ ಬಿದ್ದುಬಿಡುತ್ತಾಳೋ ಎಂದು ಹೆದರಿ ಅಪ್ಪ ಸೈಕಲ್‌ಅನ್ನು ನನ್ನ ಗಮನಕ್ಕೆ ತಾರದೆ ಮಾರಿಬಿಟ್ಟರು. ಮುಂದೊಂದು ದಿನ ಅದನ್ನು ತಿಳಿದ ನನಗೆ ಒಡಹುಟ್ಟಿದವರನ್ನೇ ಮಾರಿದಂತೆ ಆಘಾತವಾಯಿತು. ವೈಜ್ಞಾನಿಕವಾಗಿ ಹೇಳುವುದಾದರೆ, ಮಕ್ಕಳು ಸೈಕಲ್ ಓಡಿಸಿದರೆ ಕಾಲು ಒಂದೆರಡು ಇಂಚು ಉದ್ದವಾಗುತ್ತದೆ. ಹಾಗಾಗಿ ಈಗಲೂ ಯಾರಾದರೂ ನನ್ನನ್ನು ಕುಳ್ಳಿ ಎಂದು ಕರೆದರೆ ಬೆಂಕಿ ಉರಿದಷ್ಟು ಕೋಪ ಬರುತ್ತದೆ. ಈ ವಿಷಯದಲ್ಲಿ ನಾನು ಎಂದಿಗೂ ಅಪ್ಪನನ್ನು ಕ್ಷಮಿಸುವುದಿಲ್ಲ.

ನಾನು ಪಿಯುಸಿಗೆ ಬಂದಾಗ ಸೈಕಲ್‌ನ ಮೇಲೆ ವ್ಯಾಮೋಹ ಹೋಯಿತು. ಸ್ಕೂಟರ್ ಓಡಿಸಬೇಕೆಂಬ ಆಸೆ ಹುಟ್ಟಿತು. ನನ್ನ ಅಪ್ಪನ ಸ್ನೇಹಿತರ ಹೆಣ್ಣುಮಕ್ಕಳು ಸ್ಕೂಟರ್ ಓಡಿಸಿದಾಗ "ಭೇಷ್" ಎಂದು ಹೇಳಿ ಹೆಮ್ಮೆ ಪಡುತ್ತಿದ್ದರು. ನಾನು ಕೂಡ ಸ್ಕೂಟರ್ ಓಡಿಸಿದರೆ ಅಪ್ಪನಿಗೆ ಬಲು ಸಂತೋಷವಾಗುತ್ತದೆ ಎಂದುಕೊಂಡೆ. ಹಾಗಾಗಿ ನಾನು ಬಿಎಸ್‌ಸಿಗೆ ಸೇರಿದಾಗ, ಸ್ಕೂಟರ್ ತೆಗೆಸಿಕೊಡು ಎಂದು ಕೇಳಿದೆ. ಆದರೆ ನಾನೆಲ್ಲಿ ಗಾಡಿ ಓಡಿಸಿ ಬಿದ್ದು ಬಿಡುತ್ತೇನೋ ಎಂದು ಅಪ್ಪ ತೆಗೆಸಿಕೊಡಲಿಲ್ಲ, ಈ ಬಾರಿ ಸೈಕಲ್‌ನ ಹಾಗೆ ಮೋಸ ಹೋಗಬಾರದೆಂದು ಎಂ.ಎಸ್ಸಿ ಸೇರಿದಾಗ, "ಅಪ್ಪಾ, ನಾನು ಈಗ ಪೋಸ್ಟ್ ಗ್ರ್ಯಾಜ್ಯುಯೇಶನ್ ಮಾಡುತ್ತಿದ್ದೇನೆ, ನಾನೇನು ಚಿಕ್ಕವಳಲ್ಲ, ಈಗಲಾದರೂ ನನಗೆ ಸ್ಕೂಟರ್ ತೆಗೆಸಿಕೊಡಪ್ಪಾ" ಎಂದು ಡಿಮ್ಯಾಂಡ್ ಮಾಡಿದೆ. ನನ್ನ ಡಿಮ್ಯಾಂಡ್‌ಗೆ ಅಪ್ಪ ಮರು ಡಿಮ್ಯಾಂಡ್ ಹಾಕಿದರು. "ಮನೆಯಲ್ಲಿ ಕಾರ್ ಇದೆ. ನೀನು ಮೊದಲು ಕಾರ್ ಡ್ರೈವಿಂಗ್ ಕಲಿತುಕೋ, ಆಮೇಲೆ ಸ್ಕೂಟರ್ ಕೊಡಿಸುತ್ತೀನಿ" ಎಂದರು. ಸ್ಕೂಟರ್ ಸಿಗುವ ಆಸೆಯಲ್ಲಿ ಕಾರ್ ಡ್ರೈವಿಂಗ್ ಕ್ಲಾಸ್ ಸೇರಿಕೊಂಡು, ತಪ್ಪದೆ ಎಲ್ಲಾ ಕ್ಲಾಸ್‌ಗಳನ್ನು ಅಟೆಂಡ್ ಮಾಡಿ, 60% ಪರ್‌ಫೆಕ್ಟ್ ಆದೆ. ನಂತರ ನಮ್ಮ ಕಾರನ್ನೆ ಓಡಿಸಲು ಶುರುಮಾಡಿದೆ.

ಆದರೆ ಇಲ್ಲಿಯೂ ನನ್ನ ಡ್ರೈವಿಂಗ್‌ನ್ನು ಕಟ್ಟಿಹಾಕಿದ ಸ್ಥಿತಿಯೇ ಬಿಡಿ. ಯಾವತ್ತೂ ನನ್ನನ್ನು ಇಂಡಿಪೆಂಡೆಂಟ್ ಆಗಿ ಕಾರ್ ಓಡಿಸಲು ಅಪ್ಪ ಬಿಡಲೇ ಇಲ್ಲ, ಯಾವಾಗಲೂ ನನ್ನ ಪಕ್ಕದ ಸೀಟಲ್ಲೇ ಕೂತು, "ಗೇರ್ ಚೇಂಜ್ ಮಾಡು", "ಇಂಡಿಕೇಟರ್ ಹಾಕು", "ಸ್ಲೋ ಮಾಡು", "ಸೈಡ್ ಮಿರರ್ ನೋಡು", "ಡಿಮ್-ಡಿಪ್ ಮಾಡು"–ಹೀಗೆ ಕಾಮೆಂಟರಿ ನಡೀತಾನೇ ಇರುತ್ತೆ, ನನ್ನ ಅಮ್ಮ ತುಂಬಾ ಪ್ರಾಕ್ಟಿಕಲ್ ಆಗಿ ಯೋಚನೆ ಮಾಡುತ್ತಾರೆ. ನಾನು ಇಂಡಿಪೆಂಡೆಂಟ್ ಆಗಿ ಬೆಳೆಯಬೇಕು ಅನ್ನೋದು ಅಮ್ಮನ ಇಚ್ಛೆ. ಅದೊಂದು ರವಿವಾರದ ಮಧ್ಯಾಹ್ನ. ಚಿಕನ್ ಬಿರಿಯಾನಿಯನ್ನು ಗಡದ್ದಾಗಿ ತಿಂದು ಅಪ್ಪ ಗೊರಕೆ ಹೊಡೆಯುತ್ತಿದ್ದರು. ಇದೇ ಸರಿಯಾದ ಸಮಯವೆಂದು ಅಮ್ಮ, "ಕಾರನ್ನು ನೀನೊಬ್ಬಳೇ ಏಕೆ ತೆಗೆದುಕೊಂಡು ಹೋಗಬಾರದು" ಎಂದು ನನ್ನ ಕಿವಿಗೆ ಹಾಕಿದರು. ನಾನು ಕೂಡ ಇದೇ ಸಮಯಕ್ಕಾಗಿ ಕಾತರಿಸುತ್ತಿದ್ದೆ. "ಡ್ರೈವಿಂಗ್ ಸೀಟ್ ಪಕ್ಕದಲ್ಲಿ ಮೊಬೈಲ್ ಇಟ್ಟುಕೋ, ಎಲ್ಲಿಯಾದರೂ ತೊಂದರೆಯಾದರೆ ಫೋನ್ ಮಾಡು, ನಾನು ಬರುತ್ತೇನೆ. ಹೆದರಬೇಡ, ನೀನು ಖಂಡಿತ ಏನೂ ತೊಂದರೆಯಿಲ್ಲದೆ ವಾಪಸ್ಸು ಬರುತ್ತೀಯ ಎಂಬ ಧೈರ್ಯ ನನಗಿದೆ" ಎಂದು ಹೇಳಿ ಭರವಸೆ ನೀಡಿ ಧೈರ್ಯ ತುಂಬಿ ಕಳುಹಿಸಿದರು. ಅಪ್ಪನಿಗೆ ಗಾಡಿ ಸ್ಟಾರ್ಟ್ ಆದ ಸದ್ದು ಕೇಳಿಸಿ, ಅವರ ಗಾಢ ನಿದ್ದೆ ಹಾರಿಹೋಯಿತು. ನಾನು ವಾಪಸ್ಸು ಬರುವ ದಾರಿಯನ್ನೇ ಕಾದು ಕುಳಿತರು. ನಾನು ಕಾರು ಓಡಿಸಿಕೊಂಡು ಯುನಿವರ್ಸಿಟಿ ಕ್ಯಾಂಪಸ್‌ಗೆ ಹೋದೆ. ನನ್ನ ಯಾವ ಫ್ರೆಂಡ್ಸ್‌ಗಳೂ ಕಾರು ಓಡಿಸಲು ಕಲಿತಿರಲಿಲ್ಲ, ಹಾಗಾಗಿ ನಾನು ಅವರ ಮುಂದೆ ಸ್ವಲ್ಪ ಜಾಸ್ತಿಯೇ ಶೋ ಆಫ್ ಮಾಡಿ, ಯಾವ ಅಡಚಣೆಗಳಿಲ್ಲದೇ ಮನೆ ತಲುಪಿದೆ. ನಾನು ಮನೆಗೆ ಬಂದ ಸುದ್ದಿ ತಲುಪಿದ್ದೇ, ಅಪ್ಪ ದಿನಪತ್ರಿಕೆ ಹಿಡಿದು ಕುಳಿತರು. ನಾನು ಸುರಕ್ಷಿತವಾಗಿ ಮನೆಗೆ ತಲುಪಿದ ಖುಷಿಯನ್ನು ಅಪ್ಪನ ತುಟಿಯಂಚಿನ ನಗುವಿನಿಂದ ಅರ್ಥಮಾಡಿಕೊಂಡೆ. ಈಗಲಾದರೂ 'ಭೇಷ್ ಮಗಳೇ, ಇನ್ನು ನೀನು ಒಬ್ಬಳೇ ಕಾರ್ ಓಡಿಸಬಹುದು' ಎಂದು ಹೇಳುತ್ತಾರೆ ಅಂದುಕೊಂಡೆ. ಊಹೂ!! ಇಂದಿನವರೆಗೂ ಅಪ್ಪ ಆ ಧೈರ್ಯವನ್ನು ಮಾಡಲೇ ಇಲ್ಲ, ಅಂತೂಇಂತೂ ಸ್ಕೂಟರ್ ಕೊಡಿಸುತ್ತಾರೆ ಎಂಬ ಆಸೆಯಲ್ಲಿ ಕಾರು ಕಲಿತೆ.

ಎಂ.ಎಸ್ಸಿ ಕೊನೆಯ ಸೆಮಿಸ್ಟರ್‌ನಲ್ಲಿ ಇದ್ದಾಗ ನನಗೆ ಬೆಂಗಳೂರಿನಲ್ಲಿ ಪ್ಲೇಸ್‌ಮೆಂಟ್ ಆಯಿತು. ಕಂಪನಿ ಪಕ್ಕದಲ್ಲೇ ಪಿ.ಜಿ ಹುಡುಕಿದೆ. ರೂಮ್‌ನಿಂದ ಕಂಪನಿಗೆ ಹತ್ತು ನಿಮಿಷದ ದಾರಿ. ಇದೇ ಸರಿಯಾದ ಸಮಯ ಎಂದು ಸ್ಕೂಟರ್ ತೆಗೆಸಿಕೊಡು ಎಂದು ಕೇಳಿದೆ. ಈ ಬಾರಿ ಅಪ್ಪನಿಗೆ ಏನು ಮಾಡುವುದು ಎಂದು ತಿಳಿಯಲಿಲ್ಲ, ತೆಗೆಸಿಕೊಡುತ್ತೇನೆ ಎಂದು ಮಾತು ಕೂಡ ಕೊಡಲಿಲ್ಲ, ಕಂಪನಿ ಸೇರಲು ಇನ್ನೂ ಎರಡು ತಿಂಗಳಿತ್ತು, ಈ ಮಧ್ಯದಲ್ಲಿ ಎಫ್.ಎಂ, ಟಿ.ವಿಯಲ್ಲಿ ಆ್ಯಡ್‌ಗಳು ಬಂದರೆ ಪರೋಕ್ಷವಾಗಿ ಸೂಚನೆಗಳನ್ನು ಕೊಡುತ್ತಿದ್ದೆ. ಅಪ್ಪ ಇಂಥ ವಿಷಯಗಳಲ್ಲಿ ತುಂಬಾ ಹುಷಾರು. ನನ್ನ ಎಲ್ಲಾ ಸೂಚನೆಗಳನ್ನು ತಿರಸ್ಕರಿಸುತ್ತಾ ಬಂದರು. ಆದರೂ ನಾನು ನನ್ನ ಹಠವನ್ನು ಬಿಡಲಿಲ್ಲ, ಕೊಡಿಸಲೇಬೇಕೆಂದು ಹಠ ಹಿಡಿದೆ. ಅಪ್ಪನಿಗೆ ಈಗ ನುಂಗಲಾರದ ತುತ್ತು, ಏನೇ ಆಗಲಿ ನನ್ನ ಅಪ್ಪನಲ್ವಾ, ಸ್ಕೂಟರನ್ನು ಕೊಡಿಸದಿರಲು ಬೇರೆ ದಾರಿಯನ್ನು ಹುಡುಕಿದರು. ಒಂದು ದಿನ ನಗರಿ ಬಾಬಯ್ಯ ಅಂಕಲ್ ಮತ್ತು ಗೌರಿ ಲಂಕೇಶ್ ಆಂಟಿ ಮನೆಗೆ ಬಂದಿದ್ದರು. ಇವರಿಬ್ಬರೂ ನನಗೆ ತುಂಬಾ ಆತ್ಮೀಯರು. ಇವರ ಮೂಲಕ ನನ್ನನ್ನು ಒಪ್ಪಿಸಲು ಅಪ್ಪ ಹೊಂಚು ಹಾಕಿದ್ದರು. ಇಬ್ಬರೂ ಕುಳಿತು ಪ್ರೀತಿಯಿಂದ "ಬೆಂಗಳೂರಿನ ಟ್ರಾಫಿಕ್ ತುಂಬಾ ಕೆಟ್ಟದಾಗಿದೆ, ನಮಗೇ ಭಯ ಹುಟ್ಟಿಸುತ್ತದೆ, ಪಕ್ಕದಲ್ಲಿ ಓಡಿಸುವವನ ಮನಸ್ಥಿತಿ ಹೇಗಿರುತ್ತೇನೋ. ಎಲ್ಲದಕ್ಕಿಂತ ಹೆಚ್ಚು ನೀನು ಒಬ್ಬಳೇ ಮಗಳು. ನೀನು ಅಂದ್ರೆ ಅಪ್ಪ ಅಮ್ಮನಿಗೆ ಪ್ರಾಣ" ಎಂದು ಇಮೋಷನಲ್ ಬ್ಲ್ಯಾಕ್‌ಮೇಲ್ ಮಾಡಿದರು. ಹಿರಿಯರ ಮಾತು ತಳ್ಳಿ ಹಾಕಲೂ ಆಗದೆ ಸಂಪೂರ್ಣ ಮನಸ್ಸಿನಲ್ಲಿ ಒಪ್ಪಿಕೊಳ್ಳಲೂ ಆಗದೆ ಸುಮ್ಮನಾದೆ. ಹೀಗೆ ಅಪ್ಪ ತನ್ನ ಹಠವನ್ನು ಸಾಧಿಸಿಯೇ ಬಿಟ್ಟ. ಅಂದಿನಿಂದ ಸ್ಕೂಟರ್‌ನ ಬೇಡಿಕೆಯನ್ನು ಇಡಲಿಲ್ಲ. ಆದರೆ ಸ್ಕೂಟರ್ ಕೊನೆಗೂ ಕೊಡಿಸಲಿಲ್ಲ ಎಂಬ ಹತಾಶೆಯನ್ನು ಕೆಲವು ಸಂದರ್ಭದಲ್ಲಿ ಹೊರಹಾಕುತ್ತೇನೆ. ನಾನು ಈಗ ಅಪ್ಪನ ಸಹಾಯವಿಲ್ಲದೇ ಸ್ಕೂಟರ್ ತೆಗೆಯಬಲ್ಲೆ, ಆದರೆ ಆತನಿಗಾಗಿ ಗೆದ್ದೂ ಸೋತಂತಾಗಿದೆ.


ನಾನು ಡಿಗ್ರಿ ಓದಲು ಸೈಂಟ್ ಅಲೋಶಿಯಸ್ ಕಾಲೇಜಿಗೆ ಸೇರಿದ್ದೆ, ಕಾರಿನಲ್ಲಿ ಅಪ್ಪ ಮೊದಲು ನನ್ನನ್ನು ಕಾಲೇಜಿಗೆ ಬಿಡುತ್ತಿದ್ದರು. ಒಂದು ವೇಳೆ ಅಪ್ಪನಿಗೆ ತ... ತಡವಾದರೆ ನನ್ನನ್ನು ಕಾಲೇಜಿನ ಮುಂದಿರುವ ... ರಸ್ತೆಯಲ್ಲಿ ಇಳಿಸಿಹೋಗುತ್ತಿದ್ದರು. ಇದರಲ್ಲೇನಿದೆ ... ಅಂತೀರ? ವಿಷಯ ಇರೋದು ನಾನು ಇಳಿದ ... ಅಪ್ಪ ಏನು ಮಾಡುತ್ತಾರೆ ಅನ್ನೋದು. ನಾನು ಇಳಿದನಂತರ ಮೈನ್ ರೋಡ್ ದಾಟಿ, ಕಾಲೇಜು ... ಮುಟ್ಟುವವರೆಗೂ ಅಪ್ಪನ ಕಣ್ಣು ನನ್ನ ಮೇಲೆಯೇ ಇರು... "ಅಪ್ಪಾ ನಾನು ಚಿಕ್ಕವಳಲ್ಲ, ರೋಡ್ ದಾಟಲು ... ಚೆನ್ನಾಗಿ ಗೊತ್ತು, ನಿನ್ನ ಕಾಲೇಜಿಗೆ ತಡ ಆಗುತ್ತೆ ... ಹೋಗು" ಎಂದು ಎಷ್ಟು ಬಾರಿ ಹೇಳಿದರೂ ... ಮಾತನ್ನೇ ಕೇಳುತ್ತಿರಲಿಲ್ಲ. "ಅಲ್ಲಾರೀ, ಕಾರ... ಕೂತುಕೊಂಡು ನಾನು ರೋಡ್ ಕ್ರಾಸ್ ಮಾಡೋ... ನೋಡಿ ಏನ್ ತಾನೆ ಪ್ರಯೋಜನ, ಸಡನ್ ಆಗಿ ಬೈ... ಕಾರೋ, ಬಸ್ಸೋ ಬಂದು ಗುದ್ದಿದ್ರೆ ಏನ್ ... ಮಾಡೋಕಾಗುತ್ತೆ? ಅದರ ಬದ್ಲು ಸುಮ್ನೆ ಕಾಲೇ... ಗೇಟ್ ಹತ್ರಾನೆ ಬಿಟ್ಟಿದ್ರೆ ಟೆನ್ಷನ್ ಕಮ್ಮಿ ಆಗತ್ತ... ಹೀಗೆ ಒಂದಷ್ಟು ದಿನ ಕಳೆದೆವು. ಯಾಕೋ ಪ... ಒಂದು ದಿನ 'ಅಪ್ಪ ಇರೋದಕ್ಕೆ ನಾನು ಧೈರ್ಯ... ಕ್ರಾಸ್ ಮಾಡುತ್ತಿದ್ದೇನೆ. ಅವರಿಲ್ಲದಿದ್ರೆ ನನಗೆ ... ಕಷ್ಟವಾಗುತ್ತದೆಯೋ' ಎಂದು ಮನಸ್ಸು ಎಚ್ಚೆತ್ತುಕೊಂ... ಅಂದು ನಾನು ಹಟ ಹಿಡಿದು, "ಅಪ್ಪಾ ನೀನು ಮೊ... ಹೋಗು, ಇಲ್ಲದಿದ್ರೆ ನಾನು ಕಾಲೇಜಿಗೆ ಹೋಗಲ್ಲ, ... ನಿನ್ ಇಷ್ಟ" ಎಂದು ಹೇಳಿ ಕಾರಿನಿಂದ ಇಳಿದು ... ಅವರ ತಲೆಗೆ ಹುಳ ಬಿಟ್ಟಂತಾಯಿತು. ಬೇರೆ ವಿಧಿಯಿ... ಸೈಡ್ ಮಿರರ್‌ನಲ್ಲಿ ನನ್ನನ್ನೇ ನೋಡುತ್ತಾ ಹೊರ... ಅಬ್ಬಾ!! ಅಪ್ಪನ ಕಾರು ಮರೆಯಾದ ತಕ್ಷಣ ಧೈರ್ಯ... ರೋಡ್ ಕ್ರಾಸ್ ಮಾಡಿದೆ. ಅಂದಿನ ಧೈರ್ಯ ... ಬೆಂಗಳೂರಿನ ಟ್ರಾಫಿಕ್‌ನಲ್ಲಿ ನುಗ್ಗಲು ಸಹಾಯವಾಯಿ...





ಆದರೆ ಅಪ್ಪ ಇಂದಿಗೂ ಬೆಂಗಳೂರಿನ ಮನೆಗೆ ಬ... ನಾನು ಆಫೀಸಿನಿಂದ ಬರುವ ದಾರಿಯನ್ನು ನೋಡ... ಕುಳಿತುಕೊಳ್ಳುತ್ತಾರೆ. ಒಂದು ವಿಶೇಷವಾದ ಸಂದರ್ಭ... ನಿಮ್ಮೊಂದಿಗೆ ಹಂಚಿಕೊಳ್ಳಲೇಬೇಕು. ಒಂದು ದಿನ ... ಅವರ ಫ್ರೆಂಡ್ ಜಿಕೆಆರ್ ಅಂಕಲ್‌ರ ಬ್ರೂಕ್‌ಫೀಲ್ಡ್‌ನಲ್ಲಿ... ಮನೆಗೆ ಬಂದಿದ್ದರು. ಅಂದು ಸಂಜೆ ಆರು ಗಂಟೆಗೆ ... ಮತ್ತು ಅಪ್ಪ ಜಿಕೆಆರ್ ಅಂಕಲ್ ಮನೆಯಲ್ಲಿ ಭೇಟಿಯಾ... ಪ್ಲ್ಯಾನ್ ಇತ್ತು. ಸರಿ, ನಾನು ಆಫೀಸ್ ಮುಗಿಸಿ ... ಗಂಟೆಗೆ ಬಸವನಗುಡಿಯಿಂದ ಹೊರಟೆ. ಆರು ... ಹೊಡೆದದ್ದೇ, ನನ್ನ ಫೋನ್ ಹೊಡೆದುಕೊಳ್ಳ... ಶುರುವಾಯ್ತು. ಇನ್ಯಾರದ್ದು, ನನ್ನ ಅಪ್ಪಂದೇ ... ಖಚಿತವಿತ್ತು. "ಆರು ಗಂಟೆಗೆ ಬರ್ತೀನಿ ಅಂತಿದ... ಎಲ್ಲಿದ್ದೀ" ಎಂದು ಕೇಳಿದರು. "ಆಫೀಸ್ ಬಿಟ್ಟು ಸುಮ... ಒಂದು ಗಂಟೆ ಆಯಿತಪ್ಪಾ, ಇನ್ನೂ ಸಿಲ್ಕ್ ಬೋ... ಟ್ರಾಫಿಕ್‌ನಲ್ಲಿ ಸಿಕ್‌ಹಾಕ್ಕೊಂಡಿದ್ದೀನಿ, ಮುಟ್ಟುವಾಗ ಸುಮ... ಏಳು ಗಂಟೆ ಆಗ್‌ಬಹುದು" ಎಂದೆ. ಸಿಲ್ಕ್ ಬೋ... ಟ್ರಾಫಿಕ್ ಬಿಟ್ಟು ಮಾರತ್‌ಹಳ್ಳಿ ಬ್ರಿಡ್ಜ್ ತಲುಪು... ಸುಮಾರು ಒಂದು ಗಂಟೆ ಹಿಡಿಯಿತು. ಏಳು ... ಆಗಿದ್ದೇ, ಬ್ಯಾಗಿನಿಂದ ಮೊಬೈಲ್ ಹೊರಗೆ ತೆಗೆದು ಕು... ಬಂತು ನೋಡಿ, ಅಪ್ಪನ ಫೋನ್ ಕಾಲ್. "ಏಳು ಗಂ... ಬರ್ತೀನಿ ಅಂದೆ ಎಲ್ಲಿದ್ದೀ" ಎಂದು ಪುನಃ ಕೇಳಿ... ನನಗೆ ಹಸಿವೆ ಆಗುತ್ತಿತ್ತು, ಜೊತೆಗೆ ಅಪ್ಪ ಬೇರೆ ಬೇತಾ... ಹಾಗೆ ಬೆನ್ನು ಹಿಡಿದಿದ್ದು, ನನಗೆ ಕೋಪಾನೆ ಬ... "ಬೆಂಗಳೂರಿನ ಟ್ರಾಫಿಕ್ ಬಗ್ಗೆ ನಿಂಗೆ ಚೆನ್ನಾಗಿ ಗೊ... ತಾನೆ. ಮಾರತ್‌ಹಳ್ಳಿ ಬ್ರಿಡ್ಜ್‌ನಲ್ಲಿದ್ದೀನಿ. ಇನ್ನೇನು ... ಬಂದೆ, ಸ್ವಲ್ಪ ಹೊತ್ತಲ್ಲಿ ಬರುತ್ತೇನೆ" ಎಂದು ಗಟ್ಟಿದನಿ... ಹೇಳಿದೆ. ಮಾರತ್‌ಹಳ್ಳಿ ಬ್ರಿಡ್ಜ್‌ನಿಂದ ಬ್ರೂಕ್‌ಫೀಲ್ಡ್‌ಗೆ ... ನಿಮಿಷದ ಹಾದಿ. ಆದರೆ ಐ.ಟಿ.ಪಿ.ಎಲ್ ಬಸ್ಸುಗಳ ಹ... ನಮಗೆ ಹುಚ್ಚು ಹಿಡಿಸುತ್ತದೆ. ಎಂಟು ಗಂಟೆಯಾದ... ನಾನು ಮನೆಗೆ ಮುಟ್ಟಲಿಲ್ಲ, ನನ್ನ ಕೋಪದ ಅ... ಅಪ್ಪನಿಗಾಗಿತ್ತು, ಹಾಗಾಗಿ ಪುನಃ ಕಾಲ್ ಮಾಡದೆ,

...ಸ್ತಿ ಮಾಡಿ ನಾನು ಬರುವ ದಾರಿಯನ್ನೇ ಕಾಯುತ್ತಿದ್ದರು. ...ರ್ ಅಂಕಲ್ ಕೂಡ "ರೀ ಮೇಸ್ಟ್ರೇ, ನೀವು ಎಷ್ಟು ...ಸಿದರೂ, ನಿಮ್ಮ ಮಗಳು ಟ್ರಾಫಿಕ್ ಕ್ಲಿಯರ್ ... ಮೇಲೇನೇ ಮನೆಗೆ ಬರೋದು. ಸುಮ್ಮನೆ ...ಕೊಳ್ರೀ" ಎಂದು ಬೈದಿದ್ದಾರೆ. ನಾನು ಇಳಿಯುವ ...ಸ್ಟ್ಯಾಂಡ್ ಮುಟ್ಟಲು ಸುಮಾರು 200 ಮೀ. ...ಬಹುದು. ಬಸ್ಸು ಮಾತ್ರ ನಿಂತಲ್ಲೇ ಇದೆ. ಸುಮ್ಮನೆ ... ಪ್ರಯೋಜನವಿಲ್ಲವೆಂದು, ಬಸ್ಸಿನಿಂದ ಇಳಿದು ...ಮ ಕಡೆ ನಡೆದೆ. ದಾರಿಯುದ್ದಕ್ಕೂ ವೋಲ್ವೋ ...ಗಳು ರೈಲು ಬೋಗಿಯ ಹಾಗೆ ಒಂದನ್ನೊಂದು ...ಕ್ಕುವಂತೆ ಸಾಲುಗಟ್ಟಿ ನಿಂತಿದ್ದವು. ಅದರೊಳಗಿದ್ದ ...ಬಿಟಿ ಕಂಪನಿಯ ಎಂಪ್ಲಾಯಿಸ್ ಸ್ಥಿತಿ ನೋಡೋದು ... ಆಲ್ ಟೈಮ್ ಎಂಟರ್‌ಟೈನ್‌ಮೆಂಟ್. ಇಡೀ ... ಕತ್ತೆ ಥರ ದುಡಿದು, ಸಾಯಂಕಾಲದ ಹೊತ್ತಿಗೆ ...ಮ ಹಣ್ಣಾಗಿ ಹೋಗಿರುತ್ತಾರೆ. ಬಸ್ಸಿನಲ್ಲಿ ಕೂತ ತಕ್ಷಣ ...ನವರು, ನಿದ್ದೆಗೆ ಇಳಿದುಬಿಡುತ್ತಾರೆ. ಕೆಲವರು ಇಯರ್ ...ನ್ ಹಾಕಿ ರಿಲ್ಯಾಕ್ಸ್‌ಗಾಗಿ ಹಾಡು ಕೇಳುತ್ತಾರೆ. ಇನ್ನು ...ವರು ಪುಸ್ತಕ ಓದುತ್ತಾರೆ, ಮತ್ತಷ್ಟು ಜನ 'ಪುನಃ ...ಗ ಹೋಗಿ ಅಡುಗೆ ಮಾಡಬೇಕಲ್ಲ' ಎಂಬ ಚಿಂತೆಯಲ್ಲಿ ...ನುಗಿರುತ್ತಾರೆ. ಹೀಗೆ, ಎಲ್ಲಾ ರೀತಿಯ ಜನರನ್ನು ...ಡುತ್ತ ಮನೆಕಡೆ ನಡೆದಿದ್ದೆ. ಒಂದು ಬಸ್ಸಿನಲ್ಲಿದ್ದವರೆಲ್ಲ ...ಬದಿ ತಿರುಗಿ ಏನನ್ನೋ ಕುತೂಹಲದಿಂದ ...ಸುತ್ತಿದ್ದರು. ಅದೇನೆಂದು ತಿಳಿದ ನನಗೆ ಒಂದು ಕ್ಷಣ ... ನಿಂತು ಹೋದ ಅನುಭವವಾಯಿತು. ಮರುಕ್ಷಣವೇ ... ನಗಬೇಕೋ ಅಳಬೇಕೋ ತಿಳಿಯದೆ ತಲೆ ...ಕೊಂಡೆ. ಬಸ್ಸಿನಲ್ಲಿ ಎಲ್ಲರನ್ನು ಆಕರ್ಷಿಸಿದ್ದು ನನ್ನ ...ನ ಉಡುಪು ಮತ್ತು ನಿಂತಿದ್ದ ಭಂಗಿ. ತೂತು ಬಿದ್ದ



...ಬನಿಯನ್ ಮತ್ತು ನೀಲಿ ಪಟ್ಟೆಯ ಪಂಚೆಯನ್ನು ಎತ್ತಿಕಟ್ಟಿ, ...ಟ್ ಕಂಬಕ್ಕೆ ಒಂದು ಕೈಯನ್ನು ಊರಿ, ಇನ್ನೊಂದು ...ಯಲ್ಲಿ ಸಿಗರೇಟನ್ನು ಊದುತ್ತ ಬಸ್‌ಸ್ಟ್ಯಾಂಡ್ ಕಡೆಗೆ ...ಖ ಮಾಡಿ, ನಾನು ಬರುವುದನ್ನೇ ಕಾಯುತ್ತಿದ್ದರು. ... ಸಂದರ್ಭದಲ್ಲಿ ನಾನು ಏನು ಮಾಡಬೇಕಿತ್ತು ಹೇಳಿ? ...ಪ್ಪನ ಪ್ರೀತಿ ನನಗೆ ಅರ್ಥವಾಗತ್ತೆ, ಆದರೆ ಇನ್ನು ಮುಂದೆ ...ಥ ಹುಚ್ಚುತನ ಮಾಡದಿರಲಿ ಎಂದು ಒಂದು ...ಚ್ಚುಮಾತನ್ನು ಆಡಿಬಿಟ್ಟೆ. ಏನೆಂದರೆ, "ಒಳ್ಳೇದಾಯಿತು, ...ನು ಬೆಂಗಳೂರಿನಲ್ಲಿ ಕೆಲಸಕ್ಕೆ ಸೇರಿದ್ದು ನಿನ್ನಿಂದ ದೂರ ...ಹೋದ್ದೇ ಒಳ್ಳೇದು. ಇಲ್ಲದಿದ್ರೆ ಸಾಯಂಕಾಲ ನಿನ್ನ ಗೋಳು ...ಹಾರಿಗಪ್ಪಾ ಬೇಕು" ಎಂದೆ. ನನ್ನ ಮಾತುಗಳು ...ಯೋಜನವಾಗಲಿಲ್ಲ.

ಅದೊಂದು ದಿನ ಬೆಂಗಳೂರಿನಲ್ಲಿ ಧಾರಾಕಾರವಾಗಿ ...ಳೆ ಸುರಿಯಿತು. ಬೆಂಗಳೂರಿನ ಮಳೆಗೆ ಆಗ ನಾನು ...ಹೊಸಬಳು. ಸಾಯಂಕಾಲ ಏಳು ಗಂಟೆಗೆ ಶುರುವಾದ ...ಳೆ ರಾತ್ರಿ 9.30ರ ತನಕ ಸುರೀತಾನೇ ಇತ್ತು, ರೋಡಿನಲ್ಲಿ ...ರು ಎರಡು ಅಡಿ ನಿಂತುಬಿಟ್ಟಿತ್ತು, ಗಾಳಿಗೆ ಮರಗಳು ...ರಾಶಿ ಬಿದ್ದಿದ್ದರಿಂದ ವಾಹನಗಳ ಸಂಚಾರ ...ಸ್ತವ್ಯಸ್ತಗೊಂಡಿತ್ತು, ನನ್ನ ಲೇಡಿ ಮ್ಯಾನೇಜರ್ ತಮ್ಮ ...ಟೀಮಿನಲ್ಲಿ ಇರುವ ಎಲ್ಲಾ ಎಂಪ್ಲಾಯಿಗಳನ್ನು ಆಫೀಸ್‌ನ ...ರ್‌ನಲ್ಲಿ ಅವರವರ ಮನೆಗೆ ತಲುಪಿಸುವ ಭರವಸೆಯನ್ನು ...ಟ್ಟರು. ನನ್ನ ಪರಿಸ್ಥಿತಿಯನ್ನು ಅಪ್ಪ-ಅಮ್ಮನಿಗೆ ವಿವರಿಸಿ ...ೇಳಿ, ಹೆದರಬೇಡಿ ಎಂದು ಧೈರ್ಯ ಹೇಳಿದ್ದೆ. ನನ್ನ ...ಗ್ ಒಬ್ಬಳದ್ದು ಮರುದಿನ ಚೆನ್ನೈನಲ್ಲಿ ಎಂಗೇಜ್‌ಮೆಂಟ್ ...ತ್ತು, ಅವಳಿಗೆ ದಿಕ್ಕೇ ತೋಚದೆ ಕಣ್ಣೀರಿಟ್ಟಳು. ಹಾಗಾಗಿ ...ಮ್ಮ ಮ್ಯಾನೇಜರ್ ಮೊದಲು ಅವಳನ್ನು ವಿಜಯನಗರಕ್ಕೆ ...ಹಿಸಿ, ನಂತರ ನನ್ನನ್ನು ಪಿ.ಜಿ. ಹತ್ತಿರ ಬಿಡುವಷ್ಟರಲ್ಲಿ ...ಗಂಟೆ ಹೊಡೆದಿತ್ತು, ಅದರ ಮಧ್ಯೆ ಸುಮಾರು ಹನ್ನೊಂದು ...ಮೊಮ್ಮೆ, ನನ್ನ ಮೊಬೈಲ್ ಲೋ ಬ್ಯಾಟರಿ ತೋರಿಸುತ್ತಿತ್ತು, ...ಅಮ್ಮ ಚಿಂತೆಗೀಡಾಗಬಾರದೆಂದು ಅವರಿಗೆ ಫೋನ್ ...ಮಾಡಿ, "ಅರ್ಧ ಗಂಟೆಯಲ್ಲಿ ನಾನು ಪಿ.ಜಿ. ಮುಟ್ಟುತ್ತೀನಿ. ಮೊಬೈಲ್‌ನಲ್ಲಿ ಚಾರ್ಜ್ ಕಮ್ಮಿ ಇದೆ, ಒಂದು ವೇಳೆ ಸ್ವಿಚ್ ಆಫ್ ಆದರೆ ಹೆದರಬೇಡಿ, ಪಿ.ಜಿ. ಮುಟ್ಟಿದ ಕೂಡಲೇ ಫೋನ್ ಮಾಡುತ್ತೇನೆ" ಎಂದು ಹೇಳಿದ್ದೆ. ಅಬ್ಬಾ!!! ಅಂತೂ ನನ್ನ ಪಿ.ಜಿ ಮುಟ್ಟಿದ ಕೂಡಲೇ ನಿಟ್ಟುಸಿರು ಬಿಟ್ಟಿದ್ದೆ, ನಾನು ಕಾರ್ ಇಳಿದಿದ್ದೇ ದೊಡ್ಡ ಶಾಕ್ ಒಂದು ಕಾದಿತ್ತು, ಇಡೀ ಪಿ.ಜಿ.ಯವರು ನನ್ನ ಆಗಮನಕ್ಕಾಗಿ ನಿದ್ದೆಗೆಟ್ಟು ಕಾಯುತ್ತಿದ್ದರು. ನಾನು ಪಿ.ಜಿ. ಮುಟ್ಟುವ ಅರ್ಧ ಗಂಟೆ ಮೊದಲು ಅಪ್ಪ ದೊಡ್ಡ ರಾದ್ಧಾಂತವನ್ನೇ ಮಾಡಿದ್ದರು. ನನ್ನ ಎಲ್ಲಾ ಫ್ರೆಂಡ್ಸ್ ಮತ್ತು ರೂಮ್‌ಮೇಟ್‌ಗಳಿಗೆ ಫೋನ್ ಮಾಡಿ ಟೆನ್ಶನ್ ಕ್ರಿಯೇಟ್ ಮಾಡಿದ್ದರು. ನನ್ನ ಅಪ್ಪನ ಸ್ವಭಾವ ಗೊತ್ತಿದ್ದ ಎಲ್ಲರೂ ನಿದ್ದೆ ಕಣ್ಣಿನಲ್ಲಿ ನನಗಾಗಿ ಪಿ.ಜಿ. ಗೇಟ್‌ನಲ್ಲಿ ಕಾಯುತ್ತಿದ್ದರು.

ತುಂಬಾ ಸುಸ್ತಾಗಿ ಹೋಗಿದ್ದರಿಂದ, ಇದನ್ನು ಸಹಿಸದೆ ನನಗೆ ರೇಜಿಗೆ ಆಗಿಹೋಯಿತು. ಅಪ್ಪನಿಗೆ ಫೋನ್ ಮಾಡಿದರೆ, ಅವರು ನನ್ನ ಯಾವ ಮಾತುಗಳನ್ನೂ ಸಮಾಧಾನದಲ್ಲಿ ಕೇಳುವ ಸ್ಥಿತಿಯಲ್ಲೇ ಇರಲಿಲ್ಲ, "ಯೂ ಗೇವ್ ಮಿ ಟೆನ್ಶನ್, ಕೀಪ್ ದ ಕಾಲ್" ಎಂದು ಆಂಗ್ಲ ಭಾಷೆಯಲ್ಲೇ ಬೈದರು. ಆಗ ನನ್ನ ಕೋಪ ನೆತ್ತಿಗೆ ಏರಿತು, "ಯೂ ಬೆಟರ್ ಕೀಪ್ ದ ಕಾಲ್" ಎಂದು ಫೋನ್ ಕಟ್ ಮಾಡಿದೆ. ಮಲಗುವ ಮುನ್ನ ಅಪ್ಪ ಅಮ್ಮನ ಜೊತೆಗೆ ಏನೇ ಮನಸ್ತಾಪಗಳಿದ್ದರೂ ನನಗೆ ನಿದ್ದೆ ಬರುವುದಿಲ್ಲ, ಆದರೆ ಅವತ್ತು ನನ್ನ ಯಾವುದೇ ತಪ್ಪು ಇಲ್ಲದ್ದರಿಂದ ಚೆನ್ನಾಗಿ ನಿದ್ದೆ ಹೊಡೆದೆ. ಮರುದಿನ ಬೆಳಗ್ಗೆ ಬೆಂಗಳೂರಿನ ಮಳೆಯ ಸುದ್ದಿ ದಿನಪತ್ರಿಕೆಯಲ್ಲಿ ಓದಿ, ಅಪ್ಪನಿಗೆ ನನ್ನ ಪರಿಸ್ಥಿತಿ ಅರ್ಥವಾಯಿತು. ನಾನು ಏಳುವ ಮುಂಚೆ ಫೋನ್ ಮಾಡಿ "ಮಗಳೇ, ಸುಸ್ತಾಗಿದ್ಯಾ, ಇನ್ನೂ ಸ್ವಲ್ಪ ಹೊತ್ತು ಮಲಗಿಕೋ" ಎಂದರು. ನಾನು ಹುಸಿನಕ್ಕು, 'ನನ್ನ ಅಪ್ಪನನ್ನು ಎಂದಿಗೂ ತಿದ್ದಲು ಸಾಧ್ಯವಿಲ್ಲ' ಅಂದುಕೊಂಡೆ. ಅಂದಿನಿಂದ ಯಾವ ಹೊಸ ಪಿ.ಜಿ.ಗೆ ಶಿಫ್ಟ್ ಮಾಡಿದರೂ, ನನ್ನ ಯಾವ ರೂಮ್‌ಮೇಟ್‌ಗಳ ಫೋನ್ ನಂಬರ್ ಅಪ್ಪನಿಗೆ ಕೊಡುತ್ತಿರಲಿಲ್ಲ, ಹಾಗಾಗಿ, ಒಂದಷ್ಟು ದಿನ ನೆಮ್ಮದಿಯಿಂದ ರೂಂ ಸೇರುತ್ತಿದ್ದೆ. ಆದರೆ ಈಗ, ಪುನಃ ಅದೇ ಸ್ಥಿತಿಗೆ ಸಿಲುಕಿದ್ದೇನೆ. ನನ್ನ ಸಂಗಾತಿ ರಜಿತ್‌ನ ಕೆಲವೊಂದು ಸ್ವಭಾವ, ನನ್ನ ಅಪ್ಪನ ಸ್ವಭಾವವನ್ನು ಹೋಲುತ್ತದೆ. ಹಾಗಾಗಿ ಅಪ್ಪನ ಪಾರ್ಟ್ ಎರಡನೆಯ ಅವತಾರವನ್ನು ನನ್ನ ಮನೆಯಲ್ಲಿ ನಾನು ದಿನಾ ಅನುಭವಿಸುತ್ತೇನೆ. ವಿಕ್ರಮನಿಗೆ ಒಬ್ಬ ಬೇತಾಳ ಇದ್ದನಂತೆ. ಈ ಕಲಿಯುಗದಲ್ಲಿ ಇಬ್ಬರು ಬೇತಾಳರು ಇರುವ ಲಕ್ಕಿ ಹುಡುಗಿ ನಾನು.


ಎಲ್ಲಾ ಮನುಷ್ಯರೂ ಒಂದೇ ರೀತಿಯ ಸ್ವಭಾವದವರಾಗಿರಲು ಸಾಧ್ಯವಿಲ್ಲ, ನನ್ನ ಅಪ್ಪನ ಸ್ವಭಾವ ಸ್ವಲ್ಪ ಭಿನ್ನವೇ ಸರಿ! ಅಪ್ಪ ಯಾವುದೇ ವಿಷಯವನ್ನಾಗಲೀ, ನೆಗೆಟಿವ್ ಆಗಿ ಯೋಚಿಸಿ, ಪಾಸಿಟಿವ್ ದಿಕ್ಕಿಗೆ ಸಾಗುತ್ತಾರೆ. ಹಾಗಾಗಿ ಕೆಟ್ಟದ್ದಾದಲ್ಲಿ ಎದುರಿಸುವ ಧೈರ್ಯ ಆತನಿಗಿದೆ. ಇವೆಲ್ಲದರ ನಡುವೆ, ಅಮ್ಮನ ಪಾಸಿಟಿವ್ ಆದ ಸಪೋರ್ಟ್ ನನಗೆ ಎಂದಿಗೂ, ಎಲ್ಲಿದ್ದರೂ ಒದಗಿಬರುತ್ತದೆ. ಇದು ನನ್ನ ಜೀವನದಲ್ಲಿ ನನಗೆ ಸಿಕ್ಕಿರುವ ಅಮೂಲ್ಯವಾದ ಕೊಡುಗೆ.

ಇರಲಿ, ಅಪ್ಪನ ನೆಗೆಟಿವ್ ಥಿಂಕಿಂಗ್ ಮತ್ತು ಅಮ್ಮನ ಪಾಸಿಟಿವ್ ಥಿಂಕಿಂಗ್ ಇವೆರಡೂ ಒಂದು ಪ್ರೀತಿಯನ್ನು ತೋರುವ ಬಗೆಯಷ್ಟೆ. ನೀವಿಬ್ಬರೂ ಎಂದಿಗೂ ಬದಲಾಗದೆ ಹೀಗೆಯೇ ಇರಿ.

'ಹ್ಯಾಪಿ ಫಾದರ್ಸ್ ಡೇ ಆ್ಯಂಡ್ ಬಿಲೇಟೆಡ್ ಮದರ್ಸ್ ಡೇ.'

■ ಅರಿಲ್

(ಅರಿಲ್ ಅವರ ತಂದೆ ಪ್ರೊ. ಭೂಮಿಗೌಡ, ತಾಯಿ ಡಾ.ಸುಚಿತ್ರ)



ಅಶ್ವತ್ಥಾಮಾ ಹತಃ ಕುಂಜರಃ

ಕುರುಕ್ಷೇತ್ರ ಯುದ್ಧಭೂಮಿ.

ದ್ರೋಣಾಚಾರ್ಯರದ್ದು ಕೌರವ ಸೇನೆಯ ಸಾರಥ್ಯ.

ಅವರನ್ನು ಯುದ್ಧದಲ್ಲಿ ಸೋಲಿಸುವುದು ಅಸಾಧ್ಯದ ಮಾತು.

ಯುದ್ಧವಿಮುಖರನ್ನಾಗಿ ಮಾಡುವುದು ಏಕೈಕ ಮಾರ್ಗ. ಅವರ ಮಗ ಅಶ್ವತ್ಥಾಮ. ಅವನ ಮರಣದ ಸುದ್ದಿ ಅವರ ಕಿವಿ ಮುಟ್ಟಬೇಕು.

ಆದರೆ ಅಶ್ವತ್ಥಾಮ ಮರಣ ಹೊಂದಿಲ್ಲ!

ಯುದ್ಧದಲ್ಲಿ ಸುಳ್ಳು ಹೇಳುವುದು ಕ್ಷಮಾರ್ಹ.

ಕೃಷ್ಣ ಧರ್ಮರಾಯನಿಗೆ ಹೇಳಿದ- 'ಅಶ್ವತ್ಥಾಮ ಸತ್ತಿದ್ದಾನೆ ಎಂದು ಹೇಳು.'

ಈ ಮಾತನ್ನು ಕೃಷ್ಣನೇ ಹೇಳಬಹುದಿತ್ತು, ಆದರೆ ಜನರು ಅವನ ಮಾತನ್ನು ನಂಬುತ್ತಿರಲಿಲ್ಲ! ಧರ್ಮರಾಯ ಸತ್ಯಸಂಧ. ಆತನ ಮಾತಿಗೆ ಬೆಲೆ.

ಧರ್ಮರಾಯನ ಬಾಯಲ್ಲಿ ಅಸತ್ಯ ನುಡಿಗಳೆ? ಅಸಂಭವ.

ಕೃಷ್ಣನ ಮಾತಿಗೆ ಅವನು ಸಮ್ಮತಿಸಲಿಲ್ಲ.

ಏನು ಮಾಡಬೇಕು ಕೃಷ್ಣ?

ಅವನಿಗೆ ಬೇಕಾಗಿದ್ದುದು ಪಾಂಡವರ ಜಯ. ಕೌರವರ ಸೋಲು. ಮಧ್ಯೆ ದ್ರೋಣಾಚಾರ್ಯರು ಅಡ್ಡಿ ಇದ್ದರು. ಉಪಾಯ ಹೂಡಿದ. ಅಶ್ವತ್ಥಾಮ ಎಂಬ ಆನೆ ಸಾಯುವಂತೆ ನೋಡಿಕೊಂಡ. ಧರ್ಮರಾಯನ ಗಮನಕ್ಕೆ ಇದನ್ನು ತಂದ; 'ನೀನು ಸುಳ್ಳು ಹೇಳಬೇಡ. ಅಶ್ವತ್ಥಾಮ ಎಂಬ ಆನೆ ಸತ್ತಿದೆ ಎಂದು ನಿಜವನ್ನೇ ಹೇಳು' ಅಂದ. ಧರ್ಮರಾಯ 'ಅಶ್ವತ್ಥಾಮಾ ಹತಃ ಕುಂಜರಃ' ಅಂದ. 'ಅಶ್ವತ್ಥಾಮಾ ಹತಃ' ಎಂಬುದು ದ್ರೋಣಾಚಾರ್ಯರ ಕಿವಿಯ ಮೇಲೆ ಬಿದ್ದಿತು. 'ಕುಂಜರಃ' ಕಿವಿಗೆ ಬೀಳುವಷ್ಟರಲ್ಲಿ ಕೃಷ್ಣ ಪಾಂಚಜನ್ಯ ಮೊಳಗಿಸಿದ. ಅದರ ಭೋರ್ಗರೆತದಲ್ಲಿ ಇದು ಮುಳುಗಿಹೋಗಿತ್ತು.

ಇತ್ತೀಚಿನ ಭಾಜಪ ಪ್ರಸಿದ್ಧ ಪುರುಷೋತ್ತಮರ ಪ್ರವರ ಕೇಳಿದಾಗ ಇದು ನೆನಪಾಗುತ್ತದೆ. ಓದಿ ನೋಡಿ.

ಅನಿವಾಸಿ ಭಾರತೀಯ ಅಂದರೆ ಏನು?

ಎಲ್ಲರಿಗೂ ತಿಳಿದಿದೆ.

ಅನಿವಾಸಿ ಪ್ರಧಾನಿ ಎಂದರೆ ಏನು?

ನರೇಂದ್ರ ಮೋದಿ ಪ್ರಧಾನಿ ಆಗುವವರೆವಿಗೂ ಈ ಪದಪುಂಜದ ಬಳಕೆಯೇ ಇರಲಿಲ್ಲ. ಈಗ ಹೆಚ್ಚು ಹೆಚ್ಚು ಬಳಕೆಯಾಗುತ್ತಿದೆ. ಯಾಕೆಂದರೆ ಈ ಪ್ರಧಾನಿಗೆ ಸ್ವದೇಶ ವಾಸಕ್ಕಿಂತ ಪರದೇಶ ವಾಸವೇ ಹೆಚ್ಚು ಆಪ್ಯಾಯಮಾನ. ಇಲ್ಲಿಗಿಂತ ಅಲ್ಲಿಯೇ ಹೆಚ್ಚು ಇರುತ್ತಾರೆ ಎಂಬ ವದಂತಿ.

ನಾಯಿ ಬೊಗಳಿದರೆ ದೇವಲೋಕ ಹಾಳಾಗುವುದಿಲ್ಲ. ಯಾರೋ ನಾಲ್ಕು ಜನ 'ಅನಿವಾಸಿ ಪ್ರಧಾನಿ' ಅಂದಾಕ್ಷಣ ಮೋದಿ ಸಾಮ್ರಾಜ್ಯ ಧರೆಗುರುಳುವುದಿಲ್ಲ. ಆದರೆ ಎಲ್ಲರ ಬಾಯಿಗೆ ಇದು ಆಹಾರ ಆದರೆ ಮೋದಿ ಜನಪ್ರಿಯತೆ(!) ಕುಸಿದು ಬೀಳುತ್ತಿದೆ ಎಂದೇ ಅರ್ಥ. ಇದಕ್ಕೆ ಅವಕಾಶ ನೀಡಬಾರದು. ಇದನ್ನು ತಡೆಯಬೇಕು ಎಂದು ಅಮಿತ್ ಷಾ ಮನಸ್ಸು ಮಾಡಿದರು. ಅಲ್ಲಿ ಇಲ್ಲಿ ಭಾಷಣಕ್ಕೆ ಅವಕಾಶ ಮಾಡಿಕೊಂಡರು. ಸಭಿಕರನ್ನುದ್ದೇಶಿಸಿ 'ಮೋದಿ ಸಾಹೇಬರು ವಿದೇಶ ಪ್ರವಾಸ ಮಾಡುತ್ತಾರೆ ನಿಜ. ಅಷ್ಟಕ್ಕೇ ಅವರನ್ನು 'ಅನಿವಾಸಿ ಪ್ರಧಾನಿ', 'ಹಾರಾಡುವ ಪ್ರಧಾನಿ' ಎಂಬ ಅನಗತ್ಯ ದೂಷಣೆಗಳು ಕೆಲವರಿಂದ ಕೇಳಿಬರುತ್ತಿದೆ. ಇದು ಸಮಂಜಸ ಅಲ್ಲ. ಹಿಂದಿನ ಪ್ರಧಾನಿಗಳ ಹಾಗೇ ಇವರು ನಡೆದುಕೊಂಡಿದ್ದಾರೆ. ಮನಮೋಹನ್‌ಸಿಂಗ್ ಮಾಡಿದ್ದಷ್ಟೇ ಪ್ರವಾಸವನ್ನು ಮೋದಿಯವರೂ ಮಾಡಿದ್ದಾರೆ' ಎಂದು ಹೇಳುತ್ತಿದ್ದಾರೆ. ಅವರು ಮಾಡಿದ್ದು ಯಾಕೆ ಯಾರಿಗೂ ಎಣಿಸುತ್ತಿರಲಿಲ್ಲ, ಇವರು ಮಾಡಿರುವುದು ಎಲ್ಲರ ಕಣ್ಣು ಕುಕ್ಕುವಂತೆ ಇರುತ್ತದಲ್ಲ ಎಂದವರಿಗೆ 'ಮನಮೋಹನ್ ಸಿಂಗ್ ಅವರು ವಿದೇಶಗಳಲ್ಲಿನ ಭಾರತೀಯರನ್ನು ಭೇಟಿ ಮಾಡುತ್ತಲೇ ಇರಲಿಲ್ಲ, ಇವರು ಎಲ್ಲರೊಡನೆ ಬೆರೆತು ಮಾತನಾಡುತ್ತಾರೆ. ಅದಕ್ಕೆ ಎಲ್ಲರಿಗೂ ಎದ್ದು ಕಾಣುತ್ತೆ' ಎಂದು ಸಮಜಾಯಿಷಿ ನೀಡುತ್ತಿದ್ದಾರೆ.

ಆದರೆ ಒಂದು. ಷಾ ಸಾಹೇಬರು ಮೋದಿಯವರೂ ಮನಮೋಹನ್ ಸಿಂಗ್ ಅವರಷ್ಟೇ ವಿದೇಶ ಪ್ರವಾಸ ಮಾಡಿದ್ದಾರೆ ಎಂದು ಹೇಳುತ್ತಿದ್ದಾರೆಯೇ ಹೊರತು ಎಷ್ಟು ಅವಧಿಲಿ ಎಂದು ಹೇಳುತ್ತಿಲ್ಲ! ಅವರ ಹತ್ತು ವರ್ಷ ಪ್ರವಾಸ ಮಾಡಿದಷ್ಟನ್ನು ಇವರು ಒಂದೇ ವರ್ಷದಲ್ಲಿ ಮಾಡಿರಬಹುದು!

ಇದನ್ನು ನೋಡಿದಾಗ 'ಅಶ್ವತ್ಥಾಮಾ ಹತಃ' ನಂತಾಗುತ್ತದಲ್ವಾ.

* * * *

ಕಾಮರಾಜರ ಜನ್ಮ ಜಯಂತಿ.

ಮುಂದಿನ ವರ್ಷ ತಮಿಳುನಾಡಿನಲ್ಲಿ ಚುನಾವಣೆ. ಇದನ್ನು ಆಚರಿಸುವ ಅನಿವಾರ್ಯತೆ ಅಲ್ಲಿನ ಭಾಜಪಗೆ.

ಕೇಂದ್ರ ಸಚಿವ ವೆಂಕಯ್ಯನಾಯ್ಡುಗಾರು ಮುಖ್ಯ ಅತಿಥಿ.

ಕಾಮರಾಜರ ಹಾರ ಹಾಕಿದ್ದ ಫೋಟೋಗೆ ಊದುಕಡ್ಡಿ ಬೆಳಗಿದರು ನಾಯ್ಡುಗಾರು. ನಂತರ ಅವರ ಭಾಷಣ.

ಕಾಮರಾಜರು ಮೋದಿಯವರಂತೆ ಬಡಕುಟುಂಬದಿಂದ ಬಂದವರು. ಸ್ವಸಾಮರ್ಥ್ಯದಿಂದ ಉನ್ನತಿ ಪದವಿಗೇರಿದರು. ಕಾಮರಾಜರು ತಮಿಳುನಾಡಿನ ಮುಖ್ಯಮಂತ್ರಿ ಆದರು. ಮೋದಿ ಪ್ರಧಾನಿ ಆದರು.

ಇಬ್ಬರೂ ಹಿಂದುಳಿದ ವರ್ಗಕ್ಕೆ ಸೇರಿದವರು. ಕಾಮರಾಜರು ತಮಿಳುನಾಡಿನ ಮೊದಲ ಹಿಂದುಳಿದ ವರ್ಗದ ಮುಖ್ಯಮಂತ್ರಿಯಾದರೆ ಮೋದಿ ಅದೇ ಹಿಂದುಳಿದ ವರ್ಗದ ಪ್ರಧಾನಿ ಆಗಿದ್ದಾರೆ.

ಇದು ವೆಂಕಯ್ಯ ನಾಯ್ಡು ಅವರ ಭಾಷಣದ ಸಾರಾಂಶ.

ಮೋದಿ-ಕಾಮರಾಜರಿಗೆ ಇನ್ನೊಂದು ಹೋಲಿಕೆ ಇದೆ.

ಕಾಮರಾಜರು ಮದುವೆಯಾಗದ ಬ್ರಹ್ಮಚಾರಿ.

ಮೋದಿ ಹೆಂಡತಿ ಬಿಟ್ಟ ಬ್ರಹ್ಮಚಾರಿ!

ಇದನ್ನು ಹೇಳಲಿಲ್ಲ ಅವರು.

ಇದನ್ನು ಕೇಳಿದಾಗ 'ಅಶ್ವತ್ಥಾಮಾ ಹತಃ' ಜ್ಞಾಪಕಕ್ಕೆ ಬಂದರೆ ತಪ್ಪಾ....

■ ಎಚ್ಚೆಲ್ಕೆ

ನೆರೆಮನೆಯ ದುಃಖಿ

ಜುಲೈ ಹನ್ನೆರಡರಂದು ನ್ಯೂಯಾರ್ಕಿನಿಂದ ಅಬುಧಾಬಿ ಮೂಲಕ ಬೆಂಗಳೂರಿಗೆ ಬರುವಾಗ ಪಾಕಿಸ್ತಾನಿ ಮಹಿಳೆಯೊಬ್ಬಳು ವಿಮಾನದಲ್ಲಿ ಪಕ್ಕದಲ್ಲೇ ಕುಳಿತಿದ್ದಳು. ಕರಾಚಿಯ ಮಹಿಳಾ ಕಾಲೇಜೊಂದರಲ್ಲಿ ಇಂಗ್ಲಿಷ್ ಪ್ರಾಧ್ಯಾಪಕಿಯಾಗಿ ನಿವೃತ್ತರಾದ ಅವಳು ಕೆಲ ತಿಂಗಳು ನ್ಯೂಯಾರ್ಕ್‌ನಲ್ಲಿನ ಮಗಳ ಮನೆಯಲ್ಲಿದ್ದು ಈಗ ಪೇಷಾವರದಲ್ಲಿರುವ ಇನ್ನೊಬ್ಬ ಮಗಳ ಮನೆಗೆ ಹೊರಟಿದ್ದಳು. ವಿಮಾನ ಗಂಟೆಗೆ ಸಾವಿರ ಕಿಲೊಮೀಟರ್ ವೇಗದಲ್ಲಿ ಚಲಿಸುತ್ತಿದ್ದರೂ ನ್ಯೂಯಾರ್ಕ್‌ನಿಂದ ಅಬುಧಾಬಿಗೆ 13 ಗಂಟೆಗಳ ಪಯಣ. ಪ್ರತಿಯೊಬ್ಬರ ಮುಂದೆ ಕುರ್ಚಿಗೆ ಅಂಟಿಕೊಂಡಿರುವ ಪುಟ್ಟ ಮಾನಿಟರ್‌ನಲ್ಲಿ ಕನ್ನಡವೂ ಸೇರಿದಂತೆ ವಿವಿಧ ಭಾಷೆಗಳ ಸಿನಿಮಾಗಳನ್ನು ನೋಡಬಹುದು. ಮಕ್ಕಳ ಎನಿಮೇಷನ್ ಚಿತ್ರಗಳ ಚಾನಲ್‌ಗಳೂ ಸೇರಿದಂತೆ ಹತ್ತಾರು ಚಾನಲ್‌ಗಳು ದೀರ್ಘಪಯಣದ ಬೇಸರ ತಗ್ಗಿಸುವುದಕ್ಕಾಗಿ ಇದ್ದವು. ಗಗನಸಖಿಯರು ಹತ್ತಾರು ಸಲ ನೀರು, ಜೂಸು, ಕಾಫಿ, ತಿಂಡಿ, ಊಟ ಮುಂತಾದ ಕಾರಣಗಳಿಗಾಗಿ ಬರುತ್ತಲೇ ಇದ್ದರು. ವಿಮಾನದಲ್ಲಿ ಹಾಗೂ ಹೀಗೂ ಸಮಯ ಕಳೆಯುವುದೇ ಜೀವನದ ಗುರಿಯಾಗಿತ್ತು.

ಬಹಳ ಹೊತ್ತಿನವರೆಗೆ ಸುಮ್ಮನೆ ಕುಳಿತಿದ್ದ ಆ ಪಾಕಿಸ್ತಾನಿ ಮಹಿಳೆಗೆ ಸಿನಿಮಾ ನೋಡಬೇಕೆನಿಸಿತು. ಬಟನ್‌ಗಳ ಗೊಂದಲದಿಂದಾಗಿ ಸಹಾಯ ಕೇಳುವುದರ ಮೂಲಕ ಮಾತು ಆರಂಭಿಸಿದಳು. ನಾನು ಅದು ಇದು ಮಾತನಾಡುತ್ತ ಪಾಕಿಸ್ತಾನದಲ್ಲಿ ಪರಿಸ್ಥಿತಿ ಹೇಗಿದೆ ಎಂದು ಕೇಳಿದೆ. ಅವಳು ಗಾಬರಿಯಾಗಿ "ಬಹಳ ಮೆಲುದನಿಯಲ್ಲಿ ಕೇಳಿ; ನಮ್ಮ ಹಿಂದೆ ಕುಳಿತವರು ಐಎಸ್‌ಐಎಸ್ ಏಜೆಂಟರಾಗಿರಬಹುದು" ಎಂದಾಗ ನನ್ನ ಕುತೂಹಲ ಹೆಚ್ಚಾಯಿತು. ಮೆಲುದನಿಯಲ್ಲೇ ಕೇಳತೊಡಗಿದೆ. "ಆ ಕಿಟಕಿಯ ಪಕ್ಕದಲ್ಲಿ ಕುಳಿತಿರುವ ಮಹಿಳೆಯನ್ನು ನೋಡಿ. ಆಕೆಗೆ ಅಕ್ಷರ ಜ್ಞಾನವಿಲ್ಲವೆಂಬುದನ್ನು ಆಕೆಯ ಮುಖ ನೋಡಿಯೇ ಹೇಳುತ್ತೇನೆ. ಐಎಸ್‌ಐಎಸ್ ನೀಚರು ಅಂಥ ವಯಸ್ಸಾದ ನಿರಕ್ಷರಿ ಮಹಿಳೆಯರನ್ನೂ ತಮ್ಮ ದುಷ್ಕೃತ್ಯಗಳಿಗೆ ಉಪಯೋಗಿಸಿಕೊಳ್ಳುತ್ತಾರೆ. ಅವರು ಮನುಷ್ಯರೇ ಅಲ್ಲ, ಅಂದಮೇಲೆ ಮುಸ್ಲಿಮರು ಹೇಗಾದಾರು? ಕರಾವಳಿ ನಗರವಾದ ಕರಾಚಿ ಅವರ ಭಯದ ನೆರಳಲ್ಲಿ ಬದುಕುತ್ತಿದೆ. ಅವರು ಕರಾಚಿಯ ಗುಡ್ಡಗಾಡು ಪ್ರದೇಶಗಳಲ್ಲಿನ ಗುಹೆಗಳಲ್ಲಿ ವಾಸಿಸುತ್ತ ಒಮ್ಮಿಂದೊಮ್ಮೆಲೇ ದಾಳಿ ನಡೆಸಿ ಸಿಕ್ಕಿದ್ದೆಲ್ಲವನ್ನೂ ದೋಚಿಕೊಂಡು ಹೋಗುತ್ತಾರೆ. ಅವರಿಗೆ ಕೊಲ್ಲುವುದು ಆಟವಾಗಿದೆ. ಕೊಲೆಗೀಡಾದವರ ರುಂಡಗಳನ್ನು ಮೈದಾನದಲ್ಲಿ ಎಸೆದು ಫುಟ್‌ಬಾಲ್‌ನಂತೆ ಆಡಲೂ ಹೇಸುವುದಿಲ್ಲ, ಮಹಿಳೆಯರು ಹೊರಗೆ ಹೋಗಬಾರದು, ನೌಕರಿ ಮಾಡಬಾರದು, ಶಿಕ್ಷಣವನ್ನು ಪಡೆಯಬಾರದು, ಅವರ ಸ್ಥಾನವೇನಿದ್ದರೂ ನಾಲ್ಕು ಗೋಡೆಗಳ ಮಧ್ಯೆ ಎಂಬುದನ್ನು ಅವರಿಗೆ ಮನವರಿಕೆ ಮಾಡುವ ಉದ್ದೇಶದಿಂದಲೂ ಅವರು ಹೀಗೆ 'ತಪ್ಪಿತಸ್ಥ' ಮಹಿಳೆಯರ ಮೇಲೆ ಎಲ್ಲ ರೀತಿಯ ದೌರ್ಜನ್ಯ ಎಸಗಲೂ ಹಿಂಜರಿಯುವುದಿಲ್ಲ, ನಾವು ಮಹಿಳೆಯರು ಕರಾಚಿಯಲ್ಲಿ ಭಯದಿಂದ ಬದುಕುತ್ತಿದ್ದೇವೆ" ಎಂದು ನೋವನ್ನು ತೋಡಿಕೊಂಡಳು.

"ಬಾಲಕಿ ಮಲಾಲಾ ಎಂಥ ಧೈರ್ಯವಂತೆ. ಅವಳ ಪ್ರತಿ ಮಾತಿನಲ್ಲೂ ಎಷ್ಟೊಂದು ಸತ್ವವಿದೆ. ಅವಳು ನಮಗೆ ಸ್ಫೂರ್ತಿಯಾಗಿದ್ದಾಳೆ" ಎಂದು ಹೇಳಿದ ಆಕೆ ಶಿಕ್ಷಣದಿಂದ ಹೊಸ ವ್ಯಕ್ತಿತ್ವ ರೂಪುಗೊಳ್ಳುವುದರ ಬಗ್ಗೆ ವಿವರಿಸಿದಳು.

"ಈ ಉಗ್ರರು ಕೆಲ ತಿಂಗಳುಗಳ ಹಿಂದೆ ಶಾಲೆಯೊಂದರಲ್ಲಿ ಅಷ್ಟೊಂದು ಮಕ್ಕಳನ್ನು ನಿರ್ದಯದಿಂದ ಕೊಂದರು. ಉಗ್ರರ ದಾಳಿಯಿಂದ ತಪ್ಪಿಸಿಕೊಳ್ಳಬೇಕೆಂದು ಆ ಶಾಲೆಯ ಮುಖ್ಯೋಪಾಧ್ಯಾಯಿನಿಗೆ ಮಕ್ಕಳು ಅಂಗಲಾಚಿದರೂ ಆಕೆ ಒಂದಿಂಚೂ ಹಿಂದೆ ಸರಿಯಲಿಲ್ಲ, 'ನಿಮ್ಮನ್ನು ಬಿಟ್ಟು ನಾನು ಓಡಿಹೋಗಬೇಕೇ' ಎಂದು ಆ ಮಕ್ಕಳ ಜೊತೆಗೇ ಸಾವಿಗೀಡಾದಳು. ಇವೆಲ್ಲ ನಮ್ಮ ಕರುಳು ಹಿಂಡುವಂಥ ಘಟನೆಗಳು" ಎಂದು ಮರುಗಿದಳು.

"ಈ ಎಲ್ಲ ಅನ್ಯಾಯಕ್ಕೆ ಬಹುಪಾಲು ಮುಲ್ಲಾಗಳ ಕುಮ್ಮಕ್ಕಿದೆ. ಅವರಲ್ಲಿ ಅನೇಕರು ಶ್ರೀಮಂತರಿದ್ದಾರೆ. ವ್ಯವಹಾರವನ್ನೂ ನಡೆಸುತ್ತಾರೆ. ಆದರೆ ಮೂಲಭೂತವಾದವನ್ನು ರಕ್ಷಿಸದೆ ತಮ್ಮ ಅಸ್ತಿತ್ವ ಕಾಪಾಡಿಕೊಳ್ಳಲಿಕ್ಕಾಗದು ಎಂಬ ಭ್ರಮೆಯಿಂದ ಅವರು ಹೊರಗೆ ಬರಲಿಕ್ಕೆ ಸಾಧ್ಯವೇ ಇಲ್ಲದಂಥ ಸ್ಥಿತಿಯಲ್ಲಿದ್ದಾರೆ. ಈ ಉಗ್ರರನ್ನು ಎದುರಿಸುವ ಶಕ್ತಿ ಸರ್ಕಾರಕ್ಕೂ ಇಲ್ಲ, ವಿರೋಧ ಪಕ್ಷಗಳಿಗೂ ಇಲ್ಲ, ಆಡಳಿತ ಪಕ್ಷವನ್ನು ತೀವ್ರವಾಗಿ ವಿರೋಧಿಸುವ ಇಮ್ರಾನ್ ಖಾನ್ ಉಗ್ರರ ವಿಚಾರದಲ್ಲಿ ಜಾಣಕುರುಡರಾಗಿದ್ದಾರೆ. ಬೇನಜೀರ ಭುಟ್ಟೋರ ಗಂಡ ಜರದಾರಿಯಂತೂ ನಾಜೂಕಯ್ಯನಂತೆ ರಾಜಕೀಯ ಮಾಡುತ್ತ ಕಾಲಕಳೆಯುತ್ತಿದ್ದಾನೆ. ಆಕೆಯ ಮಗ ಒಬ್ಬನೇ ಈ ಉಗ್ರರನ್ನು ನೇರವಾಗಿ ಟೀಕಿಸುವ ಧೈರ್ಯ ತಾಳಿದ್ದಾನೆ. ಉಗ್ರಗಾಮಿಗಳು ಅವನಿಗೆ ಪದೆ ಪದೆ ಕೊಲೆ ಬೆದರಿಕೆ ಹಾಕುತ್ತಿದ್ದರೂ ಆತ ಹಿಂಜರಿದಿಲ್ಲ, ಬಲೂಚಿಸ್ಥಾನದವರು ಪ್ರತ್ಯೇಕ ರಾಷ್ಟ್ರವಾಗಲು ಹವಣಿಸುತ್ತಿದ್ದಾರೆ. ಪಶ್ತೂನಿಗಳು ತಮ್ಮದೇ ಗುಂಗಿನಲ್ಲಿದ್ದಾರೆ. ನವಾಜ್ ಶರೀಫ್‌ರ ಸಹೋದರ ಸಿಂಧ್ ಪ್ರಾಂತದ ಮುಖ್ಯಮಂತ್ರಿ. ಅವರು ಮಾತ್ರ ಭ್ರಷ್ಟಾಚಾರ ಮತ್ತು ಉಗ್ರಗಾಮಿಗಳ ಉಪಟಳವನ್ನು ತಡೆಯುವ ಪ್ರಯತ್ನ ಮಾಡುತ್ತಿದ್ದಾರೆ. ಸಿಕ್ಕಷ್ಟು ಹುಡ್ಕೊ ಯೋಜನೆಯಲ್ಲಿರುವ ನವಾಜ್ ಶರೀಫ್ ಮತ್ತು ನಿಮ್ಮ ಪ್ರಧಾನಿ ಮಧ್ಯೆ ಆದ ಒಪ್ಪಂದದ ಪ್ರಕಾರ ವಸ್ತುಗಳ ಆಮದು ಹೆಚ್ಚಾಗಿದೆ. ಅದೇನೇ ಇದ್ದರೂ ಶರೀಫ್‌ರ ಮುಸ್ಲಿಂಲೀಗ್‌ಗಿಂತಲೂ ಭುಟ್ಟೋರ ಪೀಪಲ್ಸ್ ಪಾರ್ಟಿ ಎಷ್ಟೋ ಉತ್ತಮ. ನನ್ನ ಮತ ಪೀಪಲ್ಸ್ ಪಾರ್ಟಿಗೆ. ಆದರೆ ನಾನು ರಾಜಕೀಯದಲ್ಲಿ ಅವಕಾಶ ಸಿಕ್ಕರೂ ಒಪ್ಪಿಕೊಳ್ಳಲಿಲ್ಲ, ಅಲ್ಲಿರುವುದು ಹರಾಮ್. ಅಂಥ ಭ್ರಷ್ಟರ ಮಧ್ಯೆ ಧರ್ಮದ ಭಯವುಳ್ಳ ನನಗೆ ಇರಲಿಕ್ಕಾಗದು.. ಅಪ್ರಾಮಾಣಿಕವಾದುದು ನನಗೆ ಹಿಡಿಸುವುದಿಲ್ಲ" ಎಂದು ರಾಜಕೀಯ ವ್ಯವಸ್ಥೆಯ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದಳು.

"ಪ್ರಾಮಾಣಿಕರು ಹೀಗೆ ಹಿಂಜರಿಯುವ ಕಾರಣದಿಂದಲೇ ಭ್ರಷ್ಟರು ರಾಜಕೀಯದಲ್ಲಿ ವಿಜೃಂಭಿಸುತ್ತಾರೆ" ಎಂದು ನಾನು ಹೇಳಿದ್ದು ಅವಳ ತಲೆಗೆ ಹೋಗಲೇ ಇಲ್ಲ, ನನ್ನ ಮನಸ್ಸು ಹಿಂದೆ ಹಿಂದೆ ಹೋಗುತ್ತಿತ್ತು. 1999 ಮೇ ತಿಂಗಳಲ್ಲಿ ನೆದರ್‌ಲ್ಯಾಂಡ್ಸ್‌ನ ರಾಜಧಾನಿ ಹೇಗ್‌ನಲ್ಲಿ 'ಹೇಗ್ ಪೀಸ್ ಎಕಾರ್ಡ್'ನ ದ್ವಿಶತಮಾನೋತ್ಸವದಲ್ಲಿ ಭಾಗವಹಿಸುವ ಅವಕಾಶ ಸಿಕ್ಕಿತ್ತು. ಅಲ್ಲಿನ ರಾಜ 200 ವರ್ಷಗಳ ಹಿಂದೆ ನೆರೆಯ ದೇಶದೊಂದಿಗೆ ಶಾಂತಿಯ ಒಪ್ಪಂದ ಮಾಡಿಕೊಂಡು ಯುದ್ಧ ತಪ್ಪಿಸಿದ್ದರ ನೆನಪಿಗಾಗಿ ಆ ಅಂತರರಾಷ್ಟ್ರೀಯ ಸಮ್ಮೇಳನ ಏರ್ಪಡಿಸಲಾಗಿತ್ತು, ಅದು ಐರೋಪ್ಯ ಖಂಡದ ಮೊದಲ ಶಾಂತಿಯ ಒಪ್ಪಂದ ಆಗಿದ್ದರಿಂದ ಆ ಸಮ್ಮೇಳನದಲ್ಲಿ ನೂರು ದೇಶಗಳ 8000 ಜನ ಭಾಗವಹಿಸಿದ್ದರು. ಪಾಕಿಸ್ತಾನದಿಂದ ಕಾರ್ಮಿಕ ನಾಯಕ ಕರಾಮತ್ ಅಲಿ ಅವರ ನೇತೃತ್ವದಲ್ಲಿ 200 ಮಂದಿ ಬಂದಿದ್ದರು. ಅವರಲ್ಲಿ ಬಹಳಷ್ಟು ಮಂದಿ ಮಹಿಳೆಯರಿದ್ದರು. ಕೆಲವು ಹಿಂದೂ ಮಹಿಳೆಯರೂ ಇದ್ದರು. ಅವರಲ್ಲಿನ ಬಹುಪಾಲು ಮಹಿಳೆಯರು ಎನ್.ಜಿ.ಒ.ಗಳಲ್ಲಿ ಕಾರ್ಯಕರ್ತರಾಗಿದ್ದರಿಂದ ಅವರಲ್ಲಿ ಹೊಸತನ ಮತ್ತು ಧೈರ್ಯವಿತ್ತು, ಅವರಲ್ಲಿ ಮೂಲಭೂತವಾದಿಗಳ ಬಗ್ಗೆ ತೀವ್ರ ಅಸಮಾಧಾನವಿತ್ತು, ಒಬ್ಬ ಯುವತಿ ತನ್ನ ಅನುಭವ ಹೇಳಿದಳು. "ರಸ್ತೆಯಲ್ಲಿ ಹೋಗುವಾಗ ಒಬ್ಬ ಮುಲ್ಲಾ ಎದುರಾಗಿ 'ನೀನೇಕೆ ಬುರ್ಖಾ ಧರಿಸಿಲ್ಲ' ಎಂದು ಗದರಿಸಿದ. ಆಗ ನಾನು ಏನೂ ಮಾತನಾಡಲಿಲ್ಲ, ಆತನ ಗಡ್ಡ ಹಿಡಿದು ಮುಖಕ್ಕೆ ಹೊಡೆಯತೊಡಗಿದೆ. ಆಗ ಆತ ಕೊಸರಿಕೊಂಡು ಓಡಿಹೋದ" ಎಂದು ನಕ್ಕಿದ್ದಳು.


ಇನ್ನೊಬ್ಬಳು ಹೇಳಿದಳು: "ಈ ಮುಷರಫ್ ಭಾರತದ ಮೇಲೆ ಯುದ್ಧ ಆರಂಭಿಸುವ ತರಾತುರಿಯಲ್ಲಿದ್ದಾನೆ. ನೀವು ನಿಮ್ಮ ದೇಶಕ್ಕೆ ಹೋಗುವುದರೊಳಗಾಗಿ ಯುದ್ಧ ಆರಂಭವಾಗಬಹುದು." ಈ ಹೆಣ್ಣುಮಕ್ಕಳಿಗೆ ತಮ್ಮ ದೇಶದ ಸೂಕ್ಷ್ಮ ವಿಚಾರಗಳೂ ಗೊತ್ತಿವೆಯಲ್ಲ ಎಂದು ಆಶ್ಚರ್ಯಚಕಿತನಾದೆ. ಅನೇಕ ಮಹಿಳೆಯರು ಪಾಕಿಸ್ತಾನದಲ್ಲಿ ನಡೆಯುವ ಮಹಿಳೆಯ ಹೋರಾಟಗಳ ಕುರಿತು ವಿವರಿಸಿದರು. ಅಲ್ಲಿನ ಎಡಪಕ್ಷಗಳು ದುರ್ಬಲವಾಗಿದ್ದರಿಂದ ಹೋರಾಟಗಳ ಜವಾಬ್ದಾರಿ ಎನ್.ಜಿ.ಒಗಳು ಹೊತ್ತಂತಿತ್ತು,


ಹೇಗ್‌ನಲ್ಲಿ ಸಿಕ್ಕ ಪಾಕಿಸ್ತಾನದ ಈ ಧೈರ್ಯತುಂಬಿದ ಮಹಿಳೆಯರ ಬಗ್ಗೆ ಹೇಳಿದೆ. "ಈಗ ನೀವು ಹೇಳುತ್ತಿರುವುದು ತದ್ವಿರುದ್ಧವಾಗಿದೆಯಲ್ಲ" ಎಂದು ತಿಳಿಸಿದೆ. ಆಗ ಆ ಮಹಿಳೆ "ಅದೆಲ್ಲಾ ಆ ಕಾಲದ ಮಾತು. ಈಗ ಪರಿಸ್ಥಿತಿ ಬಹಳ ಹದಗೆಟ್ಟಿದೆ. ಉಗ್ರರು ಪಾಕಿಸ್ತಾನವನ್ನು ಅಳಿವಿನ ಅಂಚಿಗೆ ತಂದಿಡುತ್ತಿದ್ದಾರೆ. ನಿಮ್ಮ ದೇಶ ಎಷ್ಟೋ ಪಾಲು ಮೇಲು. ನಿಮ್ಮ ಸಿನಿಮಾಗಳು, ನಿಮ್ಮ ಸಂಗೀತ, ನಿಮ್ಮ ವಸ್ತುಗಳು ನಮಗೆ ಬಹಳ ಪ್ರಿಯವಾಗಿವೆ. ಎರಡೂ ದೇಶಗಳ ಜನರ ಮಧ್ಯೆ ಸೌಹಾರ್ದ ಸಂಬಂಧ ಹೊಂದುವ ಕ್ಷಣಗಳನ್ನು ರಾಜಕೀಯ ಶಕ್ತಿಗಳು ಬದಲಾಯಿಸಿಬಿಡುತ್ತವೆ" ಎಂದು ಬೇಸರ ವ್ಯಕ್ತಪಡಿಸಿದಳು.

"ದೇಶ ಬಿಟ್ಟು ನ್ಯೂಯಾರ್ಕ್‌ನಲ್ಲಿ ಉಳಿಯಬೇಕೆಂದರೆ ಅನೇಕ ತೊಡಕುಗಳಿವೆ. ಇಷ್ಟು ದಿನಗಳವರೆಗೆ ಕರಾಚಿಯಲ್ಲೇ ಬದುಕಿ ಈಗ ಬಿಟ್ಟು ಬರಲು ಸಾಧ್ಯವಾಗುತ್ತಿಲ್ಲ. ಜೀವ ಕೈಯಲ್ಲಿ ಹಿಡಿದುಕೊಂಡು ಬದುಕುವಂಥ ಸ್ಥಿತಿ ತಲುಪಿದೆ. ಪೇಷಾವರದಲ್ಲಿರುವ ಮಗಳು ಮತ್ತು ಅಳಿಯ ಅಲ್ಲಿಂದ ಹೊರಹೋಗಲು ಇಚ್ಛಿಸುತ್ತಿಲ್ಲ. ನನಗೆ ಯಾವುದೂ ತೋಚುತ್ತಿಲ್ಲ. ಏತನ್ಮಧ್ಯೆ ಯುವಕರು ಐಎಸ್‌ಐಸ್ ಗಾಳಕ್ಕೆ ಬೀಳುತ್ತಿರುವುದು ಬಹಳ ಆತಂಕ ಮೂಡಿಸುತ್ತಿದೆ. ಅವರ ತಲೆಯಲ್ಲಿ ಈ ರಾಕ್ಷಸರು ಧರ್ಮದ ನಶೆ ತುಂಬುತ್ತಿದ್ದಾರೆ. ಕಳೆದ ವಾರ ಲಂಡನ್ನಿನ ಮೂವರು ಯುವತಿಯರು ಸಿರಿಯಾ ಮತ್ತು ಇರಾಕ್ ಮಧ್ಯದ ಐಎಸ್‌ಐಎಸ್‌ನ ಹಿಡಿತದಲ್ಲಿರುವ ತಾಣ ಸೇರಿದ್ದಾರೆ ಎಂಬ ಸುದ್ದಿ ಬಂದಿದೆ. ವಿಶ್ವದ ವಿವಿಧ ದೇಶಗಳ ಯುವಕರು ಜೀವದ ಹಂಗುದೊರೆದು ದುಷ್ಟರ ಗುಂಪನ್ನು ಸೇರುತ್ತಿದ್ದಾರೆ. ಕೆಲ ಯುವತಿಯರು ಅವರ ಜೊತೆ ಮದುವೆ ಮಾಡಿಕೊಳ್ಳಲೂ ಸಿದ್ಧರಿದ್ದಾರೆ. ಈ ಭಯಾನಕ ಪರಿಸ್ಥಿತಿಯ ಬಗ್ಗೆ ಏನು ಹೇಳಬೇಕೋ ತಿಳಿಯುತ್ತಿಲ್ಲ" ಎಂದು ಆಕೆ ನಿಟ್ಟುಸಿರು ಬಿಟ್ಟರು.

■ ರಂಜಾನ್ ದರ್ಗಾ







ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಸನಾತನ ಸಾಂಖ್ಯ

ಭಾರತದಲ್ಲಿ ವೇದ ಮತ್ತು ಪುರಾಣಗಳನ್ನು ಆಧರಿಸಿ ಕೊಂಡು ಮಾತಾಡುವ ಬ್ರಾಹ್ಮಣ ಪುರೋಹಿತರು ಪದೇ ಪದೇ ಹೇಳುವ ಮಾತು ಸನಾತನ ಧರ್ಮ. ವಾಸ್ತವವಾಗಿ ಈ ಮಣ್ಣಿನ ಸನಾತನ ಸಂಸ್ಕೃತಿ ಅಥವಾ ಧರ್ಮ ಯಾವುದು ಎಂದು ಅವರಿಗೆ ಗೊತ್ತೇ ಇಲ್ಲ. ಜೊತೆಗೆ ಬಹಳಷ್ಟು ಜನರು ಸಂಸ್ಕೃತಿ, ಧಾರ್ಮಿಕತೆ ಮತ್ತು ಧರ್ಮಗಳನ್ನು ಒಂದಾಗಿಸಿ ನೋಡುತ್ತಾರೆ. ಇದು ಬಹಳ ಅಪಾಯಕರವಾದ ಸಂಗತಿ. ಸಂಸ್ಕೃತಿ, ಧರ್ಮ ಮತ್ತು ಧಾರ್ಮಿಕತೆಗೆ ಜಗಜಾಂತರ ವ್ಯತ್ಯಾಸವಿದೆ. ಸಂಸ್ಕೃತಿಯಲ್ಲಿ ಒಂದಷ್ಟು ಜನರನ್ನು ಒಟ್ಟಿಗಿಟ್ಟು ಗುರುತಿಸಬಹುದು. ಹಾಗೆಯೇ ಧಾರ್ಮಿಕತೆಯಲ್ಲಿಯೂ ಕೂಡ. ಆದರೆ ಧರ್ಮ ಎಂಬುವುದರಲ್ಲಿ ಬಹಳ ವಿಶಾಲಾರ್ಥವು ಇದ್ದು ಅದು ಬಹಳ ಸ್ವತಂತ್ರವಾಗಿಯೂ ಮತ್ತು ಸಂಕೀರ್ಣವಾಗಿಯೂ ಇದೆ.

ಬಹಳ ಸರಳವಾಗಿ ಮತ್ತು ಬುಡಮೂಲದ ಅರ್ಥ ನೋಡುವುದಾದರೆ, ಧರ್ಮವೆಂದರೆ ಆಯಾ ವಸ್ತುವಿನ ಗುಣಸ್ವಭಾವ.

ಸ್ವಧರ್ಮ

ಭಗವದ್ಗೀತದಲ್ಲಿ 'ಸ್ವಧರ್ಮೇ ನಿಧನಂ ಶ್ರೇಯಃ, ಪರಧರ್ಮೋ ಭಯಾವಹಃ' ಎಂಬ ವಾಕ್ಯವು ಹೇಳುವ ಧ್ವನಿ ಈ ವಿಷಯದಲ್ಲಿ ಬಹಳ ಅರ್ಥಪೂರ್ಣವಾಗಿದೆ. ಯಾರೊಬ್ಬರಿಗೂ ಅವರದೇ ಆದಂತಹ ಗುಣಧರ್ಮವಿದ್ದು, ಅದು ಈ ಅಸ್ತಿತ್ವದಲ್ಲಿ ಅದರದೇ ಆದಂತಹ ಮಾನ್ಯತೆಯನ್ನು ಹೊಂದಿರುತ್ತದೆ ಹಾಗೂ ಅದರ ಇರುವಿಕೆಯಲ್ಲಿ ಅದರದೇ ಶ್ರೇಷ್ಠತೆಯನ್ನು ಹೊಂದಿದ್ದು, ಅದು ಬಹಳ ಬೆಲೆ ಬಾಳುವಂತಹ ನಿಧಿಯಾಗಿದೆ. ಮಲ್ಲಿಗೆ ಹೂವಿನ ಗುಣಸ್ವಭಾವವು ಮಲ್ಲಿಗೆಗೆ ನಿಧಿ. ಸಂಪಿಗೆಯದು ಸಂಪಿಗೆಗೆ, ನರಿದು ನರಿಗೆ, ಹುಲಿಯದು ಹುಲಿಗೆ. ನರಿ ತಾನು ಸ್ವಾಭಾವಿಕವಾಗಿ ಪಡೆದಿರುವಂತಹ ಗುಣಧರ್ಮಕ್ಕೆ ಈ ಅಸ್ತಿತ್ವದಲ್ಲಿ ಮಾನ್ಯತೆ ಇದೆ. ಆದರೆ, ಹುಲಿಯ ಮೈಮೇಲಿರುವ ಪಟ್ಟೆಗೆ ಮನಸೋತು ಅದರಂತೆ ಅದನ್ನು ಪಡೆಯಲು ಬರೆಗಳನ್ನು ಹಾಕಿಕೊಳ್ಳುವ ಅಗತ್ಯವಿಲ್ಲ. ಆ ರೀತಿ ಮಾರುಹೋಗುವುದು, ತನ್ನದನ್ನು ತುಚ್ಛೀಕರಿಸಿಕೊಂಡು ಅನ್ಯದನ್ನು ಬಯಸಿ ಹೋಗುವುದು "ಭಯಾವಹಃ."


ಇಂತಹ ಧರ್ಮವು ಎಲ್ಲಾ ವಸ್ತುಗಳಲ್ಲಿ, ಜೀವಿಗಳಲ್ಲಿ ಸಹಜವಾಗಿಯೇ ಇರುವಂತಹದ್ದು. ನಮ್ಮ ಪೂರ್ವಿಕರು ಒಬ್ಬೊಬ್ಬ ವ್ಯಕ್ತಿಯಲ್ಲಿಯೂ ಇಂತಹ ಧರ್ಮವು ಇರುವುದನ್ನು ಕಂಡುಕೊಂಡಿದ್ದರು. ಹಾಗೆಯೇ ಅವುಗಳು ವಸ್ತುವಿನಿಂದ ವಸ್ತುವಿಗೆ, ಜೀವಿಯಿಂದ ಜೀವಿಗೆ ಭಿನ್ನವಾಗಿರುವುದನ್ನೂ ಕಂಡುಕೊಂಡರು. ಅದೇ ರೀತಿಯಲ್ಲಿ ಪರಸ್ಪರ ಹೋಲಿಕೆಗಳಿರುವುದನ್ನೂ ಕಂಡುಕೊಂಡರು. ಒಂದೊಂದು ಧರ್ಮವು ಪರಸ್ಪರ ಕೂಡುವುದಲ್ಲದೇ ಕೆಲವೊಮ್ಮೆ ವಿಕರ್ಷಿಸುವುದು. ಅದು ಆಯಾ ವಸ್ತುಗಳ ಗುಣಸ್ವಭಾವಗಳ ಅನುಗುಣವಾಗಿ.

ಇಂತಹ ವಸ್ತು ಮತ್ತು ಜೀವಿಗಳ ಧರ್ಮವು ಸಜೀವಂತಿರುವುದು, ಕ್ರಿಯಾಶೀಲವಾಗಿರುವುದು, ಜಗತ್ತಿನ ಅಸ್ತಿತ್ವದಲ್ಲಿ ತನ್ನದೇ ಅಸ್ತಿತ್ವವನ್ನು ಉಳಿಸಿಕೊಂಡಿರುವುದು; ಈ ಎಲ್ಲಕ್ಕೂ ಕಾರಣವೆಂದರೆ ಶಕ್ತಿ. ಇಂತಹ ಶಕ್ತಿಯನ್ನು ಉಳಿಸಿಕೊಳ್ಳಲು, ಬೆಳೆಸಿಕೊಳ್ಳಲು, ದುಪ್ಪಟ್ಟು ಮಾಡಿಕೊಳ್ಳಲು, ಶಕ್ತಿಯ ಎಲ್ಲಾ ಸಾಧ್ಯತೆಗಳನ್ನು ಬಳಸಿಕೊಂಡು ಸಾಧನೆಗಳನ್ನು ಮಾಡಲು, ತನ್ನ ಮೇಲೆ, ಪ್ರಕೃತಿಯ ಮೇಲೆ, ವ್ಯಕ್ತಿಗಳ ಮೇಲೆ ಹತೋಟಿಗಳನ್ನು ಸಾಧಿಸಲು ಹಲವು ದಿಕ್ಕುಗಳಲ್ಲಿ ಚಿಂತನೆಗಳೂ, ಪ್ರಯೋಗಗಳೂ ನಡೆಯತೊಡಗಿದವು. ಶಾಕ್ತ ಪಂಥವೇ ಮೊದಲಾಗಿ ಯಾವ ಪಂಥಗಳೇ ಆಗಲಿ; ನೇರವಾಗಿ ಹೇಳಲಿ ಬಿಡಲಿ, ಎಲ್ಲರ ಗಮ್ಯ ಮತ್ತು ಗಮನ ಶಕ್ತಿ. ಶಕ್ತಿಯನ್ನು ವಸ್ತುವನ್ನು ಸೂಕ್ಷ್ಮ ರೂಪದಲ್ಲಿ ಗುರುತಿಸುವ ಪ್ರಯತ್ನವೂ




ಆಯಿತು. ವಸ್ತುಗಳಲ್ಲಿ, ಜೀವಿಗಳಲ್ಲಿ ಚೈತನ್ಯವೆಂದು ಕರೆದರೆ, ಮನಸ್ಸು ಬುದ್ಧಿ ಇತ್ಯಾದಿಗಳ ವಿಶೇಷಗಳನ್ನು ಗುರುತಿಸಿಕೊಂಡು ವ್ಯವಹರಿಸುತ್ತಿದ್ದ ಮನುಷ್ಯನಲ್ಲಿ ಆತ್ಮವೆಂದೂ ಕರೆಯಲಾಯಿತು.

ಅದೇನೇ ಆಗಲಿ, ಇಂತಹ ಅನೇಕಾನೇಕ ವಿಚಾರಗಳು, ವಿಶ್ಲೇಷಣೆಗಳು, ಪ್ರಯೋಗಗಳಲ್ಲಿ ನಂಬುಗೆ ಮತ್ತು ಶ್ರದ್ಧೆಗಳನ್ನು ಬದ್ಧತೆಯಿಂದ ನಡೆದುಕೊಳ್ಳುವವರು ಅನೇಕ ದರ್ಶನಗಳ, ಸಿದ್ಧಾಂತಗಳ ಸೃಷ್ಟಿಗೆ ಕಾರಣರಾದರು. ಅವರವರ ದೃಷ್ಟಿವೈಶಾಲ್ಯದ, ವಿಷಯಗ್ರಹಣದ ಆಧಾರದಲ್ಲಿ ಶಕ್ತಿ







ಪತನವಾಗದಂತೆ, ಗುರಿತಪ್ಪದಿರಲು ದಾರಿ ತಪ್ಪದಂತೆ ಬದ್ಧತೆಯನ್ನು ಉಳಿಸಿಕೊಳ್ಳಲು ಕಟ್ಟುಪಾಡುಗಳನ್ನು ತಂದುಕೊಂಡರು. ಆದರೆ ಅಂತಹ ಕಟ್ಟುಪಾಡುಗಳು ಅವರವರ ಸಹಜೀವಿಗಳ ಅಸ್ತಿತ್ವಕ್ಕೆ ಪೂರಕವಾದವೋ, ಮಾರಕವಾದವೋ ಎಂಬುದು ಮತ್ತೆ ಅವರ ವಿಷಯಗ್ರಹಣದ ಸೂಕ್ಷ್ಮತೆಯ ಮೇಲೆ ಮತ್ತು ವಿಚಾರಗಳ ಆಳ ಹಾಗು ಎತ್ತರದ ಮೇಲೆ, ಜೊತೆಗೆ ಚೈತನ್ಯದ ಪ್ರವಹನೆಗೆ ಒಗ್ಗಿಕೊಂಡಿದೆಯೋ ಇಲ್ಲವೋ ಎಂಬುದನ್ನು ಬೇರೆಯೇ ಅಧ್ಯಯನದ ವ್ಯಾಪ್ತಿಗೆ ತೆಗೆದುಕೊಳ್ಳಬೇಕಾಗುತ್ತದೆ.

ಒಟ್ಟಾರೆ ಇಂತಹದ್ದು ಬೇರೆ ಬೇರೆ ರೂಪ ಮತ್ತು ಹೆಸರುಗಳಲ್ಲಿದ್ದರೂ ಜಗತ್ತಿನ ಎಲ್ಲಾ ಸಂಸ್ಕೃತಿಗಳಲ್ಲಿ, ಸಮುದಾಯಗಳಲ್ಲಿ ನೇರವಾಗಿ ಕಾಣಸಿಗುತ್ತದೆ.

ಭಾರತದ ಸನಾತನ ಶಾಸ್ತ್ರ ಯಾವುದು?

ಮಹಾಭಾರತದಲ್ಲಿ ಸಾಂಖ್ಯ ಮತ್ತು ಯೋಗವನ್ನು "ಸನಾತನ ದ್ವೇ" ಎಂದು ಕರೆಯುತ್ತಾರೆ. ಅನೇಕ ವಿದ್ವಾಂಸರ ಅಭಿಪ್ರಾಯದಲ್ಲಿ ಬುದ್ಧನ ಬೋಧನೆಯಲ್ಲಿ ಸಾಂಖ್ಯದ ಪ್ರಭಾವವಿದೆ. ಶಂಕರಾಚಾರ್ಯನಂತಹ ವೈದಿಕ ಪಕ್ಷಪಾತಿಗಳು ಸಾಂಖ್ಯವನ್ನು ಖಂಡಿಸುತ್ತಾರೆ. ಸಾಂಖ್ಯವು ವೇದದ ವಿರುದ್ಧವಾದುದು, ವೇದಾನುಸಾರಿ ಮನುವಚನದ ವಿರುದ್ಧವಾಗಿದೆ ಎಂದೂ ಖಂಡಿಸಿದರೂ; ಭಗವದ್ಗೀತೆಯಲ್ಲಿ ಸಾಂಖ್ಯ ಯೋಗವಿದೆ.

ಹಾಗಾಗಿ ನಾವು ಭಗವದ್ಗೀತೆಯ ಪ್ರವೇಶ ಮಾಡುವಾಗ, ಅದರಲ್ಲಿ ಸಂಚರಿಸುವಾಗ ಬಹಳ ಪ್ರಜ್ಞಾವಂತಿಕೆಯಿಂದ ಎಚ್ಚರವಾಗಿರಬೇಕು. ಅದರಲ್ಲಿ ಹೊಟ್ಟುಕಾಳುಗಳ ಮಿಶ್ರಣವಿದೆ. ದೃಗ್-ದೃಶ್ಯ-ವಿವೇಕದಂತಹ, ಅಷ್ಟಾವಕ್ರ ಗೀತೆಯಂತಹ, ನೇರ ಸಾಂಖ್ಯ ಯೋಗದಂತಹ ವಿಷಯಗಳು ಭಗವದ್ಗೀತೆಯಲ್ಲಿ ಸೇರಿಕೊಂಡಿವೆ ಅಥವಾ ಸೇರಿಸಲ್ಪಟ್ಟಿವೆ. ಅನೇಕ ಕಾಲಘಟ್ಟಗಳಲ್ಲಿ ಸೇರ್ಪಡೆಗಳಿಗೆ ಒಳಗಾಗುತ್ತಾ ಬಂದ ಭಗವದ್ಗೀತೆ ಪಾಶ್ಚಿಮಾತ್ಯರ ಅಧ್ಯಯನಕ್ಕೆ ಒಳಗಾಗುವ ಮುನ್ನವೇ ತನ್ನ ಬೆಳವಣಿಗೆಯನ್ನು ನಿಲ್ಲಿಸಿಕೊಂಡಿದೆ. ಅದರ ಧ್ಯಾನಶ್ಲೋಕವನ್ನಂತೂ ಅತ್ಯಂತ ಕೊನೆಯದಾಗಿ ಬರೆದಿರುವರು ಎಂದು ತೋರುತ್ತದೆ. ಅದರಲ್ಲಿ "ಸರ್ವೋಪನಿಷದೋ ಗಾವೋ ದೋಗ್ಧಾ ಗೋಪಾಲನಂದನ" ಎಂದು "ಎಲ್ಲಾ ಉಪನಿಷತ್ತುಗಳ ಹಸುಗಳ ಹಾಲನ್ನು ಕರೆದ ಕೃಷ್ಣ" ಎಂದು ನಮ್ಮ ಹಾಲಿನ ಡೈರಿಯನ್ನು ನೆನಪಿಸುತ್ತಾರೆ. ಇದನ್ನು ಓದಿದಾಗಲೆಲ್ಲಾ ಭಗವದ್ಗೀತೆ ಡೈರಿ ಹಾಲೆಂದು ನಾನು ತಮಾಷೆಯಾಗಿ ಹೇಳುತ್ತೇನೆ.

ಇರಲಿ, ಭಗವದ್ಗೀತೆಯನ್ನು ಸಾರಾಸಗಟಾಗಿ ತಳ್ಳಿ ಹಾಕುವ ಬದಲು, ಹೊಟ್ಟು ಮತ್ತು ಕಾಳನ್ನು ಪ್ರತ್ಯೇಕಿಸುವ ಅನಿವಾರ್ಯತೆ ಇದೆ. ಏಕೆಂದರೆ ಭಗವದ್ಗೀತೆ ಒಂದು ಧ್ವನಿ, ಒಂದು ನಿರ್ಣಯ, ಒಂದು ಅಭಿಪ್ರಾಯ ಇಲ್ಲವೇ ಇಲ್ಲ, ನಾಟಕೀಯವಾಗಿ ತೆಗೆದುಕೊಳ್ಳುವುದಾದರೆ; ಕೊಲ್ಲಲಾರೆ ಎಂದು ಭಾವನಾತ್ಮಕವಾಗಿ ಕುಸಿದವನನ್ನು, ಸೈದ್ಧಾಂತಿಕವಾಗಿ ಪ್ರಚೋದಿಸಿ, ಸರಿ ಕೊಲ್ಲುತ್ತೇನೆ ಎಂದು ಧನಸ್ಸನ್ನು ಎತ್ತಿಡುವಂತಹ ದೃಶ್ಯವಂತೂ ಬರೀ ಸುಳ್ಳು ಮತ್ತು ನಾಟಕ ಮಾತ್ರವಲ್ಲದೇ, ಕೃಷ್ಣನೆಂಬ ಪಾತ್ರವನ್ನು ಅತಿವೈಭವೀಕರಿಸಲು ಮಾಡಿರುವ ಎಡಬಿಡಂಗಿತನ. ಅತ್ಯುತ್ಪ್ರೇಕ್ಷೆಯ ಪರವಾದಿಗಳು ಎಲ್ಲೆಲ್ಲಿಗೂ ಹೋಗಿಮುಟ್ಟಿರುತ್ತವೆ. ಅದನ್ನು ನಾವು ನಿರಾಕರಿಸಲಾಗುವುದಿಲ್ಲ. ಓದುವುದರಾಚೆಯ ಅರ್ಥವನ್ನು ಗ್ರಹಿಸಬೇಕು. ಭಗವದ್ಗೀತೆಗೆ ಆಯಾ ಸಿದ್ಧಾಂತವಾದಿಗಳು ಕಾಣ್ಕೆಗಳನ್ನು ಕೊಟ್ಟಂತೆ, ಮನುವಾದಿಗಳೂ ಕೂಡ ತಮ್ಮ ಕಸವನ್ನು ಸೇರಿಸಿಟ್ಟಿದ್ದಾರೆ.

ಏನೇ ಆಗಲಿ ಸಿದ್ಧಾಂತಗಳೆಂಬುವವು ಮನಸ್ಸು ಮತ್ತು ಭಾವಸ್ಥಿತಿಗಳಿಗೆ ಸಂಬಂಧಿಸಿರುವುದಾದರೆ ಇದಕ್ಕೆ ಪೂರಕವಾಗಿ ಶಕ್ತಿಸಂವರ್ಧನೆಗೆ ಅಥವಾ ಶಕ್ತಿಯನ್ನು ಕಾಯ್ದುಕೊಳ್ಳುವಿಕೆಗೆ ಅಗತ್ಯವಾಗಿರುವ ತಂತ್ರಗಳನ್ನು ಕಂಡುಕೊಳ್ಳಲಾಯಿತು. ಅವುಗಳಂತೂ ಬುಡಕಟ್ಟುಗಳಲ್ಲಿಯೇ, ಆದಿಮ ಸಂಸ್ಕೃತಿಯಲ್ಲಿಯೇ ರೂಪುಗೊಂಡಿದ್ದವು. ಅವಕ್ಕೆ ಯಂತ್ರತಂತ್ರಮಂತ್ರವೆಂದು ಕರೆಯದಿದ್ದರೂ ಈ ಮೂರನ್ನೂ ಒಂದಲ್ಲ ಒಂದು ರೀತಿಯಲ್ಲಿ ಅಭ್ಯಾಸಗಳಲ್ಲಿ ಇಟ್ಟುಕೊಂಡಿದ್ದರು.


ಎಲ್ಲರಲ್ಲೂ ಇಂತಹ ತಂತ್ರಸಾಧನೆಗಳ ಬಗ್ಗೆ ವಿಶೇಷ ಗಮನ ಮತ್ತು ಒಲವು ಇತ್ತು, ಬುದ್ಧ ಇಂತಹ ತಂತ್ರಗಳನ್ನು ಅಭ್ಯಾಸ ಮಾಡದಿದ್ದರೂ ಅವನ ನಂತರದ ಬೌದ್ಧ ಬಿಕ್ಕುಗಳು ಮತ್ತು ಬೌದ್ಧಶಕ್ತಿಯ ಪ್ರಭಾವವನ್ನು ಗಂಭೀರವಾಗಿ ಪರಿಗಣಿಸದವರು, ಬುದ್ಧ ಚೈತನ್ಯವನ್ನು ಪ್ರಕೃತಿಯ ಶಕ್ತಿಯೊಡನೆ ಸಮೀಕರಿಸಿಕೊಳ್ಳುವುದಕ್ಕೆ, ಸಾಮರಸ್ಯ ಹೊಂದುವುದಕ್ಕೆ, ಕೆಲವೊಮ್ಮೆ ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳುವುದಕ್ಕೂ, ತಾಂತ್ರಿಕ ಪ್ರಯೋಗಗಳನ್ನು ಮಾಡಿದ್ದಾರೆ. ಅದರಲ್ಲಿ ಯಂತ್ರ, ಮಂತ್ರ, ತಂತ್ರ ಎಲ್ಲವೂ ಸೇರುತ್ತದೆ.



ಬೌದ್ಧ ತಾಂತ್ರಿಕತೆಯನ್ನು ಅಭ್ಯಾಸವನ್ನು ಮಾಡಿದವರು ಕಹಳೆಗಳನ್ನು ಊದುತ್ತಾ ಭಾರಿಗಾತ್ರದ ಕಲ್ಲಿನ ಬಂಡೆಗಳನ್ನು ಮೇಲಕ್ಕೇರಿಸುವ, ಕಬ್ಬಿಣಗಳನ್ನು ಬಾಗಿಸುವಂತಹ ಐತಿಹ್ಯಗಳ ಉಲ್ಲೇಖವಿದೆ. ಹಾಗೆಯೇ ಕ್ರೂರ ಜಂತುಗಳೊಡನೆ ಸರಸವಾಗಿರುವ, ಪಳಗಿಸುವಂತಹ ದಾಖಲೆಗಳಿವೆ. ಇವೆಲ್ಲವೂ ಬುದ್ಧನ ನೇರವಾದ ಬೋಧನೆಗಳಲ್ಲಿ, ವಿಚಾರಗಳಲ್ಲಿ ಕಾಣುವುದಿಲ್ಲ. ಹಾಗೆಯೇ ಬುದ್ಧನೂ ಸ್ವಯಂ ಈ ರೀತಿಯ ತಂತ್ರಗಳನ್ನು ಮಾಡುವುದಿಲ್ಲ.

ಬುದ್ಧ ಭಾವಿಸುವ, ಆಲೋಚಿಸುವ, ಪರಿಭಾವಿಸುವ, ಆಲೋಚನೆಗಳ ಸೂಕ್ಷ್ಮಸ್ತರಗಳನ್ನು ಗುರುತಿಸುವ, ಭಾವನಾತ್ಮಕವಾದಂತಹ ಮತ್ತು ವಿಚಾರಾತ್ಮಕವಾದ ನೆಲೆಗಳನ್ನು ಮತ್ತು ಅವುಗಳ ಪ್ರಭಾವಗಳನ್ನು ಗುರುತಿಸುವ, ಅವುಗಳ ಕಾರ್ಯ, ಕಾರಣ ಮತ್ತು ಪರಿಣಾಮಗಳನ್ನು ಸಾಕ್ಷೀಕರಿಸುವುದರ ಬಗ್ಗೆಯೇ ತಿಳಿಸುತ್ತಾ, ಅರಿವು ನೀಡುತ್ತಾ ಹೋಗುತ್ತಾನೆ. ಆದರೆ, ಬೌದ್ಧ ತಾಂತ್ರಿಕತೆಯು ಬೇರೊಂದು ಆಯಾಮದಲ್ಲಿ ರೂಪ ತಳೆಯುತ್ತದೆ.

ಬುದ್ಧ ಹೇಳಿರುವ ಮೈತ್ರಿ ಭಾವನವನ್ನು ಸಾಧಿಸಲು ಬಿಕ್ಕುಗಳು ಕೆಲವೊಂದು ತಂತ್ರಗಳನ್ನು ಅಳವಡಿಸಿಕೊಂಡು ವೈರುಧ್ಯದ ಗುಣಗಳಿರುವ ಜೀವಿ ಮತ್ತು ವಸ್ತುಗಳಲ್ಲಿ ಅದನ್ನು ಸಾಧಿಸಲು ಯತ್ನಿಸಿದರು ಎಂದೂ ಅರ್ಥೈಸಬಹುದಾದರೂ ಇಲ್ಲಿ ಸೂಕ್ಷ್ಮರೂಪದಲ್ಲಿ ವಿಶ್ಲೇಷಿಸುವ ಅಗತ್ಯವಿದೆ. ಯೋಗದಲ್ಲಿಯೂ ಕೂಡ ಪತಂಜಲಿಯು ತನ್ನ ಯೋಗ ಸೂತ್ರದಲ್ಲಿ ಇಂತಹ ಹಲವು ತಂತ್ರಗಳ ಸೂತ್ರಗಳನ್ನು ತಿಳಿಸಿಕೊಟ್ಟಿದ್ದಾನೆ.




ಬೌದ್ಧ ತಾಂತ್ರಿಕರು

ಬುದ್ಧನ ಬೋಧನೆಗಳು ಬುದ್ಧನ ಮರಣಾನಂತರ ಬೇರೆ ಬೇರೆ ರೀತಿಯ ತಂತ್ರಗಳಲ್ಲಿ ಬೆರೆಯುತ್ತಾ ಹೋಗಿರುವುದನ್ನು ಸ್ಪಷ್ಟವಾಗಿ ಕಾಣುವಂತಹ ದೃಷ್ಟಾಂತಗಳಿವೆ. ಬುದ್ಧನ ಆಲೋಚನೆ ಮತ್ತು ವಿಚಾರಗಳ ಸಾಧನೆಗೆ ತಂತ್ರಗಳ ಮೊರೆ ಹೋಗಿರಬಹುದಾದ ಸಾಧ್ಯತೆಗಳೂ ಉಂಟು. ಬುದ್ಧನ ಧ್ಯಾನ ಸೂತ್ರಗಳನ್ನು ಬೇರೆ ಬೇರೆ ಆಯಾಮಗಳಲ್ಲಿ ಪ್ರಯೋಗಿಸಿ, ಉದ್ದೇಶಿತ ಫಲವನ್ನು ಪಡೆಯುವ ತಂತ್ರಗಾರಿಕೆಯೂ ಇದಾಗಿರಬಹುದು. ಒಟ್ಟಾರೆ ಪುರಾತನ ಪ್ರಯೋಗಗಳಾದ ತಂತ್ರವು ಬೌದ್ಧರಲ್ಲಿ ಸೇರಿಕೊಂಡಿದ್ದು ಏನೂ ಆಶ್ಚರ್ಯವಿಲ್ಲ. ಸ್ತ್ರೀ ದೇವತೆಗಳ ಪ್ರಧಾನವಾದ ತಂತ್ರವು ಬೌದ್ಧರ ಪ್ರಯೋಗ ಮತ್ತು ಪರಿಕಲ್ಪನೆಗಳಲ್ಲಿ ಸಿಕ್ಕು, ಮತ್ತೊಂದು ರೀತಿಯ ಆಯಾಮಗಳನ್ನು ಪಡೆದುಕೊಂಡವು.

ಹಾಗೆಯೇ ಬುದ್ಧನ ಜಾತಕದ ಕಥೆಗಳ ಬಗ್ಗೆ, ಬುದ್ಧನು ಉಲ್ಲೇಖಿಸುವ ಪುನರ್ಜನ್ಮ ಮತ್ತು ಕರ್ಮ ಸಿದ್ಧಾಂತಗಳ ಬಗ್ಗೆ ಸ್ಪಷ್ಟ ಅರ್ಥವನ್ನು ಕಂಡುಕೊಳ್ಳಲು ಬಹಳಷ್ಟು ತೊಡಕುಗಳಿವೆ. ಕೊಂಚ ಸಾವಧಾನದ ಸೂಕ್ಷ್ಮ ಮತ್ತು ಪ್ರಜ್ಞಾವಂತಿಕೆಯ ಗಮನಿಸುವಿಕೆ ಒಂದು ಹಂತಕ್ಕೆ ಸಮಾಧಾನಕರ ಒಳನೋಟಗಳನ್ನು ನೀಡಬಹುದು. ಅಂಥಾ ಕೆಲವು ವಿಚಾರಗಳನ್ನು ಮುಂದೆ ನೋಡೋಣ. ■

ಕನ್ನಡ ಸಿನಿಮಾಗಳ ಕಾವಲಿಗರು ಎಲ್ಲಿದ್ದಾರೆ?

ಹೊಗಳಿಕೆ ತೆಗಳಿಕೆ



'ದಾಳಿ ಮಾಡಲಿದ್ದಾನೆ ಬಾಹುಬಲಿ' (ಗೌರಿ ಲಂಕೇಶ್, ಜುಲೈ 22) ಮಾತು ನಿಜವೆನಿಸುತ್ತಿದೆ. ಬಿಡುಗಡೆಯಾದ ಚಿತ್ರಮಂದಿರಗಳಲ್ಲಿ ಪ್ರೇಕ್ಷಕರು ಮುಗಿಬಿದ್ದು ಟಿಕೆಟ್ ಪಡೆಯುತ್ತಿರುವುದನ್ನು ನೋಡಿದಾಗ ಸತ್ಯವೆನಿಸಿತು. ಪತ್ರಿಕೆಯ ವರದಿಯು ಓದುಗರನ್ನು ಸಿನಿಮಾ ನೋಡುವಂತೆ ಪ್ರೇರೇಪಿಸುವಂತಿದೆ.

ವಿತರಕರೇ ಹೇಳಿಕೊಳ್ಳುವಂತೆ ಬಾಹುಬಲಿ 150 ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿದೆ- ಕರ್ನಾಟಕದಲ್ಲಿ! ಕನ್ನಡ ಸಿನಿಮಾಗಳಿಗೆ ಥಿಯೇಟರ್ ಸಿಗದೇ ಕಿತ್ತಾಡುತ್ತಿರುವಾಗ ವಾಣಿಜ್ಯ ಮಂಡಳಿ ಏನು ಮಾಡುತ್ತಿದೆ? ಬಾಹುಬಲಿಗೆ ಹೆದರಿದ ನಿರ್ಮಾಪಕರು ತಮ್ಮ ಸಿನಿಮಾಗಳ ಬಿಡುಗಡೆಯನ್ನು ಮುಂದೂಡಿದ್ದಾರೆ. ಈಗಾಗಲೇ ತೆರೆ ಕಂಡಿರುವ ಕನ್ನಡ ಸಿನಿಮಾಗಳು ಗಳಿಕೆಯಲ್ಲಿ ಹಿಂದೆ ಬಿದ್ದಿವೆ. ಹಿಂದಿ, ತೆಲುಗು, ತಮಿಳು ಇತರೆ ಯಾವುದೇ ಭಾಷೆಯ ಅದ್ದೂರಿ ನಿರ್ಮಾಣದ ಸಿನಿಮಾಗಳು ಬಿಡುಗಡೆ ಆದಾಗಲೆಲ್ಲ ಕನ್ನಡ ಸಿನಿಮಾಗಳು ಬಲಿಯಾಗುತ್ತಿವೆ. ಹಿಂದೆ ರಾಜ್-ವಿಷ್ಣು ನೇತೃತ್ವದಲ್ಲಿ ಪ್ರತಿಭಟನೆ ಮಾಡಿ ಪರಭಾಷಾ ಸಿನಿಮಾಗಳು ಆಯಾ ರಾಜ್ಯಗಳಲ್ಲಿ ತೆರೆಕಂಡ 7 ವಾರಗಳ ಬಳಿಕ ಕರ್ನಾಟಕದಲ್ಲಿ ಬಿಡುಗಡೆ ಆಗುವಂತೆ ನಿಯಮಾವಳಿ ರೂಪಿಸಿದ್ದರು. ಅದರ ಕಥೆ ಏನಾಯಿತು? ಬಾಹುಬಲಿ 150 ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿರುವ ವಿಷಯ ಸಾಮಾನ್ಯ ಪ್ರೇಕ್ಷಕನಿಗೂ ತಿಳಿದಿರುವಾಗ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾದ ಥಾಮಸ್ ಡಿಸೋಜಾಗೆ ಗೊತ್ತೇ ಇಲ್ಲವಂತೆ!! ಇವರು ಮೂಲತಃ ವಿತರಕರು.

ವಾಣಿಜ್ಯ ಮಂಡಳಿಯಲ್ಲಿರುವ ಬಹುತೇಕರೆಲ್ಲ ಪರಭಾಷಾ ಸಿನಿಮಾಗಳ ವಿತರಣೆ ಮಾಡಿ ಹಣ ಮಾಡಿಕೊಂಡವರೆ. ಮಂಡಳಿಯೇ ಕನ್ನಡ ಸಿನಿಮಾಗಳ ಕತ್ತು ಹಿಸುಕುವ ಕೆಲಸ ಮಾಡುತ್ತಿದೆ. ಕೆಲಸಕ್ಕೆ ಬಾರದ ನಟನಟಿಯರ ಗಲಾಟೆಗಳು, ಟೈಟಲ್ ವಿವಾದಗಳನ್ನು ಬಗೆಹರಿಸುವುದರಲ್ಲೆ ಮುಳುಗಿದೆ. ತಾನೆ ರೂಪಿಸಿದ ನಿಯಮವನ್ನು ಜಾರಿಗೆ ತರಲು ಸಾಧ್ಯವಾಗುತ್ತಿಲ್ಲ, ಅವರವರ ಸ್ವಹಿತಾಸಕ್ತಿ-ಸ್ವಾರ್ಥ ಸಾಧನೆಯೇ ಅವರಿಗೆ ಮುಖ್ಯವಾಗಿದೆ. ನನಗೆ ತಿಳಿದಮಟ್ಟಿಗೆ ಬೆಂಗಳೂರಿನ ಊರ್ವಶಿ ಚಿತ್ರಮಂದಿರದಲ್ಲಿ ಕಳೆದ 5 ವರ್ಷಗಳಿಂದ ಒಂದೇ ಒಂದು ಕನ್ನಡ ಸಿನಿಮಾ ತೆರೆಕಂಡಿಲ್ಲ, ಅಲ್ಲಿ ಹಿಂದಿ, ತೆಲುಗು, ತಮಿಳು ಸಿನಿಮಾಗಳಿಗಷ್ಟೇ ಅವಕಾಶ. ಇಂಥ ಟಿಯೇಟರುಗಳು ಬೆಂಗಳೂರಿನಲ್ಲಿಯೇ ಸಾಕಷ್ಟಿವೆ. ಕನ್ನಡ ಸಿನಿಮಾ ಬಿಡುಗಡೆ ಮಾಡಿಸುವ ತಾಕತ್ತು ಮಂಡಳಿಗೆಲ್ಲಿದೆ? ಕನ್ನಡದ ನಿರ್ಮಾಪಕರು, ವಿತರಕರೇ ಪರಭಾಷಾ ಚಿತ್ರಗಳ ವಿತರಣೆಯ ಹಕ್ಕು ಕೊಂಡುಕೊಳ್ಳಲು ಪೈಪೋಟಿಗಿಳಿಯುತ್ತಾರೆ. ಸುದ್ದಿವಾಹಿನಿಗಳಂತೂ ದಿನವಿಡೀ ಪ್ರಸಾರ ಮಾಡುತ್ತವೆ. ಕನ್ನಡ ಸಿನಿಮಾಗಳಿಗೆ ಇಷ್ಟು ಪ್ರಚಾರ ಸಿಕ್ಕುವುದಿಲ್ಲ, ಅಂದಹಾಗೆ ಬಾಹುಬಲಿಯ ವಿತರಣೆಯ ಹಕ್ಕು ಮತ್ತು ಆಡಿಯೋ ಹಕ್ಕು ಪಡೆದವರು ಕನ್ನಡಿಗರೇ!

ಕನ್ನಡ ಸಿನಿಮಾಗಳ ಪ್ರಮುಖ ನಾಯಕನಟರ್ಯಾರು ಈ ಬಗ್ಗೆ ತಲೆಕೆಡಿಸಿಕೊಂಡಿಲ್ಲ, ಅವರಿಗೆಲ್ಲ ಅವರದ್ದೇ ಆದ ಲೆಕ್ಕಾಚಾರಗಳಿವೆ. "ನಾನು ಯಾರು ಅಂತ 6 ಕೋಟಿ ಕನ್ನಡಿಗರಿಗೆ ಗೊತ್ತು" ಎನ್ನುವ ಶಿವಣ್ಣ ಡಬ್ಬಿಂಗ್‌ಗೆ ಮಾತ್ರ ವಿರೋಧಿಯಷ್ಟೆ. "ದೂರದ ಮಹಾರಾಷ್ಟ್ರದಲ್ಲಿ ಕನ್ನಡದ ನೆಲಕ್ಕಾಗಿ ಪವರ್ ತೋರಿಸುವ" ಪುನೀತ್ ಯಾವುದಕ್ಕೂ ಮುಂದಾಗುವುದಿಲ್ಲ, "ನಾನು ಎಲ್ಲರಿಗಿಂತ ಒಂದು ತೂಕ ಹೆಚ್ಚು" ಎಂದು ಹೇಳುವ ಸುದೀಪ್‌ಗೆ ತೆಲುಗು ಮತ್ತು ಹಿಂದಿ ಸಿನಿಮಾಗಳಲ್ಲಿ ಅವಕಾಶ ಬೇಕು. "ನಾನು ಕನ್ನಡಿಗ. ಕನ್ನಡದ ಕಾವಲಿಗ" ಎನ್ನುವ ದರ್ಶನ್ ಬಾಕ್ಸ್‌ಆಫೀಸ್ ಸುಲ್ತಾನ. ಅವರನ್ನು ಮಾತಾಡಿಸುವ ಹಾಗೇ ಇಲ್ಲ, "ಇಲ್ಲಿತನಕ ಯಾರದ್ದೋ ಹವಾ. ನಾನು ಬಂದ್ಮೇಲೆ ನಂದೇ ಹವಾ" ಎಂದು ಅಬ್ಬರಿಸುವ ಯಶ್ ಈಗ ಓಡುವ ಕುದುರೆ. ಯಾರಿಗೂ ಸಿಗುವುದಿಲ್ಲ, ಇನ್ನುಳಿದ ನಟರುಗಳ್ಯಾರು ಸೊಲ್ಲೆತ್ತುವುದಿಲ್ಲ, ಗುಂಪಿನಲ್ಲಿ ಗೋವಿಂದ. ಜಗ್ಗೇಶ್, ರವಿಚಂದ್ರನ್‌ರವರು ಕಾಳಜಿ ವ್ಯಕ್ತಪಡಿಸುತ್ತರಾದರೂ ಅವರ ಮಾತನ್ನು ಕೇಳಿಸಿಕೊಳ್ಳುವವರಿಲ್ಲ, ಇವರಲ್ಲೇ ಶೀತಲ ಸಮರ. ಕನ್ನಡ ಸಿನಿಮಾಗಳ ಹಿತ ಕಾಯುವವರು ಯಾರು?

ಕನ್ನಡ ಚಿತ್ರರಂಗ ಕರ್ನಾಟಕದಲ್ಲೇ ಬೇರೂರುವಂತೆ ಮಾಡಲು ಶ್ರಮಿಸಿದ ವಾಟಾಳ್ ನಾಗರಾಜ್‌ರಂಥ ಹೋರಾಟಗಾರರು ಈಗ ಇಲ್ಲ, ವಾಟಾಳ್‌ರಿಗೂ ವಯಸ್ಸಾಯಿತು. ಹಿಂದೆ ಬಂಗಾರದ ಮನುಷ್ಯ ಸಿನಿಮಾ ಎತ್ತಂಗಡಿಗೆ ಪ್ರಯತ್ನಿಸಿದ ಮಾಲೀಕರ ವಿರುದ್ಧ ಪ್ರತಿಭಟನೆ ಮಾಡಿ ತಡೆದಿದ್ದರು. ಈಗ ಹುಟ್ಟಿಕೊಂಡಿರುವ ಕರುನಾಡ ಸಿಂಹಗಳು, ಸೇನೆಗಳು, ಗಜಕೇಸರಿಗಳು, ವೇದಿಕೆಗಳ ನಾಯಕರೆಲ್ಲ ಹುಟ್ಟುಹಬ್ಬದ ಬ್ಯಾನರ್‌ಗಳನ್ನು ಹಾಕಿಸಿಕೊಳ್ಳುವುದರಲ್ಲೇ ಬ್ಯುಸಿಯಾಗಿದ್ದಾರೆ. ಹಿಂದೆ ಮಾರತ್‌ಹಳ್ಳಿಯ ಮಲ್ಟಿಪ್ಲೆಕ್ಸ್‌ನಲ್ಲಿ ರಜನಿಕಾಂತ್ ಸಿನಿಮಾ ಬಿಡುಗಡೆ ಆದಾಗ ಕರವೇ ಕಾರ್ಯಕರ್ತರು ಪ್ರತಿಭಟಿಸಿದ್ದರು. ಅದೇನು ಡೀಲ್ ಕುದುರಿತೋ ಏನೋ ಒಂದೇ ದಿನಕ್ಕೆ ಪ್ರತಿಭಟನೆ ನಿಲ್ಲಿಸಿದ್ದರು. ರಜನಿ ಚಿತ್ರ ತಡೆಯಿಲ್ಲದೇ ತೆರೆ ಕಂಡಿತು.

ಬಾಹುಬಲಿ ಸಿನಿಮಾ ಇಲ್ಲಿ ಪ್ರಾತಿನಿಧಿಕವಷ್ಟೆ. ನಿರ್ಮಾಪಕರು, ನಟರು, ಪ್ರದರ್ಶಕರು, ವಿತರಕರೆಲ್ಲರೂ ಒಂದೆಡೆ ಕುಳಿತು, ಚರ್ಚಿಸಿ ಅಗತ್ಯ ನಿಯಮಾವಳಿಗಳನ್ನು ರೂಪಿಸಿ ಜಾರಿಗೆ ತರಲಿ. ಪರಭಾಷಾ ಚಿತ್ರಗಳು ಏಳು ವಾರಗಳ ನಂತರ ತೆರೆಕಂಡರೆ ಕನ್ನಡ ಚಿತ್ರಗಳು ನಿರ್ಮಾಪಕರು ಬದುಕುಳಿದಾರು. ಕನ್ನಡ ಭಾಷೆ, ಸಂಸ್ಕೃತಿ, ಸಿನಿಮಾ, ಪ್ರೇಕ್ಷಕರ ಜೊತೆ ಕರುಳುಬಳ್ಳಿಯ ಸಂಬಂಧ ಉಳಿಸಿಕೊಳ್ಳಲಿ. ಹಲವು ಮಹನೀಯರ ಶ್ರಮದಿಂದ ಕನ್ನಡ ಸಿನಿಮಾ ಬೆಳೆದಿದೆ. ಇದನ್ನು ಉಳಿಸಿಕೊಳ್ಳುವ ಹೊಣೆ 'ಕನ್ನಡದ ಸಿನಿಮಾಗಳ ಕಾವಲಿಗರೆಲ್ಲರ' ಮೇಲಿದೆ.

- ಓದುಗ

ಬಾಹುಬಲಿಯಲ್ಲಿ 1 ಕೋಟಿ ಬೆಲೆಯ ಮಡ್ ಆಯಿಲ್ ಬಳಕೆ?!!?

ಹಸ್ತಿನಾವತಿಯ ಚಕ್ರವರ್ತಿ ಧೃತರಾಷ್ಟ್ರನಿಗಾಗಿ ಕರೆತಂದ ಗಾಂಧಾರ ದೇಶದ ರಾಜಕುವರಿ ಗಾಂಧಾರಿಯ ಸೋದರ ಶಕುನಿ ಮಹಾಯೋಧ. ಮಹಾಭಾರತ ಯುದ್ಧದ ಕೊನೆ ಕೊನೆ ದಿನಗಳವರೆಗೂ ಆತ ಅದರಲ್ಲಿ ಭಾಗವಹಿಸಿ ಸಹದೇವನಿಂದ ಹತನಾಗುತ್ತಾನೆ. ಇಂತಹ ಯೋಧನನ್ನು ಪೋಲಿಯೋ ಪೀಡಿತನಂತೆ, ಕುರೂಪಿಯಂತೆ ದೂರದರ್ಶನದ ಹಳೆಯ ಮಹಾಭಾರತ ಸೀರಿಯಲ್‌ನಲ್ಲಿ ಚಿತ್ರಿಸಲಾಗಿತ್ತು (ನಟ ಗೂಫಿ ಪೈಂತಲ್), ಕಳೆದ ವರ್ಷ ಸ್ಟಾರ್ ಪ್ಲಸ್‌ನಲ್ಲಿ ಬಂದ ಮಹಾಭಾರತದಲ್ಲೂ ಆತ ಹೀಗೆಯೇ ಇದ್ದು ಅಲ್ಲಿ ಆತನನ್ನು ಕಪ್ಪು ಹಲ್ಲುಗಳ ಕೆದರು ಕೂದಲ ವಿಕಾರಿಯಂತೆ ಚಿತ್ರಿಸಲಾಗಿತ್ತು, ಇನ್ನು ನಮ್ಮ ಕನ್ನಡದ ಉದಯ ಛಾನೆಲ್‌ನ ಮಹಾಭಾರತದಲ್ಲೂ ಆತ ಹೆಚ್ಚುಕಮ್ಮಿ ಹೀಗೆಯೇ ಇದ್ದ (ನಟ ರಮೇಶ್ ಪಂಡಿತ್). ಒಟ್ಟಾರೆ ವಿಲನ್ ಪಾತ್ರಗಳು, ಕೆಟ್ಟವರೆಲ್ಲ ಹೀಗೆಯೇ ಕಪ್ಪಗಿನ, ವಿಕಲಾಂಗತೆಯ ಕುರೂಪಿ ಮನುಷ್ಯರಂತೆಯೇ ಚಿತ್ರಿಸುತ್ತಾ ಹೋಗುವುದು ಸಾಮಾನ್ಯವೆನಿಸಿಬಿಟ್ಟಿದೆ. ಅದನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಕುರೂಪಿಗಳೆಲ್ಲ ಕೆಟ್ಟವರು, ಬೆಳ್ಳಗಿನ ಸುಂದರಾಂಗರೆಲ್ಲ ಸುಭಗರೆಂಬ ಸಂದೇಶವನ್ನು ಸಾರುವ ಪ್ರಕ್ರಿಯೆ ಇದೆನ್ನಬಹುದು. ಈ 'ಲೆಕ್ಕಾಚಾರ' ಮೊನ್ನೆ ಭರ್ಜರಿಯಾಗಿ ಬಿಡುಗಡೆಯಾದ 'ಬಾಹುಬಲಿ'ಯಲ್ಲೂ ಪ್ರಕಟಗೊಂಡಿದೆ.


ಶೂಟಿಂಗ್‌ಗಾಗಿ ಅತ್ಯಂತ ದೀರ್ಘ ಕಾಲದ ಸಮಯ ತೆಗೆದುಕೊಂಡು ಬರೀ ಸೆಟ್‌ನ ಪ್ಲಾನ್‌ಗಾಗಿಯೇ ಬಹಳಷ್ಟು ಸಮಯವನ್ನು ವ್ಯಯಿಸಿರುವ ದೊಡ್ಡ ಬಜೆಟ್‌ನ ಈ ಚಿತ್ರದ ಹೀರೋ ಪಡೆಯ ವಿರುದ್ಧ ದಂಡೆತ್ತಿ ಬರುವ ವಿರೋಧಿ ಪಡೆಯ ಮತ್ತೊಂದು ಸೈನ್ಯವನ್ನು ಇದೇ ಮನಸ್ಥಿತಿಯಲ್ಲಿ ಅತ್ಯಂತ ಕೆಟ್ಟದಾಗಿ ಚಿತ್ರಿಸಲಾಗಿದೆ. ಸ್ನಾನವನ್ನೇ ಕಾಣದಂತಹ ಕಪ್ಪುಮೈಯ ಕೆದರಿದ ಕೂದಲಿನ, ಒಂದು ಕಣ್ಣಿನ, ಕಪ್ಪು ಹಲ್ಲುಗಳ ವಿಲನ್‌ಗಳು ಕೆಟ್ಟದಾಗಿ ಒದರುತ್ತಾ ಹೀರೋ ಪಡೆಯ ಮೇಲೆ ದಾಳಿಗೆ ಬರುತ್ತಾರೆ. ಇವರ ಬಟ್ಟೆಗಳೋ ಕೊಳಕಾದ ಗೋಣಿ ಚಂಪೆಗಳು. ಪ್ಲಾನ್‌ಗಳಿಗೆ ಹೆಸರಾದ ರಾಜಮೌಳಿಯೂ ಹೀರೋ ಎಂದರೆ ಹೀಗೆ, ವಿಲನ್ ಎಂದರೆ ಹೀಗೆ ಎನ್ನುವ ಸಿದ್ಧ ಸೂತ್ರವನ್ನೇ ಅತಿಯಾಗಿ ನೆಚ್ಚಿ ಸಹಜತೆಯನ್ನು ಮರೆತಿರುವುದು ಇಲ್ಲಿ ಸ್ಪಷ್ಟವಿದೆ (ಹೀರೋ ಪಡೆಗೆ ಇನ್ನಿಲ್ಲದ ವೈಭವ, ಆಭರಣ, ಉಡುಪು ಇತ್ಯಾದಿಯಾದರೆ ಎದುರುಪಡೆಗೆ ತೀರಾ ತದ್ವಿರುದ್ಧ).

ಇನ್ನೂರೈವತ್ತು ಕೋಟಿ ಬಜೆಟ್ಟಿನ ಈ ಸಿನಿಮಾದಲ್ಲಿ ಬಹುಶಃ ಈ ವಿಲನ್‌ಗಳ ಮೈಬಣ್ಣ, ಕೂದಲ ಜಿಗುಟು ಧೂಳಿನ ಬಣ್ಣ ಅವರ ಬಟ್ಟೆಗಳಾದ ಗೋಣಿ ಚಂಪೆಗಳ ಬಣ್ಣಕ್ಕಾಗಿ ಕನಿಷ್ಟವೆಂದರೆ 1 ಕೋಟಿಗೂ ಹೆಚ್ಚಿನ ಬೆಲೆಯ ಮಡ್ ಆಯಿಲನ್ನು ಬಳಸಿರಬಹುದೆಂದು ನನ್ನ ಅಂದಾಜು (ತಮಾಷೆಗಾಗಿ).

ಬೇಸರದ ಸಂಗತಿಯೆಂದರೆ ಹೀರೋಗಳು ಹೀಗೆಯೇ, ವಿಲನ್‌ಗಳು ಹೀಗೆಯೆ ಎಂಬ ಈ ಸಿದ್ಧ ಚಿತ್ರಣ ಮಕ್ಕಳ ಕಥೆಯನ್ನೂ ಬಿಟ್ಟಿಲ್ಲವೆಂಬುವುದು. ಮಕ್ಕಳ ಕಾರ್ಟೂನ್ ಛೋಟಾ ಭೀಮ್‌ನಲ್ಲಿ ಬರುವ ಕಳ್ಳರ, ದರೋಡೆಕೋರರ ಪಾತ್ರಗಳೆಲ್ಲ ಕಪ್ಪು ಬಣ್ಣದವೇ. ಆದರೆ ಹೀರೋಗಳೆಲ್ಲ ಬೆಳ್ಳಗಿನವರು ಕೆಂಪಿನವರು. ಇದು ಮಕ್ಕಳಲ್ಲಿ ಬಣ್ಣ ರೂಪಗಳನ್ನು ನೋಡಿ ಮನುಷ್ಯರನ್ನು ಅಳೆಯುವ ಕೆಟ್ಟ ಚಾಳಿಯನ್ನು ಬೆಳೆಸುತ್ತದೆ. ಆದರೆ ವಸ್ತುಸ್ಥಿತಿ ಹೀಗಿರಬೇಕೆಂದಿಲ್ಲ. ಕೃಷ್ಣ ದೇವರಾಯ ಮತ್ತು ಅಬ್ಬಕ್ಕ ರಾಣಿಯನ್ನು ಬೆಳ್ಳಗಿನ ಸದೃಢ ಮೈಕಟ್ಟಿನವರೆಂದು ಚಿತ್ರಗಳಲ್ಲಿ ನಾವು ಬಿಂಬಿಸಿದ್ದರೆ ಇತಿಹಾಸದ ದಾಖಲೆ ಹೇಳುವ ಸಂಗತಿಯೇ ಬೇರೆಯದು. ಈ ಬಣ್ಣ ಹಾಗು ರೂಪದ ದೃಷ್ಟಿಯಲ್ಲಿ ಜನರನ್ನು ಅಳೆಯುವಂತಿದ್ದರೆ ಕ್ರಿಮಿನಲ್ ಚಾರ್ಲ್ಸ್ ಶೋಭರಾಜ್‌ನಂತವರನ್ನು ನಾವೆಲ್ಲ ಪೂಜೆ ಮಾಡಬೇಕಿತ್ತು, ಕ್ರಿಯೇಟಿವ್ ಡೈರೆಕ್ಟರ್ ರಾಜಮೌಳಿ ಈ ಚಿತ್ರದ ಮುಂದಿನ ಭಾಗದಲ್ಲಾದರೂ ಇಂತಹ ಆಭಾಸ ಆಗದಂತೆ ನೋಡಿಕೊಳ್ಳಲಿ.

-ಅವಿನಾಶ್ ಎಮ್.ಎಸ್. ನೆಲ್ಲಿಕಾರ್

'ಪುರಾಣದ ಹೂರಣ'ದಲ್ಲಿ ಯೋಗೇಶ್ ಮಾಸ್ಟರ್ ಅವರು ಪುರಾಣಗಳಲ್ಲಿಯ ಸುಪಾರಿ ಸುಂದರಿಯರ (ಲಂಕೇಶ್- ಜುಲೈ 22) ಬಗ್ಗೆ ಬರೆದಿರುವುದು ಯುಕ್ತವಾಗಿದೆ. ಪುರಾಣದ ಸುಪಾರಿ ಸುಂದರಿಯರು ಈಗಿನ ಆಧುನಿಕ "ಹನಿ ಟ್ರ್ಯಾಪ್" (Honey Trap) ಚೆಡಗಿಯರಿಗೆ ಸಮನಾಗಿದ್ದರು ನಿಜ. ನರಕಾಸುರನನ್ನು ಕೃಷ್ಣನು ತನ್ನ ಸುರಸುಂದರ ಹೆಂಡತಿಯಾದ ಸತ್ಯಭಾಮೆ ಮೂಲಕ ಹನಿ-ಟ್ರ್ಯಾಪ್ ಮಾಡಿ ಕೊಂದಿದ್ದು ಹಾಗೂ ಭಸ್ಮಾಸುರನನ್ನು ಮೋಹಿನಿ ಎಂಬ ವಿಷಕನ್ಯೆ ಮೂಲಕ ಕೊಂದಿದ್ದು ನಿಜವಿರಬಹುದು. ಆದರೆ ದುರ್ಗೆ, ಕಾಳಿ ದೇವಿಯರ ವರಸೆ ಮಾತ್ರ ಹನಿ ಟ್ರ್ಯಾಪ್ ಆಗಿರಲಿಲ್ಲ, ಅವರು ಮಾಡಿದ್ದು ಮುಗ್ಧ ಬುಡಕಟ್ಟು ಜನರ ನಂಬಿಕೆ ಸಂಸ್ಕೃತಿಗಳ ದುರುಪಯೋಗ. ಅಂದರೆ ದ್ರಾವಿಡ ಮೂಲದ ಬುಡಕಟ್ಟು ಜನರು ಮಾತೃ ಪ್ರಧಾನ ಸಂಸ್ಕೃತಿಯವರಾಗಿದ್ದರಿಂದ ಅವರು ಮಹಿಳೆಯರಿಗೆ ವಿಪರೀತ ಗೌರವ ಕೊಡುತ್ತಿದ್ದರು. ಮೇಲಾಗಿ ಪ್ರಕೃತಿ ಪ್ರಿಯರಾದ ದ್ರಾವಿಡರು ಸಾಕುಪ್ರಾಣಿ ಹಾ[...] ಕಾಡುಪ್ರಾಣಿಗಳಿಗೂ ಬಹಳ ದಯೆ ತೋರಿಸುತ್ತಿದ್ದ[...] ಅವುಗಳನ್ನು ವಿನಾಕಾರಣ ಕೊಲ್ಲುತ್ತಿರಲಿಲ್ಲ, ಇದ[...] ಗಮನಿಸಿದ ಆರ್ಯನ್ ಆಕ್ರಮಣಕಾರರು ಹೆಂಗಸರ[...] ಸಿಂಹ ಹುಲಿ ಆನೆಗಳ ಮೇಲೆ ಕುಳ್ಳಿರಿಸಿ ಅವರ[...] ಮುಂದಿಟ್ಟುಕೊಂಡು ಹಾಗೂ ಗಂಡಸರು ಹಲ್ಲು[...] ನಾಗರಹಾವನ್ನು ಕೊರಳಿಗೆ ಸೊಂಟಕ್ಕೆ ಸುತ್ತಿಕೊಂಡು ಸ್ಥಳೀ[...] ಬುಡಕಟ್ಟು ಜನಾಂಗಗಳ ಮೇಲೆ ದಾಳಿ ಮಾಡಿದ[...] ಹೆಂಗಸರ ಮೇಲೆ ಹಾಗೂ ಪ್ರಾಣಿಗಳ ಮೇಲೆ ಎಂ[...] ಶಸ್ತ್ರ ಎತ್ತುವುದಿಲ್ಲ ಎಂದು ದೀಕ್ಷಾಬದ್ಧರಾಗಿದ್ದ ದ್ರಾ[...] ಬುಡಕಟ್ಟು ಜನರು ಆರ್ಯನ್ನರ ಸೈನ್ಯದ ಮುಂಭಾಗದಲ್ಲಿ[...] ಹೆಂಗಸರನ್ನು ಮತ್ತು ಪ್ರಾಣಿಗಳನ್ನು ಕಂಡು ಆಯ[...] ಕೆಳಗೆ ಹಾಕಿದರು. ಹೀಗೆ ನಿರಾಯುಧರಾಗಿದ್ದ ದ್ರಾವಿಡ[...] ಕ್ರೂರ ಆರ್ಯನ್ನರು ಸುಲಭವಾಗಿ ಕೊಂದು ಹಾಕಿ[...] ಅಥವಾ ಬಂಧಿಸಿ ದಾಸರನ್ನಾಗಿ ಮಾಡಿದರು. ದ್ರಾವಿ[...] ಕೋಣ ಎಮ್ಮೆಗಳನ್ನು ಸಾಕುತ್ತಿದ್ದರು ಹಾಗೂ ಅ[...] ರಾಜನ ಲಾಂಛನ ಕೋಣವಾಗಿತ್ತು, ಹಾಗಾಗಿ ಆ[...] ಹೆಂಗುಸರು ಮೋಸದಿಂದ ದ್ರಾವಿಡರನ್ನು ಕೊಂದ[...] ಸಂಕೇತಿಸಲು ದುರ್ಗೆಯು ಕೋಣದ ತಲೆ[...] ಮಹಿಷಾಸುರನನ್ನು ಕೊಂದ ಕಥೆ ಕಟ್ಟಲಾಯಿತು. [...] ಆಗಲಿ ಆರ್ಯರು ಮಹಿಳೆಯರನ್ನು ಹಾಗೂ ಪ್ರಾಣಿಗ[...] ಮುಂದಿಟ್ಟುಕೊಂಡು ಬಂದು ದ್ರಾವಿಡರನ್ನು ಸೋಲಿ[...] ಅವರು ಮೂಲತಃ ಹೇಡಿಗಳು ಹಾಗೂ ಮಹಾ ಕುಟಿ[...] ಎಂದು ಸಾಬೀತಾಗುತ್ತದೆ. ಆ ಕುಟಿಲ ರಕ್ತ ಇಂದಿ[...] ವೈದಿಕರಲ್ಲಿ ಹರಿಯುತ್ತಿದ್ದು ಈಗಲೂ ಸಮಾಜವನ್ನು ತ[...] ಹಿಡಿತದಲ್ಲಿಟ್ಟುಕೊಳ್ಳಲು ಚಿತ್ರವಿಚಿತ್ರ ರೂಪದ ದೇವ[...] ಸೃಷ್ಟಿಸಿ ದೇವರಲ್ಲಿಯೂ ರಸಿಕತೆ ಕಾಮುಕತೆ ತುಂಬಿ ಕಟು[...] ಕಟ್ಟಿ ಪೂಜೆ ಭಕ್ತಿ ಇಷ್ಟಾರ್ಥ ಸಿದ್ಧಿಯೆಂಬ ಹುನ[...] ಶೂದ್ರರ ಮುಂದಿಟ್ಟಿದ್ದಾರೆ. ಹರೇಕೃಷ್ಣ ಪಂಥದ[...] ಕೃಷ್ಣನೊಟ್ಟಿಗೆ ಅವನ ಯಾವುದೇ ಹೆಂಡತಿಯನ್ನೂ ಇ[...] ಯಾವಾಗಲೂ ವಿವಾಹಿತೆ ಪ್ರೇಯಸಿಯಾದ ರಾಧೆಯ[...] ಇಡುವುದು ಅನೈತಿಕತೆಗೆ ವೈದಿಕರು ಅಧಿಕೃತ ಮ[...] ಒತ್ತಿದ್ದಕ್ಕೆ ಸಾಕ್ಷಿ. ಭಸ್ಮಾಸುರ ಮೋಹಿನಿ ಕಥೆ ಹಾ[...] ತುಳಸಿಯ ಕತೆ ಆರ್ಯ ಗಂಡಸರಲ್ಲಿ ಇದ್ದ ಮುಕ್ತ ಲೈಂಗಿ[...] ಸಾಕ್ಷಿ. ಇನ್ನು ಪುರಾಣಕಾಲದ ವೈದಿಕರು ಪ್ರಾಣಿಗ[...] ಮುಂದಿಟ್ಟುಕೊಂಡು ಬಂದು ದ್ರಾವಿಡರನ್ನು ಮ[...] ಮಾಡಿದಂತೆ ಈಗ ಅದೇ ಯುಕ್ತಿ ಮಾಡಿ ವೈದಿ[...]



ಹಸುವೆಂಬ ಪ್ರಾಣಿಯನ್ನು ಮುಂದಿಟ್ಟುಕೊ[...] ಗೋರಕ್ಷಣೆಯ ಹೆಸರಲ್ಲಿ ಹಿಂದೂ ಸಮಾಜವನ್ನು [...] ಮುಷ್ಟಿಯಲ್ಲಿ ಇಟ್ಟುಕೊಳ್ಳಲು ನೋಡುತ್ತಿದ್ದಾರೆ ಅ[...]

ಈ ವೈದಿಕರು ಹೇಳುವಂತೆ ಹಸುವಿನ ಮೈ[...] 33 ಕೋಟಿ ದೇವರಿದ್ದರೆ ನನ್ನ ಪೂಜೆಗೆ ಮೆಚ್ಚಿ[...] ಒಂದು ಸಣ್ಣ ಇಷ್ಟಾರ್ಥ ಪೂರೈಸಿದರೆ ಸಾಕು. ನಾ[...] ಆಸೆಬುರುಕನಲ್ಲ, ಹಾಗಾಗಿ ನನ್ನ ಅತಿ ಅಲ್ಪ ಬೇಡಿಕೆಯೆ[...] ಆಕಳ ಹೊಟ್ಟೆಯಲ್ಲಿರುವ ದೇವರುಗಳು ತಲಾ ಒಂದು[...] ಪೈಸೆ ಮಾತ್ರ ನನಗೆ ಕೊಟ್ಟರೆ ಸಾಕು ನನ್ನಲ್ಲಿ 33[...] ರೂಪಾಯಿ ಒಟ್ಟಾಗಿ ನನ್ನ ಜೀವನವಿಡೀ ಸುಖಿಯಾಗ[...] ನನಗೆ ಕೇವಲ ಒಂದೊಂದೇ ಪೈಸೆ ಸಾಕು ಗೋಮಾತೆ[...] ನಿನ್ನ ಹೊಟ್ಟೆಯಲ್ಲಿಯ ಎಲ್ಲಾ ದೇವರಿಗೆ ದಯ[...] ಶಿಫಾರಸು ಮಾಡು.

-ಜೆ.ರವಿಕಿರಣ, ಮೈಸ[...]

ವನಿತಾ ವಾಸು ಗಂಡ ಪರಾರಿ ಆದರೆ ನಮಗ[...] ಕಳೆದ ಸಂಚಿಕೆಯಲ್ಲಿ ಈ ಬಗೆಗಿನ ಲೇಖನ [...] ಬೇಸರವಾಯಿತು. ಸಮಾಜದಲ್ಲಿ ಎಷ್ಟೆಲ್ಲ ಕಷ್ಟನ[...] ಇರುವಾಗ ಅವುಗಳ ಕುರಿತು ಬರೆದು, ಚರ್ಚಿಸಲು [...] ಇದೆ ಎಂದೇ ಅಂದುಕೊಂಡಿದ್ದೆ. ಆದರೆ ನೀವು [...] ಬೇರೆಯ ಪತ್ರಿಕೆಗಳಂತೆ ಬರೆಯುವುದು ಚೆನ್ನಾಗಿಲ್ಲ, [...] ಮಾಡಿದ್ದು ಸರೀನಾ?

-ನಂದಶ್ರೀ. ಎ. [...]

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com [...] ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು [...] ಪ್ರತಿಕ್ರಿಯೆಗಳನ್ನು 9980331427 ನಂಬರ್[...] ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬ[...]

'ಪಾತ್ರಗಳು ಕಲಾವಿದೆಗೆ ಚಾಲೆಂಜ್ ಮಾಡಬೇಕು'

ಸ್ಯಾಂಡಲ್‌ವುಡ್ ಯುವ ನಾಯಕಿಯರಲ್ಲಿ ಗಮನ ಸೆಳೆದ ನಟಿ ಪಾವನಾ. ಓದಿದ್ದು ಪತ್ರಿಕೋದ್ಯಮ. ಅರಸಿ ಬಂದಿದ್ದು ಸಿನಿಮಾರಂಗ. ವ್ಯಾಪಾರಿ ಮತ್ತು ಕಲಾತ್ಮಕ ಸಿನಿಮಾಗಳಲ್ಲಿ ನಟಿಸುತ್ತಲೇ, ತಮ್ಮ ಡಿಮ್ಯಾಂಡ್ ಉಳಿಸಿಕೊಂಡಿದ್ದಾರೆ. ಅವರ ಅನಿಸಿಕೆಗಳು ಹೀಗಿವೆ:

** ಸಿನಿಮಾ ರಂಗಕ್ಕೆ ಬಂದಿದ್ದು ಹೇಗೆ?*

ನನ್ನ ಮೊದಲ ಸಿನಿಮಾ 'ಜಟ್ಟ'. ನಿರ್ದೇಶಕ ಗಿರಿರಾಜ್ ಆಡಿಷನ್ ಮಾಡಿದ್ದರು. ನಾನೂ ಅಲ್ಲಿಗೆ ಹೋಗಿದ್ದೆ, ಹಾಗೆ ಆಯ್ಕೆಯಾದೆ. ಆ ಚಿತ್ರಕ್ಕಾಗಿ ನಾವೆಲ್ಲ ರಿಹರ್ಸಲ್ ಮಾಡಿದೆವು. ಅಲ್ಲದೇ ರಂಗಭೂಮಿಗೆ ಸಂಬಂಧಪಟ್ಟ ಹಲವು ವಿಚಾರಗಳನ್ನು ಕಲಿತೆವು. ರಂಗಭೂಮಿ ಮತ್ತು ಸಿನಿಮಾ ಎರಡೂ ರಂಗಗಳನ್ನು ಅರ್ಥಮಾಡಿಕೊಳ್ಳಲು ಇದು ಸಾಧ್ಯ ಆಯಿತು.

** ಮೊದಲ ಸಿನಿಮಾದಲ್ಲೇ ನಿಮ್ಮದು ಡಿಗ್ಲಾಮ್ ಪಾತ್ರ. ಮೊದಲ ಸಿನಿಮಾ ಅಂತ ಹಾಗೆ ಒಪ್ಪಿಕೊಂಡಿರಾ?*

ಹಾಗೇನೂ ಇಲ್ಲ, ಎಲ್ಲ ಹುಡುಗಿಯರಂತೆ ನನಗೂ ಗ್ಲಾಮ್ ಪಾತ್ರಗಳನ್ನು ಮಾಡಬೇಕು ಎಂಬ ಆಸೆ ಇತ್ತು, ಆದರೆ, ಮೊದಲ ಸಿನಿಮಾದಲ್ಲೇ ನನಗೆ ಕಲಿಯುವ ಅವಕಾಶ ಸಿಕ್ಕಿತು. ಅಲ್ಲದೇ ಹೊಸ ನಿರ್ದೇಶಕರ ಜತೆ ಕೆಲಸ ಮಾಡುವುದು ಇನ್ನೂ ನನಗೆ ಇಷ್ಟ. ಹೀಗಾಗಿಯೇ 'ಜಟ್ಟ' ಸಿನಿಮಾವನ್ನು ಒಪ್ಪಿಕೊಂಡೆ. ಆನಂತರ ಸಿಕ್ಕಿದ್ದು 'ಗೊಂಬೆಗಳ ಲವ್' ಎಂಬ ಮತ್ತೊಂದು ವಿಭಿನ್ನ ಸಿನಿಮಾ. ಎರಡೂ ಸಿನಿಮಾಗಳು ನನಗೆ ಹಲವು ವಿಷಯಗಳನ್ನು ಕಲಿಸಿದವು. ಸಿನಿಮಾರಂಗದಲ್ಲಿ ಗಟ್ಟಿಯಾಗಿ ನೆಲೆಯೂರುವಂತೆ ಮಾಡಿದವು. ಡಿಗ್ಲಾಮ್ ಪಾತ್ರದ ಮೂಲಕ ಗುರುತಿಸಿಕೊಂಡರೂ, ಆಮೇಲೆ ಸಿಕ್ಕಿದ್ದೆಲ್ಲ ಅಪರೂಪದ ಪಾತ್ರಗಳೆ.

** ಈವರೆಗೂ ನಿಮ್ಮ ಸಿನಿಮಾ ಜರ್ನಿ ಹೇಗಿದೆ?*

ನಾನಂತೂ ಸಿಕ್ಕ ಅವಕಾಶವನ್ನು ಸದುಪಯೋಗಪಡಿಸಿಕೊಂಡಿದ್ದೇನೆ. ಕಲಾತ್ಮಕ ಮತ್ತು ಕಮರ್ಷಿಯಲ್ ಎರಡೂ ರೀತಿಯ ಸಿನಿಮಾಗಳಲ್ಲಿ ನಾನು ಕಾಣಿಸಿಕೊಂಡಿದ್ದೇನೆ. ಕಡಿಮೆ ಅವಧಿಯಲ್ಲೇ ನನಗೆ ಇಂತಹ ಪಾತ್ರಗಳು ಸಿಕ್ಕಿದ್ದು ಹೆಮ್ಮೆ ಅನಿಸುತ್ತದೆ. 'ಜಟ್ಟ'ದಲ್ಲಿ ಕಾಣಿಸಿಕೊಂಡಿದ್ದು ಕಾಡಿನ ಹುಡುಗಿಯಾಗಿ. 'ಜಟ್ಟ' ಮತ್ತು 'ಗೊಂಬೆಗಳ ಲವ್' ಸಿನಿಮಾ ತೆರೆಗೆ ಬಂದಾಗ, ನನಗೊಂದು ಇಮೇಜ್ ಕ್ರಿಯೇಟ್ ಆಯಿತು. ನಂತರ ದುನಿಯಾ ವಿಜಯ್, ಸೃಜನ್ ಲೋಕೇಶ್ ಅವರ ಜತೆ ನಟಿಸಿದೆ. ಎಲ್ಲ ಸಿನಿಮಾದಲ್ಲೂ ನನಗೆ ಖುಷಿ ಕೊಡುವಂತ ಪಾತ್ರಗಳು ಸಿಕ್ಕವು.



** ಡಿಗ್ಲಾಮ್ ಪಾತ್ರಗಳಿಗಷ್ಟೇ ನೀವು ಸೀಮಿತ ಎನ್ನುವ ಮಾತು ಕೇಳಿಬಂತಲ್ಲ?*

ಅದು ನನ್ನ ಮೊದಲ ಎರಡು ಸಿನಿಮಾಗಳಲ್ಲೂ ಅಂತಹ ಪಾತ್ರಗಳೇ ಸಿಕ್ಕಿದ್ದರಿಂದ, ಆ ಮಾತು ಕೇಳಬೇಕಾಯಿತು. ಆನಂತರ ಎಲ್ಲವೂ ಸರಿಹೋಯಿತು. ಸೃಜನ್ ಅಭಿನಯದ 'ಟಿಪಿಕಲ್ ಕೈಲಾಸ್' ಚಿತ್ರದಲ್ಲಿ ಸಖತ್ ಬೋಲ್ಡ್ ಮತ್ತು ಬ್ಯೂಟಿಫುಲ್ ಪಾತ್ರ ಮಾಡಿದೆ. ದುನಿಯಾ ವಿಜಯ್ ಜತೆಗಿನ ಸಿನಿಮಾದಲ್ಲೂ ಬೋಲ್ಡ್ ಪಾತ್ರವನ್ನೇ ಮಾಡಿದೆ.

** ನಿಮಗೆ ಎಂತಹ ಪಾತ್ರ ಇಷ್ಟ?*

ನನಗೆ ಎಂತಹ ಪಾತ್ರ ಕೊಟ್ಟರೂ ಅಭಿನಯಿಸೋಕೆ ಸಿದ್ಧ. ಗ್ಲಾಮ್ ಪಾತ್ರಗಳನ್ನು ತುಂಬಾ ಸುಲಭವಾಗಿ ನಿರ್ವಹಿಸಬಹುದು. ಅಭಿನಯಿಸಲು ಅವಕಾಶ ಇರುವ ಪಾತ್ರಗಳನ್ನು ನಿರ್ವಹಿಸುವುದು ಕಷ್ಟ.

** ರೋಲ್ ಮಾಡೆಲ್ ಯಾರು?*

ಒಳ್ಳೆಯದು ಅನಿಸಿದರೆ ಎಲ್ಲರಿಂದಲೂ ಸಲಹೆ ತೆಗೆದುಕೊಳ್ಳುವೆ. ನೋಡಿ ಕಲಿಯುವೆ. ಕನ್ನಡದಲ್ಲಿ ಡಾ.ರಾಜ್‌ಕುಮಾರ್ ಇಷ್ಟವಾಗುತ್ತಾರೆ. ಮಾಧುರಿ ದೀಕ್ಷಿತ್ ನನ್ನ ರೋಲ್ ಮಾಡೆಲ್. ■

ಮಾಧ್ಯಮರಂಗಕ್ಕೆ ಎದುರಾಗಿದೆ ಗಂಭೀರ ಸವಾಲು

ಒಂದು ಸುಳ್ಳನ್ನು ನೂರು ಬಾರಿ ಪುನರುಚ್ಚರಿಸುವ ಮೂಲಕ ಅದನ್ನು ಸತ್ಯವೆಂದು ಬಿಂಬಿಸಿ, ಚೌಕಾಕೃತಿಯನ್ನು ವೃತ್ತವೆಂದು ನಂಬಿಸಿ ಜನಸಾಮಾನ್ಯರ ಕಣ್ಣಿಗೆ ಮಂಕುಬೂದಿ ಎರಚಲು ಹೊರಟಿರುವ ಪ್ರಭುತ್ವವೊಂದಕ್ಕೆ ಮಾಧ್ಯಮ ಎಂಬ ಶಕ್ತಿಶಾಲಿ ಹತ್ಯಾರದ ಮೇಲೆ ಸಂಪೂರ್ಣ ನಿಯಂತ್ರಣ ಬೇಕೇಬೇಕು. ಏಕೆಂದರೆ ಆ ಮೂಲಕ ಅದು ಪ್ರಜಾಭಿಪ್ರಾಯಗಳನ್ನು ತನಗೆ ಬೇಕಾದಂತೆ ರೂಪಿಸಿಕೊಳ್ಳಬಹುದಾಗಿದೆ. ಅಂತಿಮವಾಗಿ ತನ್ನ ಕುರ್ಚಿ ಅಲುಗಾಡದಂತೆ ಭದ್ರಪಡಿಸಿಕೊಂಡು ಮನಬಂದ ನೀತಿಗಳನ್ನು ಜಾರಿಗೊಳಿಸಬಹುದಾಗಿದೆ.

ಮೇ 2014ರಲ್ಲಿ ದೇಶದ ಆಡಳಿತದ ಚುಕ್ಕಾಣಿ ಹಿಡಿದ ಮೋದಿ ಸರ್ಕಾರಕ್ಕೆ ಸಂವಿಧಾನ, ಪ್ರಜಾತಾಂತ್ರಿಕ ವ್ಯವಸ್ಥೆ ಮತ್ತು ಆ ವ್ಯವಸ್ಥೆಯೊಳಗಿನ ಮಾನವಹಕ್ಕು, ಪರಿಸರ ಕಾಳಜಿ ಮೊದಲಾದ ಜನಪರ ಪ್ರಕ್ರಿಯೆಗಳ ಬಗ್ಗೆ ಆರಂಭದಿಂದಲೂ ಅನಾದರ. ತನ್ನ ಮೊದಲ ದಿನದಿಂದಲೆ ಅದು ನಮ್ಮ ಪ್ರಜಾಪ್ರಭುತ್ವದ ಪ್ರಮುಖಾಂಗಗಳಾದ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಮತ್ತು ಮಾಧ್ಯಮಗಳನ್ನು ತನ್ನ ಭದ್ರಮುಷ್ಟಿಯೊಳಗಿರಿಸುವ ಯತ್ನಗಳಿಗೆ ಚಾಲನೆ ನೀಡಿದೆ. ಇದರೊಂದಿಗೆ ಪ್ರಗತಿಪರ ಮತ್ತು ಜನಪರ ಹೋರಾಟಗಾರರನ್ನು ದಮನಿಸುವ ಯತ್ನಗಳೂ ಆರಂಭವಾಗಿವೆ. ಅತ್ತ ಸಚಿವಸಂಪುಟ ನಾಮಮಾತ್ರಕ್ಕೆ ಎಂದಾಗಿದೆ. ಸಚಿವರು ಮತ್ತು ಅವರ ಕಾರ್ಯಾಲಯಗಳು ನಿರ್ಧಾರಗಳನ್ನು ತೆಗೆದುಕೊಳ್ಳಲು ಸ್ವತಂತ್ರರಲ್ಲ, ಎಲ್ಲಾ ನಿರ್ಧಾರಗಳು ಪ್ರಧಾನಿ ಕಾರ್ಯಾಲಯದಿಂದಲೆ ಹೊರಬೀಳಬೇಕು ಎಂದಾಗಿದೆ. ಸರ್ಕಾರದಿಂದ ಕಣ್ಗಾವಲು ಹೆಚ್ಚಿದ್ದು ಗಡ್ಕರಿ, ರಾಜನಾಥ ಸಿಂಗ್ ಪ್ರಕರಣಗಳ ಬಳಿಕ ಎಲ್ಲಾ ಮಂತ್ರಿಗಳ ಮೇಲೂ ಕಣ್ಗಾವಲಿರಿಸಲಾಗಿದೆಯೆಂಬ ವರ್ತಮಾನಗಳಲ್ಲಿ ಹುರುಳಿಲ್ಲವೆಂದು ಹೇಳಲಾಗದು. ಲೋಕಸಭೆಯಲ್ಲಿ ಈಗಾಗಲೆ ಬಹುಮತ ಹೊಂದಿರುವ ಸರ್ಕಾರ ರಾಜ್ಯಸಭೆಯಲ್ಲೂ ಬಹುಮತಕ್ಕಾಗಿ ಎಂಥೆಂಥವರೊಂದಿಗೋ ರಾಜಕೀಯ ಹೊಂದಾಣಿಕೆಗಳನ್ನು ಮಾಡಿಕೊಂಡು ಸಂಸತ್ತನ್ನು ತನ್ನ ಕೈಗೊಂಬೆಯನ್ನಾಗಿ ಮಾಡಲು ಹೊರಟಿದೆ. ಕಾರ್ಯಾಂಗದ ಪ್ರಮುಖ ಹುದ್ದೆಗಳಲ್ಲಿ ಗುಜರಾತಿನ ಮೋದಿನಿಷ್ಠ ಅಧಿಕಾರಿಗಳನ್ನು ತಂದು ಕೂರಿಸಲಾಗಿದೆ. ಎನ್‌ಕೌಂಟರ್ ಪ್ರಕರಣಗಳಲ್ಲಿ ಜೈಲುಪಾಲಾಗಿದ್ದ ಹಲವಾರು ಪೊಲೀಸ್ ಅಧಿಕಾರಿಗಳು ತಮ್ಮ ಹಳೆ ಹುದ್ದೆಗಳಿಗೆ ಮರಳಿದ್ದಾರೆ; ಕೆಲವರಿಗೆ ಉದ್ಯೋಗಬಡ್ತಿಯೂ ದಕ್ಕಿದೆ! ಇದರಿಂದ ಇಡೀ ಪೊಲೀಸ್ ವ್ಯವಸ್ಥೆಗೆ ಏನು ಸಂದೇಶ ರವಾನಿಸಿದಂತಾಗಿದೆಯೆಂದು ಬಿಡಿಸಿ ಹೇಳಬೇಕಾಗಿಲ್ಲ. ನ್ಯಾಯಾಧೀಶರ ನೇಮಕಾತಿ ಆಯೋಗದ ಕಾಯಿದೆಯನ್ನು ತರಾತುರಿಯಲ್ಲಿ ಜಾರಿಗೆ ತಂದಿರುವುದರ ಹಿಂದೆ ಏನು ಉದ್ದೇಶ ಅಡಗಿರಬಹುದೆಂದು ನೀವೇ ಊಹಿಸಿ. ಇನ್ನು ಪ್ರಜಾಸತ್ತಾತ್ಮಕ ವ್ಯವಸ್ಥೆಯ ಜೀವಾಳಗಳಲ್ಲೊಂದೆಂದು ಪರಿಗಣಿಸಲ್ಪಟ್ಟಿರುವ ಮಾಧ್ಯಮ ರಂಗದಲ್ಲಿಯೂ ಆತಂಕಕಾರಿ ಬೆಳವಣಿಗೆಗಳಾಗುತ್ತಿವೆ. ಮಾಧ್ಯಮ ಒಳ್ಳೆಯದಿಂದಿದ್ದು ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಸಂರಕ್ಷಿಸುವ ಪ್ರಮುಖ ಅಂಗಗಳಲ್ಲಿ ಒಂದೆನಿಸಿರುವ ಮಾಧ್ಯಮವನ್ನು ತನ್ನ ಅಡಿಯಾಳಾಗಿಸಲು ಸರ್ಕಾರ ಏನೆಲ್ಲ ತಂತ್ರಗಳನ್ನು ಹೂಡತೊಡಗಿದೆಯೆಂದು ಅರಿತಾಗ ಯಾರಿಗಾದರೂ ಆತಂಕವಾಗದಿರದು.

ದೂರದರ್ಶನ, ಪ್ರಸಾರ ಭಾರತಿ, ಆಕಾಶವಾಣಿಯಂತಹ ಸರ್ಕಾರಿ ಮಾಧ್ಯಮಗಳು ಈಗಾಗಲೆ ಭಂಡ ಭಟ್ಟಂಗಿಗಳಾಗಿಬಿಟ್ಟಿರುವುದನ್ನು ನಾವೆಲ್ಲ ನೋಡಿಯೇ ಇದ್ದೇವೆ. ಸಮುದಾಯ ರೇಡಿಯೊಗಳ ಮೇಲೂ ನಿಯಂತ್ರಣ ಸಾಧಿಸಲಾಗಿದೆ. ಹೆಚ್ಚಿನ ಖಾಸಗಿ ಮಾಧ್ಯಮಗಳು ಕಾರ್ಪೊರೇಟ್ ಮಾಲಿಕರ ಕೈಲಿರುವುದು ಮೋದಿ ಸರ್ಕಾರದ ಪಾಲಿಗೆ ದೊಡ್ಡ ವರದಾನವಾಗಿ ಪರಿಣಮಿಸಿದೆ. ಉಳಿದ ಕೆಲವು ಬಂಡಾಯಕೋರರನ್ನು ಜಾಹೀರಾತು ಮತ್ತಿತರ ಪರೋಕ್ಷ ವಿಧಾನಗಳ ಮೂಲಕ ದಮನಿಸುವುದು ದೃಢಸಂಕಲ್ಪ ಮಾಡಿರುವವರಿಗೆ ಕಷ್ಟದ ಕೆಲಸವೇನಲ್ಲ. ಮಾಧ್ಯಮರಂಗದ ಮೇಲೆ ಭದ್ರಮುಷ್ಟಿ ಸಾಧಿಸುವ ದಿಕ್ಕಿನಲ್ಲಿ ಮೊದಲ ಹೆಜ್ಜೆ ಇಟ್ಟಿರುವ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಈಗಾಗಲೆ ಮಾಹಿತಿ ಸಂವಹನದ ನೀತಿಯೊಂದನ್ನು ಜಾರಿಗೊಳಿಸಿದೆ ಎನ್ನಲಾಗಿದೆ. ಜೊತೆಗೆ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಪ್ರತಿಯೊಂದು ಮಾಧ್ಯಮ ತಂಡವನ್ನೂ ಪೂರ್ತಿಯಾಗಿ ನವೀಕರಿಸಲಾಗಿದೆಯೆಂದು ತಿಳಿದುಬಂದಿದೆ.


ಮಾಧ್ಯಮಗಳು ಏನು ವರದಿ ಮಾಡಿವೆ, ಎಷ್ಟು ವರದಿ ಮಾಡಿವೆ ಎಂಬುದರ ಬಗ್ಗೆ ವರದಿಯೊಂದನ್ನು ತಯಾರಿಸಬೇಕೆಂಬ ಐಡಿಯ ಹೊಳೆದಿರುವುದು ಮಾಹಿತಿ ಮತ್ತು ವಿತ್ತ ಮಂತ್ರಿ ಅರುಣ್ ಜೇಟ್ಲಿ ಮತ್ತು ಮಾಹಿತಿ ಮತ್ತು ಪ್ರಸಾರ ಇಲಾಖೆಯ ಉಪಮಂತ್ರಿ ರಾಜ್ಯವರ್ಧನ್ ಸಿಂಗ್ ರಾಥೋಡ್‌ರಿಗೆ. ಸ್ವಚ್ಛ ಭಾರತ ಅಭಿಯಾನ, ಸರ್ಕಾರದ ಒಂದು ವರ್ಷದ ಸಾಧನೆ, ಅಂತಾರಾಷ್ಟ್ರೀಯ ಯೋಗ ದಿನಾಚರಣೆ, ಡಿಜಿಟಲ್ ಇಂಡಿಯಾ ಮೊದಲಾದ ಕಾರ್ಯಕ್ರಮಗಳ ಕುರಿತಂತೆ ಟಿವಿ ಚಾನಲ್‌ಗಳು, ಪತ್ರಿಕೆಗಳು, ಸಾಮಾಜಿಕ ಮಾಧ್ಯಮಗಳು ಮಾಡಿರುವ ವರದಿಗಳನ್ನು ಸೂಕ್ಷ್ಮ ಪರಿಶೀಲನೆಗೊಳಪಡಿಸಲಾಗಿದೆ. ಆ ಮೂಲಕ ಸಚಿವಾಲಯದ ನೂತನ ನೀತಿ ಎಷ್ಟರಮಟ್ಟಿಗೆ ಪರಿಣಾಮಕಾರಿಯಾಗಿದೆ ಎಂದು ತಿಳಿಯಲಾಗುತ್ತಿದೆ. ಇದುವರೆಗೆ ಭಾರತವನ್ನಾಳಿರುವ ಸರ್ಕಾರಗಳ ಪೈಕಿ ಯಾವೊಂದು ಸರ್ಕಾರವೂ ಇಂತಹದೊಂದು ಖತರ್‌ನಾಕ್ ಯೋಜನೆಗೆ ಕೈಹಾಕಿರಲಿಲ್ಲ ಎಂಬುದನ್ನು ಗಮನಿಸಬೇಕು.

ಮೋದಿ ಸರ್ಕಾರ ಒಂದು ವರ್ಷ ಪೂರೈಸಿದ ಸಂದರ್ಭದಲ್ಲಿ ಕಾರ್ಯೋದ್ಯುಕ್ತವಾದ ಸಚಿವಾಲಯ ದೇಶವಿದೇಶಗಳ ವಿವಿಧ ಮಾಧ್ಯಮಗಳಲ್ಲಿ ಬಂದ ಸುಮಾರು 900 ಕ್ಲಿಪ್ಪಿಂಗ್‌ಗಳನ್ನು ಒಟ್ಟು ಸೇರಿಸಿ ಒಂದು ವಿಸ್ತೃತ ವರದಿಯನ್ನು ತಯಾರಿಸಿದೆ. ಇನ್ನು ಯೋಗ ದಿನ ಮತ್ತು ಅದಕ್ಕೆ ಸಂಬಂಧಿಸಿದಂತೆ ಇದಕ್ಕೂ ಮುಂಚೆ ಪ್ರಸಾರ ಮಾಡಲಾದ ಕಾರ್ಯಕ್ರಮಗಳ ವಿವರಗಳನ್ನೂ ದಾಖಲಿಸಲಾಗಿದೆ. ಹೀಗೆ ವಿವಿಧ ಮಾಧ್ಯಮ ವರದಿಗಳು, ದೇಶವಿದೇಶಗಳಲ್ಲಿ ಬಂದಿರುವ ಪ್ರತಿಕ್ರಿಯೆಗಳು ಮುಂತಾದುವನ್ನೆಲ್ಲ ಕಲೆಹಾಕಲಾಗಿದ್ದು ಎಲ್ಲಾ ವರದಿಗಳು ನೇರವಾಗಿ ಪ್ರಧಾನಿ ಕಚೇರಿಯನ್ನು ತಲುಪಲಿವೆ.

ಸಚಿವಾಲಯದ ವರದಿ ಹೇಳುವಂತೆ ಯೋಗ ದಿನಾಚರಣೆ ಕುರಿತು ಸಾಮಾಜಿಕ ಮಾಧ್ಯಮಗಳು 'ಪಕ್ಷಾತೀತ ನಿಲುವು' ತಾಳಿದ್ದವು ಮತ್ತು ಅವುಗಳ ಪೈಕಿ ಶೇಕಡಾ 30ರಲ್ಲಿ ಒಳ್ಳೆಯ ಧನಾತ್ಮಕ ಪ್ರತಿಕ್ರಿಯೆಗಳು ಬಂದಿವೆ. 2 ಲಕ್ಷಕ್ಕೂ ಅಧಿಕ ಪ್ರತಿಕ್ರಿಯೆಗಳಲ್ಲಿ ಹೆಚ್ಚಿನವು ಧನಾತ್ಮಕ ಆಗಿದ್ದವು ಮತ್ತು ತಟಸ್ಥ ಆಗಿದ್ದವು; ಶೇಕಡಾ 33ರಷ್ಟು ಜನ 'ಯೋಗವನ್ನು ಅಂತಾರಾಷ್ಟ್ರೀಯ ಮಟ್ಟಕ್ಕೇರಿಸಿ ವಿಶ್ವದಾಖಲೆ ನಿರ್ಮಿಸಿದ ಮೋದಿ' ಬಗ್ಗೆ ಮೆಚ್ಚುಗೆ ಸೂಚಿಸಿದ್ದಾರೆ ಎನ್ನಲಾಗಿದೆ. ಶೇಕಡಾ 60 ಮಂದಿ ತಟಸ್ಥ ನಿಲುವು ತಾಳಿದ್ದರೆ ಶೇಕಡಾ 5ರಷ್ಟು ಜನರು ಕಾರ್ಯಕ್ರಮವನ್ನು ಟೀಕಿಸಿ ಅದು ಬರೀ ಪ್ರಚಾರದ ಸ್ಟಂಟ್, ಸರ್ಕಾರ ಆಡಳಿತದ ಮೇಲೆ ಕೇಂದ್ರೀಕರಿಸಬೇಕು ಎಂದಿದ್ದಾರಂತೆ. ಟ್ವೀಟ್‌ಗಳ ಮುಖಾಂತರ ಯೋಗ ದಿನಕ್ಕೆ ಪ್ರಚಾರ ಕೊಟ್ಟು ಬಳಕೆದಾರರನ್ನು ಪ್ರಭಾವಿಸಿದ "ಅತಿ ಶ್ರೇಷ್ಠ" ವ್ಯಕ್ತಿಗಳ ಹೆಸರುಗಳನ್ನು ಒಂದು ವಿಶೇಷ ಪಟ್ಟಿಯಲ್ಲಿ ನಮೂದಿಸಲಾಗಿದೆ.

ಯೋಗ ದಿನಾಚರಣೆ ಕುರಿತು ಮುದ್ರಣ ಮಾಧ್ಯಮಗಳಲ್ಲಿ ಪ್ರಕಟವಾಗಿರುವ ಹೆಡ್‌ಲೈನ್ ಸುದ್ದಿ ಮತ್ತು ಲೇಖನಗಳನ್ನು ಕಲೆಹಾಕಿ 80 ಪುಟಗಳ ವರದಿಯೊಂದನ್ನು ಸಿದ್ಧಪಡಿಸಲಾಗಿದೆ. ಜನರಿಂದ ಉತ್ತಮ ಧನಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗಿದೆಯಾದರೂ ಸ್ವಚ್ಛ ಭಾರತಕ್ಕೆ ಬಂದಷ್ಟು ಪ್ರತಿಕ್ರಿಯೆಗಳು ಇದಕ್ಕೆ ಬಂದಿಲ್ಲವೆಂದು ವರದಿ ಹೇಳುತ್ತದೆ. ವಿದೇಶಿ ಮಾಧ್ಯಮಗಳ ಕುರಿತಂತೆ ಪ್ರತ್ಯೇಕ ವರದಿಯೊಂದನ್ನು ತಯಾರಿಸಲಾಗಿದ್ದು ಅದರಲ್ಲಿ ಅಲ್ ಜಜೀರ ಮತ್ತು ವಾಲ್ ಸ್ಟ್ರೀಟ್ ಜರ್ನಲ್ 'ಭಾರತೀಯ ಸಂಪ್ರದಾಯವನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ತೆಗೆದುಕೊಂಡು ಹೋಗಿರುವ ಮೋದಿಯನ್ನು ಅಭಿನಂದಿಸಿರುವ ವರದಿಗಳೂ ಸೇರಿವೆ.





ಮಾಧ್ಯಮಗಳು 'ಸಚಿವಾಲಯದ' ಆದೇಶಗಳನ್ನು ಎಷ್ಟರಮಟ್ಟಿಗೆ ಪರಿಪಾಲಿಸಿವೆ ಎಂಬುದನ್ನು ತಿಳಿಯಲು ಒಂದು 'ಅನುಸರಣಾ ವರದಿ' ಕೂಡ ಸಿದ್ಧಗೊಂಡಿದೆ. ಇದಕ್ಕೋಸ್ಕರ ಜೂನ್ 16ರಿಂದ ಆರಂಭಿಸಿ ಜೂನ್ 21ರ ತನಕ 130 ಟಿವಿ ವಾಹಿನಿಗಳ ಪ್ರಸಾರದ ಮೇಲೆ ನಿಗಾ ಇರಿಸಲಾಗಿತ್ತು ಎನ್ನಲಾಗಿದೆ. ಸಚಿವಾಲಯದ ವರದಿಯಲ್ಲಿ 'ಯಾವೆಲ್ಲ ಚಾನಲ್‌ಗಳ ಮೇಲೆ ನಿಗಾ ಇರಿಸಲಾಗಿತ್ತೊ ಅವುಗಳ ಪೈಕಿ ಅಧಿಕಾಂಶ ಚಾನಲ್‌ಗಳು ತುಂಬಾ ಕವರೇಜ್ ಕೊಟ್ಟಿವೆ. ಬಹುತೇಕ ಚಾನಲ್‌ಗಳು ಪ್ರಚಾರದ ಅವಧಿಗಳಿಗೆ (ಸ್ಲಾಟ್) ತಾವು ಹೇಳಿದ್ದಕ್ಕಿಂತ ಹೆಚ್ಚು ಸಮಯಾವಕಾಶ ನೀಡಿವೆ' ಎಂದು ಹೇಳಲಾಗಿದೆ. ಈಶಾನ್ಯ ಭಾರತದ ಮತ್ತು ಉರ್ದು ಭಾಷೆಯ ಚಾನಲ್‌ಗಳು ಸಚಿವಾಲಯದ ಆದೇಶಗಳನ್ನು ಪೂರ್ತಿಯಾಗಿ ಪರಿಪಾಲಿಸಿವೆಯಂತೆ. ಒಂದು ಪ್ರತ್ಯೇಕ ಪಟ್ಟಿಯಲ್ಲಿ ನಿಗದಿತ ಸ್ಲಾಟ್‌ಗಳಿಗಿಂತ ಕಮ್ಮಿ ಸ್ಲಾಟ್‌ಗಳನ್ನು ಪ್ರಸಾರ ಮಾಡಿದ 14 ಚಾನಲ್‌ಗಳನ್ನು ಹೆಸರಿಸಲಾಗಿದೆ. ಯೋಗ ದಿನಾಚರಣೆಯನ್ನು ಪ್ರಸಾರ ಮಾಡದ ಸನ್ ಟಿವಿ, ಪಬ್ಲಿಕ್ ಟಿವಿ ಮೊದಲಾದ 4 ಚಾನಲ್‌ಗಳನ್ನು ಕರ್ತವ್ಯಲೋಪಿಗಳ ಪಟ್ಟಿಗೆ ಸೇರಿಸಲಾಗಿದೆ. ಅವುಗಳ ಕುರಿತು 300 ಪುಟಗಳ ವರದಿಯೊಂದನ್ನು ಸಿದ್ಧಪಡಿಸಲಾಗಿದೆ. ಈ ವರದಿಗೂ ಸನ್ ಟಿವಿಯ ಭದ್ರತಾ ಪರವಾನಗಿಗಳನ್ನು ರದ್ದುಪಡಿಸುವ ಪ್ರಸ್ತಾಪಕ್ಕೂ ನೇರ ಸಂಬಂಧವಿರುವಂತೆ ತೋರುತ್ತದೆ.

ಪ್ರಶ್ನೆ ಏನೆಂದರೆ ಸಚಿವಾಲಯದ ಈ ಉಪಕ್ರಮಗಳು ಮತ್ತು ಸನ್ ಟಿವಿ ಪ್ರಕರಣ ಭಾರತೀಯ ಮಾಧ್ಯಮರಂಗಕ್ಕೆ ಎಚ್ಚರಿಕೆಯ ಕರೆಗಂಟೆ ಆಗಲಿದೆಯೇ ಅಥವಾ ಕೇಡುಗಾಲಕ್ಕೆ ನಾಂದಿ ಆಗಲಿದೆಯೇ?

(ಆಧಾರ: *Daily News & Analysis* ವರದಿ)

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Friday R B P LANKESH, Kannada Weekly Price Rs. 15/- 05-08-2015 RNI No. KARKAN20



ಐರಾವತ ಸಿನಿಮಾದಿಂದ ನಿರ್ದೇಶಕ ಔಟ್

ದರ್ಶನ್ ಮತ್ತು ನಿರ್ದೇಶಕ ಎ.ಪಿ ಅರ್ಜುನ್ ಮಧ್ಯೆ ಜಗಳ ಆಗಿದ್ದು ನಿಜ. ಆದರೆ, ಆ ಜಗಳ ನಿರ್ದೇಶಕನನ್ನೇ ಸಿನಿಮಾದಿಂದ ದೂರ ಇಡುವಷ್ಟರಮಟ್ಟಿಗೆ ಹೋಗಿದ್ದು ವಿಪರ್ಯಾಸ. ಸದ್ಯ 'ಐರಾವತ' ಸಿನಿಮಾದ ಶೂಟಿಂಗ್ ವಿದೇಶದಲ್ಲಿ ನಡೆಯುತ್ತಿದೆ. ಎರಡು ಹಾಡುಗಳು ಚಿತ್ರೀಕರಣಕ್ಕಾಗಿ ಇಡೀ ತಂಡ ಸ್ವಿಡ್ಜರ್‌ಲ್ಯಾಂಡ್‌ನಲ್ಲಿದೆ. ಆದರೆ, ನಿರ್ದೇಶಕ ಅರ್ಜುನ್ ಮಾತ್ರ ಬೆಂಗಳೂರಿನಲ್ಲಿದ್ದಾರೆ.

ಈ ಹಿಂದೆಯೂ ದರ್ಶನ್ ಮತ್ತು ಅರ್ಜುನ್ ಮಧ್ಯೆ ಗಲಾಟೆ ನಡೆದಿತ್ತು, ಸಿನಿಮಾರಂಗದ ಹಲವರು ಸೇರಿ, ಅದನ್ನು ತಣ್ಣಗೆ ಮಾಡುವ ಪ್ರಯತ್ನ ಮಾಡಿದ್ದರು. ತಮ್ಮಿಬ್ಬರ ಮಧ್ಯೆ ಏನೂ ನಡೆದೇ ಇಲ್ಲ ಅನ್ನುವಂತೆ ಅರ್ಜುನ್ ಮಾತಾಡಿದ್ದರು. ಈಗ ಇಬ್ಬರ ಬಂಡವಾಳ ಬಯಲಾಗಿದೆ. ನಿರ್ದೇಶಕನನ್ನೇ ಹೊರಗಿಟ್ಟು ಸಿನಿಮಾ ಶೂಟಿಂಗ್ ಮಾಡುವ ಸಾಹಸ ನಡೆದಿದೆ. ಅರ್ಜುನ್ ಬೆಂಗಳೂರಿನಲ್ಲಿದ್ದರೆ, ಸಹ ನಿರ್ದೇಶಕ ಸಿನಿಮಾ ತಂಡದ ಜತೆ ವಿಮಾನ ಏರಿದ್ದಾರೆ.

ಶಿವರಾಜ್ ಶಿವಲಿಂಗ

ಶಿವರಾಜ್ ಕುಮಾರ್ ನಟಿಸುತ್ತಿರುವ, ಪಿ.ವಾಸು ನಿರ್ದೇಶನದ 'ಶಿವಲಿಂಗ' ಚಿತ್ರ ಡಿಸೆಂಬರ್‌ನಲ್ಲಿ ಸೆಟ್ಟೇರಿತ್ತು. 'ಆಪ್ತಮಿತ್ರ', 'ಆಪ್ತರಕ್ಷಕ' ರೀತಿಯಲ್ಲೇ ಈ ಸಿನಿಮಾ ಕೂಡ ಥ್ರಿಲ್ಲರ್ ಚಿತ್ರವಾಗಿದ್ದರಿಂದ, ಸಾಕಷ್ಟು ಕುತೂಹಲ ಕ್ರಿಯೇಟ್ ಮಾಡಿತ್ತು. ಈಗ ಸಿನಿಮಾದ ಬಗ್ಗೆ ಯಾವ ಮಾಹಿತಿಯೂ ಇಲ್ಲ, ಹಾಗಾದರೆ, ಸಿನಿಮಾ ಶೂಟಿಂಗ್ ನಿಲ್ಲಿಸಿದೆಯಾ? ಎಂಬ ಅನುಮಾನಕ್ಕೆ ಚಿತ್ರತಂಡ ಉತ್ತರಿಸಿದೆ. ಸದ್ದಿಲ್ಲದೇ ಬಹುತೇಕ ಚಿತ್ರೀಕರಣ ಮುಗಿಸಿದೆಯಂತೆ. ಹಾಡೊಂದರ ಶೂಟಿಂಗ್ ಬಾಕಿ ಇದೆ. ನಿರ್ದೇಶಕ ಪಿ.ವಾಸು ಹೊಸ ಸಿನಿಮಾದ ಸ್ಕ್ರಿಪ್ಟ್ ಬರೆಯುವಲ್ಲಿ ಬಿಜಿ ಆಗಿದ್ದಾರೆ. ನಿರ್ಮಾಪಕ ಕೆ.ಎ.ಸುರೇಶ್ ಮತ್ತೊಂದು ಸಿನಿಮಾ 'ಆರ್‌ಎಕ್ಸ್ ಸೂರಿ' ಬಿಡುಗಡೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಹೀಗಾಗಿ 'ಶಿವಲಿಂಗ' ಕೊಂಚ ತಡವಾಗಿದೆ.



ವೇದಿಕಾ ಸಿನಿಮಾದ ನಾಯಕಿ. ದೊಡ್ಡ ತಾರಾಬಳಗವೇ ಸಿನಿಮಾದಲ್ಲಿದೆ. ವಿ.ಹರಿಕೃಷ್ಣ ಸಂಗೀತದಲ್ಲಿ ಹಾಡುಗಳು ಮೂಡಿಬಂದಿದ್ದು ಹಾಡುಗಳ ಲೋಕಾರ್ಪಣೆ ಆಗಬೇಕಿದೆ.



ನಾಯಕಿಯರ ಜತೆ ಕುಣಿದ ಸತಿ

ಸತೀಶ್ ನೀನಾಸಂ ನಟಿಸಿ, ನಿರ್ಮಾಣ ಮಾಡುತ್ತಿರುವ 'ರಾಕೆಟ್ ... ಎರಡು ಹಾಡುಗಳ ಚಿತ್ರೀಕರಣ ಮೊನ್ನೆಯಷ್ಟೇ ನಡೆಯಿತು. ಹಾಡಿ... ಹಾಕಿದ್ದ ಅದ್ದೂರಿ ಸೆಟ್‌ಗಳಲ್ಲಿ ನಾಯಕಿಯರ ಜತೆ ಹೆಜ್ಜೆ ಹಾಕಿದರು ... ಈ ಹಾಡಿಗಾಗಿಯೇ ಆರು ಸೆಟ್‌ಗಳನ್ನು ಹಾಕಲಾಗಿತ್ತು, ಅಲ್ಲದೇ ... ನಾಯಕಿಯರೂ ಈ ಹಾಡಿನಲ್ಲಿ ಕಾಣಿಸಿಕೊಂಡಿದ್ದು ಮತ್ತೊಂದು ... ಶಿವಶಶಿ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಈ ಚಿತ್ರದಲ್ಲಿ ಕೇವಲ ... ಮಾತ್ರವಲ್ಲ, ದೃಶ್ಯವನ್ನೂ ಅಷ್ಟೇ ಅದ್ದೂರಿಯಾಗಿ ತೋರಿಸಿದ್ದಾರಂತೆ. ... ಸತೀಶ್ ವೃತ್ತಿ ಜೀವನದಲ್ಲಿ 'ರಾಕೇಟ್' ಮತ್ತೊಂದು ಬ್ರೇಕ್ ... ಎನ್ನುವ ಮಾತೂ ಕೇಳಿ ಬರುತ್ತಿದೆ.

ಪೂರ್ಣಚಂದ್ರ ತೇಜಸ್ವಿ ಅವರ ಸಂಗೀತ ಸಂಯೋಜನೆ ... ಪುನೀತ್ ರಾಜ್‌ಕುಮಾರ್ ಒಂದು ಹಾಡಿಗೆ ದನಿಯಾಗಿ...

ಮ್ಯೂಸಿಕ್ ಡೈರೆಕ್ಟರ್ ಲವ್ ಸ್ಟೋರಿ

'ಜೆಸ್ಸಿ' ಸಿನಿಮಾದ ಕತೆ ಸಂಗೀತ ನಿರ್ದೇಶಕ ಜೆಸ್ಸಿ ಗಿಫ್ಟ್ ಅವರ ಜೀವನದಲ್ಲಿ ನಡೆದ ಲವ್‌ಸ್ಟೋರಿ ಎಂಬ ಸುದ್ದಿ ಗಾಂಧಿನಗರದಲ್ಲಿ ಗಿರಕಿ ಹೊಡೆಯುತ್ತಿದೆ. ಈ ಕುರಿತು ಜೆಸ್ಸಿ ಗಿಫ್ಟ್ ಕೂಡ ಯಾವುದೇ ಪ್ರತಿಕ್ರಿಯೆ ನೀಡಿಲ್ಲ, ಆದರೆ, ಸಿನಿಮಾ ಟೀಸರ್‌ನಲ್ಲಿ ಮಾತ್ರ, ಜೆಸ್ಸಿ ಅವರ ಹೆಸರು ಬಳಕೆ ಆಗಿ ಕುತೂಹಲ ಮೂಡಿಸಿದೆ.

ಸಿನಿಮಾದಲ್ಲಿ ಪರೂಲ್ ಯಾದವ್ ಮತ್ತು ಧನಂಜಯ್ ಜೋಡಿ ಕಾಣಿಸಿಕೊಂಡಿದೆ. ಆದರೆ, ಈ ಕುರಿತು ನಿರ್ದೇಶಕ ಪವನ್ ಒಡೆಯರ್ ಬೇರೆ ರೀತಿಯಲ್ಲೇ ಪ್ರತಿಕ್ರಯಿಸಿದ್ದಾರೆ.

"ಟೀಸರ್‌ನಲ್ಲಿ ಎಲ್ಲವನ್ನೂ ಹೇಳುವುದಕ್ಕೆ ಆಗುವುದಿಲ್ಲ, ಕುತೂಹಲ ಹುಟ್ಟುವ ರೀತಿಯಲ್ಲಿ ಶೂಟ್ ಮಾಡಿದ್ದೇನೆ. ಇದೊಂದು ಶುದ್ಧ ಪ್ರೇಮಕತೆ ಇರುವ ಸಿನಿಮಾ. ಯಾರ ಜೀವನದಲ್ಲೂ ಇಂಥದ್ದೊಂದು ಕತೆ ನಡೆಯಬಹುದು" ಅಂತಾರೆ ಒಡೆಯರ್. ಸಿನಿಮಾದ ಕತೆಯ ಕುರಿತು ಅವರು ಏನೂ ಹೇಳುತ್ತಿಲ್ಲ, ಸಿನಿಮಾ ಬಂದ ನಂತರವೇ ಎಲ್ಲವೂ ತಾನಾಗಿಯೇ ಗೊತ್ತಾಗುತ್ತದೆ ಎನ್ನುತ್ತಾರೆ.

ದ್ವಿಭಾಷಾ ಸಿನಿಮಾದಲ್ಲಿ ಚಾಂದಿನಿ

ಕನ್ನಡ ಚಿತ್ರರಂಗದ ಮೂಲಕ ಬಣ್ಣದ ಜಗತ್ತಿಗೆ ಪಾದಾರ್ಪಣೆ ಮಾಡಿದ್ದ ಚಾಂದಿನಿ, ಈಗ ಹಾಲಿವುಡ್ ಮಟ್ಟದಲ್ಲೂ ಫೇಮಸ್ ಆಗಿದ್ದಾರೆ. ತಮಿಳು ಚಿತ್ರರಂಗದ ನಿರ್ದೇಶಕ ಭಾರತೀರಾಜಾರ ಶಿಷ್ಯ ವಸಂತ್ ನಿರ್ದೇಶನದ ಚಿತ್ರದಲ್ಲಿ ಸದ್ಯ ಚಾಂದಿನಿ ನಟಿಸುತ್ತಿದ್ದಾರೆ. ಅದು ದ್ವಿಭಾಷಾ ಚಿತ್ರ ಅನ್ನುವುದು ವಿಶೇಷ. ತಮಿಳು ಹಾಗೂ ಹಿಂದಿ ಭಾಷೆಗಳಲ್ಲಿ ಏಕಕಾಲಕ್ಕೆ ಸಿನಿಮಾ ನಿರ್ಮಾಣ ಆಗಲಿದ್ದು, ಅದಕ್ಕಾಗಿ ಚಾಂದಿನಿ ಕೂಡ ವಿಶೇಷ ತಯಾರಿ ನಡೆಸಿದ್ದಾರೆ.

ಸಿನಿಮಾದಲ್ಲಿ ಹಲವು ವಿಶೇಷತೆಗಳು ಇರಲಿವೆ. ಬಾಲಿವುಡ್, ಹಾಲಿವುಡ್ ಮತ್ತು ತಮಿಳು, ಹಿಂದಿ ಚಿತ್ರರಂಗದಿಂದ ಹೆಸರಾಂತ ತಂತ್ರಜ್ಞರು ಈ ಚಿತ್ರಕ್ಕಾಗಿ ಕೆಲಸ ಮಾಡಲಿದ್ದಾರೆ. ಅಲ್ಲದೇ ಹೆಸರಾಂತ ಕಲಾವಿದರೂ ಪಾತ್ರ ಮಾಡಲಿದ್ದಾರೆ.

ತಾನು ಯಾವುದೇ ರಂಗದಲ್ಲಿದ್ದರೂ ಕನ್ನಡದಿಂದ ಬಂದವಳೆಂದು ಹೇಳಿಕೊಳ್ಳುವ ಚಾಂದಿನಿ, ತುಂಬಾ ವರ್ಷಗಳ ನಂತರ ಮತ್ತೆ ಕನ್ನಡ ಸಿನಿಮಾರಂಗದಿಂದಲೇ ರೀ ಎಂಟ್ರಿ ಪಡೆದರು. ಮೊನ್ನೆಯಷ್ಟೇ ತೆರೆ ಕಂಡ 'ಬೈದಿ' ಸಿನಿಮಾದಲ್ಲಿ ಅವರು ವಿಶೇಷ ಪಾತ್ರ ನಿರ್ವಹಿಸಿದ್ದರು. ಈ ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಹೇಳಿಕೊಳ್ಳುವಂಥ ಗೆಲುವು ತರಲಿಲ್ಲ.

ಅಂದಹಾಗೆ ಹೊಸ ಸಿನಿಮಾ ಪ್ರಸಿದ್ಧ ಕಾದಂಬರಿ ಆಧರಿಸಿ ತಯಾರಾಗುತ್ತಿದೆ. ಯಾವ ಕಾದಂಬರಿ ಎಂಬುದನ್ನು ಚಿತ್ರತಂಡ ಗೌಪ್ಯವಾಗಿರಿಸಿದೆ.



ಚಾಂದಿನಿ



ಪಾರೂಲ್

'ದಬಾಂಗ್' ರಿಮೇಕ್‌ನಲ್ಲಿ ಗಣ...

ಗಣೇಶ್ ಸದ್ಯ 'ಪಟಾಕಿ' ಸಿನಿಮಾದ ಶೂ... ಬಿಜಿ ಆಗಿದ್ದಾರೆ. ಈ ಮಧ್ಯೆ ಮತ್ತೊಂದು ಹೊ... ಕೊಟ್ಟಿದ್ದಾರೆ. 'ಪಟಾಕಿ' ಮುಗಿಯುತ್ತಿದ್ದಂತೆಯೇ 'ದ... ಸಿನಿಮಾದ ರಿಮೇಕ್‌ನಲ್ಲಿ ಅವರು ಕಾಣಿಸಿಕೊಳ್ಳಲಿದ...

ಎಲ್ಲರಿಗೂ ಗೊತ್ತಿರುವಂತೆ ಸಲ್ಮಾನ್ ಖಾನ್‌ಗೆ ಸೂ... ಪಟ್ಟ ತಂದು ಕೊಟ್ಟ ಸಿನಿಮಾ 'ದಬಾಂಗ್'. ಈ ಸಿನಿ... ಕನ್ನಡದಲ್ಲಿ ರಿಮೇಕ್ ಆಗುತ್ತಿದೆ. ಈ ಹಿಂದೆ ಗಣೇ... ಸಿನಿಮಾದಲ್ಲಿ ಕಾಣಿಸಿಕೊಳ್ಳುತ್ತಾರೆ, ಎಂ.ಡಿ. ಶ್ರೀಧರ್ ನಿರ್ದೇಶನದಲ್ಲಿ ಚಿತ್ರ ಮೂಡಿಬರಲಿದೆ ಎಂಬ ಸುದ್ದಿ ಹಬ್ಬಿತ್ತು. ಈಗದು ಅರ್ಧ ಸುಳ್ಳಾಗಿದೆ. ಇನ್ನರ್ಧ ನಿಜವಾಗಿದೆ. ಶ್ರೀಧರ್ ನಿರ್ದೇಶನ ಮಾಡುತ್ತಿಲ್ಲ. ಆದರೆ, ಗಣೇಶ್ ನಟಿಸುವುದು ಪಕ್ಕಾ ಆಗಿದೆ.



ಇದರ ಜತೆ ಇನ್ನಷ್ಟು ಸುದ್ದಿ ಇದೇ ಸಿನಿಮ... ಹರಿದಾಡುತ್ತಿವೆ. 'ದಬಾಂಗ್' ಪಾತ್ರ ಗಣೇಶ... ಹೊಂದುವ ಸಿನಿಮಾ ಅಲ್ಲ ಎಂಬ ಗಾಸಿಪ... ಹರಡಿದೆ. ಸುದೀಪ್, ದರ್ಶನ್ ಅಥವಾ ... ಮಾಡಿದರೆ ಚೆನ್ನಾಗಿರುತ್ತದೆ ಎಂದು ಸಾ... ಜಾಲತಾಣದಲ್ಲೂ ಚರ್ಚೆ ನಡೆಯುತ್ತಿದೆ. ... ನಿರ್ಮಾಪಕರು ಮೂವರನ್ನೂ ನಟಿ... ಕೇಳಿಕೊಂಡಿದ್ದಾರೆ ಎಂಬ ಮಾಹಿತಿಯು... ಕೊನೆಯದಾಗಿ ಗಣೇಶ್‌ಗೆ ನಟಿಸುವ ಭಾಗ್ಯ ...

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667642
Fax : 26604536, E-mail :lankesh70@rediffmail.com